ಸಂಪುಟ: 06 ಸಂಚಿಕೆ: 197 ಪುಟಗಳು: 08 ಶುಕ್ರವಾರ 02 ಅಕ್ಟೋಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 + 91 8035621249 ₹5

**ಮುಂಜಾನೆ ಮಾತು**

ಪ್ರತಿ ವಸ್ತುವಿನ ಮಹತ್ವ ಮತ್ತು ಸೌಂದರ್ಯವು ಅದರ ಸಂದರ್ಭದಲ್ಲಿ ಅಡಗಿರುತ್ತದೆ. ಶಾಲಾ ಗಂಟೆ ಬೆಳಿಗ್ಗೆ 9ಕ್ಕೆ ಕೇಳಿದಾಗ ಕಿರಿಕಿರಿಯನ್ನಾಗಿಸುತ್ತದೆ, ಅದೇ ಶಾಲಾ ಗಂಟೆ ಸಂಜೆ 4ಕ್ಕೆ ಕೇಳಿದಾಗ ಸಂತೋಷವಾಗುತ್ತದೆ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ದುಬೈನಿಂದ ಟೆಲ್ ಅವೀವ್‌ಗೆ ಪ್ರಯಾಣಿಸುತ್ತಿದ್ದ ಫ್ಲೈದುಬೈ ವಿಮಾನದ ಕಾಕ್‌ಪಿಟ್‌ನಲ್ಲಿ ಕೋ-ಪೈಲಟ್‌ನಿಂದ ಚಾಕು ಇರಿತಕ್ಕೊಳಗಾಗಿಯೂ ಸಮಯಪ್ರಜ್ಞೆಯಿಂದ ಭೀಕರ ವಿಮಾನ ದುರಂತವನ್ನು ತಪ್ಪಿಸಿದ ಸಾಹಸಿ ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಅವರನ್ನು ಸೌದಿ ಅರೇಬಿಯಾದಿಂದ ದುಬೈಗೆ ಹೆಚ್ಚಿನ ವೈದ್ಯಕೀಯ ಚಿಕಿತ್ಸೆಗಾಗಿ ಏರ್‌ಲಿಫ್ಟ್ ಮಾಡಲಾಗಿದೆ. ದುಬೈನಿಂದ ಟೆಲ್ ಅವೀವ್‌ಗೆ ಹಾರಾಟ ನಡೆಸುತ್ತಿದ್ದ ಫ್ಲೈದುಬೈ ವಿಮಾನದಲ್ಲಿದ್ದ ಓಮನ್ ಮೂಲದ ಕೋ-ಪೈಲಟ್ ವಿಮಾನ ಪತನಗೊಳಿಸುವ ದುರುದ್ದೇಶದಿಂದ ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಅವರ ಮೇಲೆ ಭೀಕರ ದಾಳಿ ನಡೆಸಿದ್ದನು. ಕಾಕ್‌ಪಿಟ್ ನೆಲದ ಮೇಲೆ ರಕ್ತದ ಮಡುವಿನಲ್ಲಿ ಬಿದ್ದಿದ್ದರೂ ಧೈರ್ಯ ಕಳೆದುಕೊಳ್ಳದ ಸ್ಮಿತ್, ಅತ್ಯಂತ ಕಷ್ಟದಿಂದ ಕಾಕ್‌ಪಿಟ್ ಬಾಗಿಲನ್ನು ಅನ್‌ಲಾಕ್ ಮಾಡಿದ್ದರು. ಇದರಿಂದಾಗಿ ಹೊರಗಿದ್ದ ಪ್ರಯಾಣಿಕರು ಮತ್ತು ಸಿಬ್ಬಂದಿ ಒಳನುಗ್ಗಿ ದಾಳಿಕೋರನನ್ನು ಕಟ್ಟಿಹಾಕಲು ಸಾಧ್ಯವಾಯಿತು ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ದೃಢಪಡಿಸಿದ್ದಾರೆ. ಬಳಿಕ ವಿಮಾನದಲ್ಲೇ ಪ್ರಯಾಣಿಸುತ್ತಿದ್ದ ಫ್ಲೈದುಬೈ ಸಂಸ್ಥೆಯ ಇಬ್ಬರು ರಿಲೀಫ್ ಪೈಲಟ್‌ಗಳು ವಿಮಾನವನ್ನು ಸೌದಿ ಅರೇಬಿಯಾದ ತಬುಕ್ ನಗರದಲ್ಲಿ ಸುರಕ್ಷಿತವಾಗಿ ಇಳಿಸಿದ್ದರು. ಸೌದಿ ಅರೇಬಿಯಾದಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಗಳು ಕ್ಯಾಪ್ಟನ್ ಸ್ಮಿತ್ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದ್ದು, ಅವರ ಕುಟುಂಬ ಮತ್ತು ಸೌದಿ ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದ್ದಾರೆ ಎಂದು ತಿಳಿಸಿದ್ದಾರೆ. ತಬುಕ್ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ ನಂತರ ಇದೀಗ ಅವರನ್ನು ದುಬೈಗೆ ರವಾನಿಸಲಾಗಿದೆ. ವಿಮಾನದಲ್ಲಿದ್ದ 174 ಪ್ರಯಾಣಿಕರಲ್ಲಿ 166 ಜನರು ಇಸ್ರೇಲಿ ಪ್ರಜೆಗಳಾಗಿದ್ದು, ಎಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಫ್ಲೈದುಬೈ ದೃಢಪಡಿಸಿದೆ. ಇಸ್ರೇಲಿ ಅಧಿಕಾರಿಗಳು ಇದನ್ನು ''ಸಂಭಾವ್ಯ ಭಯೋತ್ಪಾದನಾ ದಾಳಿ ಎಂದು ಹೇಳಿದ್ದಾರೆ.

## ಔಷಧಿಗಳ ಖರೀದಿ ವೆಚ್ಚ- ಎಂಆರ್‌ಪಿಯಲ್ಲಿ ಅಜಗಜಾಂತರ ವ್ಯತ್ಯಾಸ; ಕೇಂದ್ರದ ಮಧ್ಯಸ್ಥಿಕೆಗೆ ರಾಜ್ಯ ಮನವಿ

• ಉದಯವಾಹಿನಿ, ಬೆಂಗಳೂರು

ಖಾಸಗಿ ಆಸ್ಪತ್ರೆಗಳು ಕೆಲವು ದುಬಾರಿ ಔಷಧಗಳು ಮತ್ತು ವೈದ್ಯಕೀಯ ಬಳಕೆಯ ಸಾಮಗ್ರಿಗಳನ್ನು ಖರೀದಿಸುವ ದರಗಳು ಹಾಗೂ ರೋಗಿಗಳಿಂದ ವಿಧಿಸಲಾಗುವ ಗರಿಷ್ಠ ಚಿಲ್ಲರೆ ದರಗಳ ನಡುವೆ ಭಾರಿ ವ್ಯತ್ಯಾಸವಿರುವುದು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಈ ಕುರಿತು ಕೇಂದ್ರ ಸರ್ಕಾರದ ಮಧ್ಯ ಪ್ರವೇಶವನ್ನು ಕೋರಿದೆ. ಇತ್ತೀಚೆಗೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ನಡೆಸಿದ ತಪಾಸಣೆಯ ಸಂದರ್ಭದಲ್ಲಿ ಔಷಧ ತಯಾರಿಕಾ ಕಂಪನಿಗಳು ಆಸ್ಪತ್ರೆಗಳಿಗೆ ಅತ್ಯಂತ ಕಡಿಮೆ ದರ ಔಷಧಿಗಳನ್ನು ಪೂರೈಸುತ್ತಿವೆ. ಆದರೆ ರೋಗಿಗಳಿಗೆ ಮಾತ್ರ ಮುದ್ರಿತ ಗರಿಷ್ಠ ಚಿಲ್ಲರೆ ಬೆಲೆಗೆ ಬಿಲ್ ಮಾಡಲಾಗುತ್ತಿದೆ. ಇದರ ಪರಿಣಾಮವಾಗಿ, ಔಷಧದ ಮೂಲ ಖರೀದಿ ದರಕ್ಕಿಂತ 10 ರಿಂದ 52 ಪಟ್ಟು ಹೆಚ್ಚಿನ ದರವನ್ನು ವಿಧಿಸಲಾಗುತ್ತಿದೆ. ಈ ಕುರಿತು ಮಾತನಾಡಿರುವ ಆರೋಗ್ಯ ಸಚಿವ ಯುಟಿ ಖಾದರ್, ಕ್ಯಾನ್ಸರ್ ಚಿಕಿತ್ಸೆ ಮತ್ತು ಹೆಚ್ಚಿನ ವೆಚ್ಚದ ಇತರೆ ಚಿಕಿತ್ಸೆಗಳ ವಿಷಯದಲ್ಲಿ ಈ ಸಮಸ್ಯೆ ಗಂಭೀರವಾಗಿದೆ. ಇಂತಹ ಚಿಕಿತ್ಸೆಗಳಿಗಾಗಿ ರೋಗಿಗಳು ತಮ್ಮ ಸ್ವಂತ ಜೇಬಿನಿಂದಲೇ ಹೆಚ್ಚಿನ ಹಣವನ್ನು ಭರಿಸಬೇಕಾಗುತ್ತದೆ ಎಂದಿದ್ದಾರೆ. ರೋಗಿಗಳ ರಕ್ಷಣೆ ನಮ್ಮ ಪ್ರಮುಖ ಉದ್ದೇಶ. ಲ್ಯಾಂಡಿಂಗ್ ವೆಚ್ಚ, ಮಾರ್ಜಿನ್ ದರ ಮತ್ತು ಅಂತಿಮವಾಗಿ ವಿಧಿಸುವ ಬೆಲೆಯಲ್ಲಿ ಪಾರದರ್ಶಕತೆ ಇದೆ. ವೈದ್ಯಕೀಯ ಉಪಕರಣಗಳು ಮತ್ತು ಬಳಕೆಯ ವಸ್ತುಗಳನ್ನು ಒಳಗೊಂಡ ರಾಷ್ಟ್ರೀಯ ಬೆಲೆ ನಿಗದಿ ಚೌಕಟ್ಟನ್ನು ರೂಪಿಸಲು ಆಗ್ರಹಿಸಲಾಗುತ್ತಿದೆ ಎಂದು ತಿಳಿಸಿದರು.

## ಎಸ್‌ಐಆರ್ ಅರ್ಜಿ ನಮೂನೆ-7 ದುರ್ಬಳಕೆ ಆರೋಪ: ತನಿಖೆಗೆ ಆಗ್ರಹಿಸಿ ಸಿಎಂ ಡಿಕೆಶಿ, ಸಚಿವರಿಂದ ಧರಣಿ

• ಉದಯವಾಹಿನಿ, ಬೆಂಗಳೂರು

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಅರ್ಜಿ ನಮೂನೆ-7 ದುರ್ಬಳಕೆ ಬಗ್ಗೆ ಆರೋಪ ಮಾಡಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ಸಂಪುಟದ ಸದಸ್ಯರು, ಚುನಾವಣಾ ಆಯೋಗ ಅಕ್ರಮವೆಸಗಿರುವ ಸಂಬಂಧ ತನಿಖೆಗೆ ಆದೇಶಿಸಬೇಕು ಆಗ್ರಹಿಸಿ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ಮುಂದೆ ಗುರುವಾರ ಧರಣಿ ಕುಳಿತಿದ್ದಾರೆ. ರಾಜ್ಯದಲ್ಲಿ ಈಗಾಗಲೇ ಎಸ್‌ಐಆರ್ ಪ್ರಕ್ರಿಯೆಯಲ್ಲಿ 1.07 ಕೋಟಿ ಮತದಾರರ ಹೆಸರು ಕೈಬಿಡಲಾಗಿದ್ದು, 45 ಲಕ್ಷ ಮತದಾರರಿಗೆ ನೋಟಿಸ್ ನೀಡಿದ್ದಾರೆ.

ಇಷ್ಟಾದ ಬಳಿಕವೂ ಈಗ ಬಿಜೆಪಿ ಕಾರ್ಯಕರ್ತರು ಸುಮಾರು 50 ಲಕ್ಷ ಮತದಾರರನ್ನು ಮತಪಟ್ಟಿಯಿಂದ ಡಿಲೀಟ್ ಮಾಡಿಸಲು ಷಡ್ಯಂತ್ರ ರೂಪಿಸಿದ್ದಾರೆ. ತಪ್ಪಿತಸ್ಥರ ವಿರುದ್ಧ ಮುಖ್ಯ ಚುನಾವಣಾಧಿಕಾರಿ ತನಿಖೆಗೆ ಆದೇಶಿಸಬೇಕು ಎಂದು ಮಾಧ್ಯಮಗೋಷ್ಠಿ ನಡೆಸಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒತ್ತಾಯಿಸಿದ್ದರು.

ಮಾಧ್ಯಮಗೋಷ್ಠಿ ನಡೆಸಿದ ಬಳಿಕ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಚಿವ ಸಂಪುಟದ ಸಚಿವರು ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಶೇಷಾದ್ರಿ ರಸ್ತೆಯಲ್ಲಿರುವ ಚುನಾವಣಾಧಿಕಾರಿ ಕಚೇರಿಗೆ ನಿಯೋಗ ತೆರಳಿ ದೂರು ನೀಡಿ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು. ದುರುಪಯೋಗ ಸಂಬಂಧ ಪರಿಶೀಲಿಸಲು ಎರಡು ದಿನಗಳ ಕಾಲ ಸಮಯವಕಾಶ ನೀಡುವಂತೆ ಚುನಾವಣಾಧಿಕಾರಿ ಅನ್ಬುಕುಮಾರ್ ವಿನಂತಿಸಿದರು.

## ಶಾಲೆಗಳಲ್ಲಿದ್ದ ಉರ್ದು ಈಗ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಬಂದು ಬಿಟ್ಟಿದೆ: ಛಲವಾದಿ

• ಉದಯವಾಹಿನಿ, ಬೆಂಗಳೂರು

ಶಾಲೆಗಳಲ್ಲಿದ್ದ ಉರ್ದು ಈಗ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಬಂದು ಬಿಟ್ಟಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳೀದ್ದಾರೆ. ವಿಧಾನಸೌಧದಲ್ಲಿ ಉರ್ದು ಹಬ್ಬ ಆಚರಣೆಗೆ ವಿಧಾನ ಪರಿಷತ್ ಛಲವಾದಿ ನಾರಾಯಣಸ್ವಾಮಿ ವಿರೋಧ ವ್ಯಕ್ತಪಡಿಸಿದ್ದಾರೆ. ವಿಧಾನಸೌಧದಲ್ಲಿ ಮಾತಾಡಿ, ಈ ಪದ್ಧತಿಯನ್ನು ಯಾಕೆ ಮಾಡುತ್ತಿದ್ದೀರಿ? ಇದು ಓಲೈಕೆ ರಾಜಕಾರಣ ಅಲ್ಲವೇ? ವೋಟ್ ಬ್ಯಾಂಕ್‌ಗಾಗಿ ಕಾಂಗ್ರೆಸ್ ಕರ್ನಾಟಕದ ಗೌರವ ಕಳೆಯುವ ಕೆಲಸ ಮಾಡುತ್ತಿದೆ ಅಂತ ಕಿಡಿಕಾರಿದರು. ಕಾಂಗ್ರೆಸ್ ಸರ್ಕಾರ ಎಂದರೆ ತಾಲಿಬಾನ್ ಸರ್ಕಾರ ಎಂದು ಜನ ಮಾತಾಡುತ್ತಿದ್ದಾರೆ. ನೀವು ಕೂಡಾ ಅದಕ್ಕೆ ಒತ್ತು ಕೊಡುವ ಕೆಲಸವನ್ನೇ ಮಾಡುತ್ತಿದ್ದೀರಿ. ನೀವು ಯಾಕೆ ಈ ಮನಸ್ಥಿತಿ ಬೆಳೆಸಿಕೊಂಡಿದ್ದೀರಿ? ಇದು ಖಾದರ್ ಈವೆಂಟ್. ಖಾದರ್ ನನಗಿಂತ ದೊಡ್ಡ ತೀರ್ಪುಗಾರ ಇಲ್ಲ ಎಂದು ತಿಳಿದುಕೊಂಡಿದ್ದಾರೆ. ವಿಧಾನಸೌಧದಲ್ಲಿ ಒಂದು ರೀತಿ ತಾಲಿಬಾನಿ ರೀತಿ ಖಾದರ್ ನಡೆದುಕೊಂಡಿದ್ದರು.

## ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣ: ಶಾಸಕ ವಿನಯ್ ಕುಲಕರ್ಣಿಗೆ 'ಸುಪ್ರೀಂ' ಸಂಕಷ್ಟ ಸಾಧ್ಯತೆ

• ಉದಯವಾಹಿನಿ, ಬೆಂಗಳೂರು

ಧಾರವಾಡದ ಬಿಜೆಪಿ ಮುಖಂಡ ಯೋಗೇಶ್‌ಗೌಡ ಕೊಲೆ ಕೇಸ್ ಸಂಬಂಧ ಶಾಸಕ ವಿನಯ್ ಕುಲಕರ್ಣಿ ಜಾಮೀನು ರದ್ದು ಕೋರಿ ಸಿಬಿಐ ಮತ್ತು ಯೋಗೇಶ್‌ಗೌಡ ಸಹೋದರ ಗುರುನಾಥಗೌಡ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂಕೋರ್ಟ್ ಮಹತ್ವದ ಅಭಿಪ್ರಾಯಪಟ್ಟಿದೆ. ಕೊಲೆಯಲ್ಲಿ ಭಾಗಿಯಾದವರು ವಿಧಾನಸಭೆಯಲ್ಲಿರಬೇಕೇ? ದರೋಡೆ ಮಾಡಿದವರೂ ವಿಧಾನಸಭೆಗೆ ಹೋಗಬಹುದೇ ಗಂಭೀರ ಆರೋಪಗಳಿರುವ ವ್ಯಕ್ತಿ ವಿಧಾನಸಭೆಯಲ್ಲಿರಲು ಅರ್ಹರೇ ಇಂಥವರನ್ನು ಅನರ್ಹ ಮಾಡಬೇಕೆಂದು ಹೇಳಿದೆ. ತಮ್ಮ ಆಕ್ಷೇಪಣೆ ಪರಿಗಣಿಸಲು ವಿನಯ್ ಪರ ವಕೀಲರ ಮನವಿ ವಿಚಾರಣೆ ಅ. 9ಕ್ಕೆ ಸುಪ್ರೀಂಕೋರ್ಟ್ ನಿಗದಿಪಡಿಸಿದೆ.

# ಕ್ಯಾಪ್ಟನ್ ಸ್ಮಿತ್ ಮಚ್ಚರ್ ಸಾಧನೆ ವಿಶ್ವನಾಯಕರ ಬಣ್ಣನೆ

- ಹೀರೋ ಆದ ಭಾರತ ಮೂಲದ ಪೈಲಟ್ ಸ್ಮಿತ್ ಮಚ್ಚರ್
- ಫ್ಲೈದುಬೈ ಸಾಹಸಿ ಭಾರತೀಯ ಪೈಲಟ್ ಸ್ಮಿತ್ ಮಚ್ಚಾರ್
- ರಾಜ್ಯ ಪ್ರಶಸ್ತಿ ಘೋಷಿಸಿದ ಗುಜರಾತ್ ಸರ್ಕಾರ
- ಭಾರತದ ಹೆಮ್ಮೆಯ ಪುತ್ರ

1 ಸೌದಿ ಅರೇಬಿಯಾದಿಂದ ದುಬೈಗೆ ಏರ್‌ಲಿಫ್ಟ್

2 ಭಾರತೀಯ ಪೈಲಟ್

3 ಜಾಗತಿಕ ನಾಯಕರಿಂದ ಅಭಿನಂದನೆಗಳ ಮಹಾಪೂರ.

### ಅಪಾರ ಧೈರ್ಯ ತೋರಿಸಿದರು



## ಅನುಭವಿ ಪೈಲಟ್ ಮಚ್ಚರ್

ಗಾಯಗೊಂಡ ಸ್ಮಿತ್ ಮಚ್ಚರ್ ಅವರು ಯುಎಇ ಮೂಲದ ಫ್ಲೈದುಬೈ ಸಂಸ್ಥೆಯಲ್ಲಿ ಡೈರೆಕ್ಟ್ ಎಂಟ್ರಿ ಕ್ಯಾಪ್ಟನ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ 13 ವರ್ಷಗಳ ವಾಣಿಜ್ಯ ವಿಮಾನಯಾನ ಅನುಭವವಿದ್ದು, ಸುಮಾರು 9,750 ಗಂಟೆಗಳ ಹಾರಾಟದ ಅನುಭವವಿದೆ.

ಫ್ಲೈದುಬೈ ಸೇರುವ ಮೊದಲು ಅವರು 11 ವರ್ಷಗಳ ಕಾಲ ಸ್ಪೈಸ್ ಜೆಟ್‌ನಲ್ಲಿ ಲೈನ್ ಟ್ರೈನಿಂಗ್ ಕ್ಯಾಪ್ಟನ್ ಆಗಿ ಸೇವೆ ಸಲ್ಲಿಸಿದ್ದರು. ಈ ಘಟನೆಯ ತನಿಖೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಫ್ಲೈದುಬೈ ಸಂಸ್ಥೆ ತಾತ್ಕಾಲಿಕವಾಗಿ ಇಸ್ರೇಲ್‌ನಿಂದ ತನ್ನ ವಿಮಾನ ಸೇವೆಗಳನ್ನು ಸ್ಥಗಿತಗೊಳಿಸಿದೆ.

• ಉದಯವಾಹಿನಿ, ನವದೆಹಲಿ

ಯುಎಇಯ ದುಬೈನಿಂದ ಇಸ್ರೇಲ್‌ಗೆ ತೆರಳುತ್ತಿದ್ದ FZ1073 ಫ್ಲೈದುಬೈ ವಿಮಾನದ ಪೈಲಟ್ ಆಗಿದ್ದ ಕ್ಯಾಪ್ಟನ್ ಸ್ಮಿತ್ ಸಹ ಪೈಲಟ್ ಜೊತೆಗಿನ ಸಂಘರ್ಷದಲ್ಲಿ ಗಾಯಗೊಂಡಿದ್ದರೂ ಸಹ ವಿಮಾನವನ್ನು ಸೌದಿ ಅರೇಬಿಯಾದ ತಬುಕ್ ಏರ್‌ಪೋರ್ಟ್‌ನಲ್ಲಿ ತುರ್ತು ಭೂ ಸ್ಪರ್ಶ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಮೂಲಕ ನೂರಾರು ಪ್ರಯಾಣಿಕರ ಪ್ರಾಣ ಉಳಿಸಿದ್ದಾರೆ. ಪ್ರಧಾನಿ ಮೋದಿ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸೇರಿದಂತೆ ಅನೇಕರು ಅವರನ್ನು ಹೀರೋ ಎಂದು ಕೊಂಡಾಡಿದ್ದಾರೆ. ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರು 13 ವರ್ಷಗಳಿಗೂ ಹೆಚ್ಚು ಕಾಲ ಹಾಗೂ ಸುಮಾರು 9,750 ಗಂಟೆಗಳ ಹಾರಾಟದ ಅನುಭವ ಹೊಂದಿರುವ ಭಾರತೀಯ ಮೂಲದ ಕಮರ್ಷಿಯಲ್ ಪೈಲಟ್ ಆಗಿದ್ದಾರೆ. ಇದರ ಜೊತೆಗೆ ಲೈನ್ ಟ್ರೈನಿಂಗ್ ಕ್ಯಾಪ್ಟನ್ ಆಗಿಯೂ ಕಾರ್ಯ ನಿರ್ವಹಿಸಿದ ಅನುಭವ ಹೊಂದಿದ್ದಾರೆ. ಅವರ ಲಿಂಕ್ಡ್‌ಇನ್ ಪ್ರೊಫೈಲ್ ಪ್ರಕಾರ, ಅವರು ಬೋಯಿಂಗ್ 737-800 ಮತ್ತು ಬೋಯಿಂಗ್ 737 ಮ್ಯಾಕ್ಸ್ 8/9 ವಿಮಾನಗಳನ್ನು ಚಲಾಯಿಸಿದ ಅನುಭವದೊಂದಿಗೆ ಸುಮಾರು 9,750 ಗಂಟೆಗಳ ಹಾರಾಟದ ಅನುಭವ ಅವರಿಗಿದೆ. ಜೂನ್ 2022ರಲ್ಲಿ ಡೈರೆಕ್ಟ್ ಎಂಟ್ರಿ ಕ್ಯಾಪ್ಟನ್ ಆಗಿ ಫ್ಲೈದುಬೈ ಸೇರುವ ಮೊದಲು ಮಚ್ಚರ್ ಅವರು ಭಾರತದ ವಿಮಾನಯಾನ ಸಂಸ್ಥೆಯಾದ ಸ್ಪೈಸ್‌ಜೆಟ್‌ನಲ್ಲಿ ಒಂದು ದಶಕಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದರು. ಅಲ್ಲಿ ಅವರು ಹಿರಿಯ ಕಮಾಂಡರ್ ಮತ್ತು ನಂತರ ಲೈನ್ ಟ್ರೈನಿಂಗ್ ಕ್ಯಾಪ್ಟನ್ ಆಗಿ ಕಾರ್ಯನಿರ್ವಹಿಸಿದ್ದರು. ಒಟ್ಟು 9,750 ಗಂಟೆಗಳಿಗೂ ಹೆಚ್ಚು ಕಾಲ ವಿಮಾನ ಚಲಾಯಿಸಿರುವ ಅನುಭವವನ್ನು ಹೊಂದಿದ್ದು, ಇದರಲ್ಲಿ 6,400 ಗಂಟೆಗಳಿಗೂ ಹೆಚ್ಚು ಕಾಲ ಅವರು ಮುಖ್ಯ ಪೈಲಟ್ ಆಗಿ ಕಾರ್ಯನಿರ್ವಹಿಸಿದ್ದಾರೆ.2011 ಜೂನ್‌ನಿಂದ ಹಿರಿಯ ಕಮಾಂಡರ್ ಆಗಿ ಸೇವೆ ಸಲ್ಲಿಸಿದ ನಂತರ, ಅವರು 2020 ನವೆಂಬರ್‌ನಲ್ಲಿ ಲೈನ್ ಟ್ರೈನಿಂಗ್ ಕ್ಯಾಪ್ಟನ್ ಆದರು. ಈ ಅವಧಿಯಲ್ಲಿ ಅವರು ಪೈಲಟ್‌ಗಳಿಗೆ ಲೈನ್ ತರಬೇತಿ, ಪರಿಶೀಲನೆ ಮತ್ತು ಮಾರ್ಗದರ್ಶನವನ್ನು ನೀಡಿದ್ದರು. ವಾಯುಯಾನ ಕ್ಷೇತ್ರದಲ್ಲಿನ ಅವರು ಬೋಯಿಂಗ್ 737ಎನ್‌ಜಿ ಮತ್ತು ಮ್ಯಾಕ್ಸ್ ವಿಮಾನಗಳ ಕಾರ್ಯಾಚರಣೆ, ಪೈಲಟ್ ತರಬೇತಿ, ಸಿಬ್ಬಂದಿ ಸಂಪನ್ಮೂಲ ನಿರ್ವಹಣೆ, ವಾಯುಯಾನದ ಮಾನದಂಡಗಳು, ನಿಯಮಗಳ ಅನುಸರಣೆ ಹಾಗೂ ಹೆಚ್ಚಿನ ಕೆಲಸದೊತ್ತಡವಿರುವ ಪರಿಸರಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ. ಮಚ್ಚರ್ ಆರಂಭದಲ್ಲಿ ತಮ್ಮ ಕುಟುಂಬದ ಜವಳಿ ವ್ಯವಹಾರಕ್ಕೆ ಸಂಬಂಧಿಸಿದ ಅಧ್ಯಯನಗಳನ್ನು ನಡೆಸಿದ್ದರು. ನಂತರ ವಿಮಾನಯಾನ ಸಂಬಂಧಿಸಿದ ಸೆಮಿನಾರ್‌ಗೆ ಹಾಜರಾಗಿದ್ದ ಹಿನ್ನೆಲೆಯಲ್ಲಿ ವಿಮಾನಯಾನದಲ್ಲಿ ತಮ್ಮ ಆಸಕ್ತಿಯನ್ನು ಬೆಳೆಸಿಕೊಂಡಿರುವ ಬಗ್ಗೆ ಪಾಡ್‌ಕಾಸ್ಟ್‌ನಲ್ಲಿ ತಿಳಿಸಿದ್ದಾರೆ. ಮಚ್ಚರ್ ಅವರು ನ್ಯೂಜಿಲೆಂಡ್‌ನಲ್ಲಿ ಪೈಲಟ್ ತರಬೇತಿಯನ್ನು ಪಡೆದಿದ್ದು, ಇದಕ್ಕಾಗಿ ಸುಮಾರು 16 ರಿಂದ 17 ಲಕ್ಷ ರೂ. ವೆಚ್ಚವಾಯಿತು ಎಂದು ಫಾಡ್ ಕಾಸ್ಟ್‌ವೊಂದರಲ್ಲಿ ಹೇಳಿಕೊಂಡಿದ್ದಾರೆ. ವಿಮಾನ ಚಾಲನೆ ಆರಂಭಿಸುವ ತಮ್ಮ ನಿರ್ಧಾರದ ಬಗ್ಗೆ ತಾಯಿ ಮೊದಲಿಗೆ ಚಿಂತಿತರಾಗಿದ್ದರು. ಆದರೆ ತಂದೆ ತಮ್ಮ ವೃತ್ತಿ ಆಯ್ಕೆಯನ್ನು ಸ್ವೀಕರಿಸಿದರು ಎಂದು ಸ್ಮರಿಸಿದ್ದಾರೆ. ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೆಲ್ ಅವಿವ್‌ನ ಬೆನ್ ಗುರಿಯನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುತ್ತಿದ್ದ ಬೋಯಿಂಗ್ 737 ವಿಮಾನದ ಮುಖ್ಯ ಪೈಲಟ್ ಆಗಿದ್ದ ಮಚ್ಚರ್, ತಮ್ಮ ಸಹ-ಪೈಲಟ್‌ನಿಂದ ಹಲ್ಲೆ ಮತ್ತು ಚಾಕು ಇರಿತಕ್ಕೆ ಒಳಗಾಗಿ ಗಾಯಗೊಂಡರು. ಸಹ ಪೈಲಟ್ ವಿಮಾನವನ್ನು ಪತನಗೊಳಿಸಲು ಯತ್ನಿಸುತ್ತಿದ್ದಾನೆ ಎಂಬುದನ್ನು ಅರಿತ ಅವರು, ಕಾಕ್‌ಪಿಟ್‌ನಲ್ಲಿ ಈ ಸಂಘರ್ಷ ಉಂಟಾದರೂ ಹೋರಾಡಿ 174 ಜನರ ಪ್ರಾಣ ಉಳಿಸಿದ್ದಾರೆ. ಅವರ ಧೈರ್ಯ ಹಾಗೂ ಅದ್ಭುತ ಸಮಯಪ್ರಜ್ಞೆಯು ಅನೇಕರ ಜೀವ ಉಳಿದಿದ್ದು, ಅವರು ಪ್ರಧಾನಿ ಮೋದಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದಲೂ ಮೆಚ್ಚುಗೆ ಪಡೆದಿದ್ದಾರೆ. ದೇಶಕ್ಕೆ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರ ಬಗ್ಗೆ ಹೆಮ್ಮೆ ಇದೆ. ಅವರ ವೀರಾವೇಶದ ಧೈರ್ಯ ಮತ್ತು ಅದ್ಭುತ ಸಮಯಪ್ರಜ್ಞೆಯು ನಮ್ಮೆಲ್ಲರ ಮನಸ್ಸನ್ನು ಆಳವಾಗಿ ಸ್ಪರ್ಶಿಸಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ಕ್ಯಾಪ್ಟನ್ ಮಚ್ಚರ್ ಅವರ ಶೌರ್ಯವು ನೂರಾರು ಜೀವಗಳನ್ನು ಉಳಿಸಲು ಮತ್ತು ದೊಡ್ಡ ದುರಂತವೊಂದನ್ನು ತಪ್ಪಿಸಲು ನೆರವಾಯಿತು ಎಂದು ಪ್ರಧಾನ ಮಂತ್ರಿ ಮೋದಿಯವರು ಶ್ಲಾಘಿಸಿದ್ದಾರೆ.



## ಭಯಾನಕ ಘಟನೆಯ ಎಳೆ-ಎಳೆಯಾಗಿ ಬಿಚ್ಚಿಟ್ಟ ಇಸ್ರೇಲ್ ಪ್ರಧಾನಿ

ಕಾಕ್‌ಪಿಟ್‌ನಿಂದ ಕೂಗಾಟ ಕೇಳಿದ ಬಳಿಕ 18ನೇ ಸಾಲಿನಲ್ಲಿ ಕುಳಿತಿದ್ದ ಇಸ್ರೇಲಿ ಪ್ರಯಾಣಿಕನೊಬ್ಬ ಮುಂಭಾಗಕ್ಕೆ ಧಾವಿಸಿದ್ದಾನೆ. ವಿಮಾನ ತೀವ್ರವಾಗಿ ಕೆಳಕ್ಕೆ ಜಾರುತ್ತಿದ್ದಾಗ ಆತ ದೂರಕ್ಕೆ ಎಸೆಯಲ್ಪಟ್ಟರೂ, ಕಾಕ್‌ಪಿಟ್‌ಗೆ ಪ್ರವೇಶಿಸುವಲ್ಲಿ ಯಶಸ್ವಿಯಾಗಿದ್ದಾನೆ.

ಕಾಕ್‌ಪಿಟ್ ಒಳಗೆ ಪ್ರವೇಶಿಸಿದ ಪ್ರಯಾಣಿಕ, ದಾಳಿ ನಡೆಸಿದ ಸಹ ಪೈಲಟ್ ವಿಮಾನದ ನಿಯಂತ್ರಣ ಸಾಧನಗಳನ್ನು ಬಳಕೆ ಮಾಡಲು ಯತ್ನಿಸಿದಾಗ ಆತ ಹಿಂದಿನಿಂದ ದಾಳಿಕೋರನನ್ನು ಹಿಡಿದು ಪರಿಸ್ಥಿತಿ ನಿಯಂತ್ರಣಕ್ಕೆ ತಂದಿದ್ದಾನೆ. ಬಳಿಕ ಮತ್ತೊಬ್ಬ ಇಸ್ರೇಲಿ ಪ್ರಯಾಣಿಕ ಹಾಗೂ ವಿಮಾನ ಸಿಬ್ಬಂದಿಯೊಬ್ಬರು ಸಹಾಯ ಮಾಡಿದ್ದಾರೆ.

### ಅಸಾಧಾರಣ ಸಾಹಸ

ಆ ಬಳಿಕ ಪ್ರಯಾಣಿಕರೊಂದಿಗೆ ಪ್ರಯಾಣಿಸುತ್ತಿದ್ದ ರಿಸರ್ವ್ ವಿಮಾನ ಸಿಬ್ಬಂದಿ ಕಾಕ್‌ಪಿಟ್‌ಗೆ ಪ್ರವೇಶಿಸಿ ವಿಮಾನವನ್ನು ಸ್ಥಿರಗೊಳಿಸಿದ್ದಾರೆ. ವಿಮಾನದ ರಡ್ಡರ್ ಹಾಗೂ ಬಾಲ ಭಾಗಕ್ಕೆ ಹಾನಿಯಾಗಿದ್ದರೂ, ವಿಮಾನವನ್ನು ಸುರಕ್ಷಿತವಾಗಿ ಸೌದಿ ಅರೇಬಿಯಾದ ತಬುಕ್ ವಿಮಾನ ನಿಲ್ದಾಣದಲ್ಲಿ ಇಳಿಸಲಾಗಿದೆ ಎಂದು ನೆತನ್ಯಾಹು ಹೇಳಿದ್ದಾರೆ. ವಿಶೇಷ ಪಡೆಗಳಲ್ಲಿ ಕೆಲಸ ಮಾಡಿದ ಅನುಭವ ನನಗಿದೆ. ಆದರೆ ಇಂತಹ ಘಟನೆ ನಾನು ಕಂಡಿಲ್ಲ, ಎಂದು ನೆತನ್ಯಾಹು ಅಚ್ಚರಿ ವ್ಯಕ್ತಪಡಿಸಿದ್ದಾರೆ.



ದೃಢಸಂಕಲ್ಪ ಅಪಾರ



ಟ್ರಂಪ್ ಉಲ್ಲೇಖ



ದಾಳಿಕೋರನ ವಿರುದ್ಧ ಪ್ರತಿರೋಧ

## ಮೋದಿ: ಸ್ಮಿತ್ ಮಚ್ಚರ್ ಹೀರೋ

ಭಾರತೀಯ ಪೈಲಟ್‌ನ ಧೈರ್ಯವನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಅವರು, ಅತ್ಯಂತ ಗಂಭೀರ ಅಪಾಯದ ನಡುವೆಯೂ ಗಾಯಗೊಂಡ ಸ್ಥಿತಿಯಲ್ಲಿ ಇತರರ ಜೀವ ರಕ್ಷಿಸಲು ಸ್ಮಿತ್ ಮಚ್ಚರ್ ತೋರಿದ ಧೈರ್ಯ ಮತ್ತು ದೃಢಸಂಕಲ್ಪ ಅಪಾರ ಎಂದು ಹೇಳಿದ್ದಾರೆ. ಅವರ ಸಾಹಸದಿಂದ ನೂರಾರು ಜೀವಗಳು ಉಳಿದಿದ್ದು, ಭಾರಿ ದುರಂತವೊಂದು ತಪ್ಪಿದೆ ಎಂದು ಮೋದಿ ಹೇಳಿದ್ದಾರೆ. ಭಾರತ ಸ್ಮಿತ್ ಮಚ್ಚರ್ ಬಗ್ಗೆ ಹೆಮ್ಮೆಪಡುತ್ತದೆ ಎಂದು ತಿಳಿಸಿ, ಅವರು ಶೀಘ್ರ ಚೇತರಿಸಿಕೊಳ್ಳಲಿ ಎಂದು ಹಾರೈಸಿದ್ದಾರೆ.

## ಟ್ರಂಪ್ ಕೂಡ ಮೆಚ್ಚುಗೆ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ಘಟನೆಯಲ್ಲಿ ಸ್ಮಿತ್ ಮಚ್ಚರ್ ಅವರ ಪಾತ್ರವನ್ನು ಶ್ಲಾಘಿಸಿದ್ದಾರೆ. ಇಸ್ರೇಲ್ ಪ್ರಧಾನಿ ನೆತನ್ಯಾಹು ಅವರೊಂದಿಗೆ ಮಾತನಾಡಿರುವುದಾಗಿ ತಿಳಿಸಿದ ಟ್ರಂಪ್, ದಾಳಿಯಿಂದ ಗಾಯಗೊಂಡಿದ್ದರೂ ಪರಿಸ್ಥಿತಿಯನ್ನು ಎದುರಿಸಿದ ಪೈಲಟ್‌ರನ್ನು ಹೀರೋ ಎಂದು ಬಣ್ಣಿಸಿದ್ದಾರೆ. ವಿಮಾನ ತೀವ್ರವಾಗಿ ಕೆಳಕ್ಕೆ ಕುಸಿಯುತ್ತಿದ್ದ ಸಂದರ್ಭದಲ್ಲಿ ಪ್ರಯಾಣಿಕರು ಹಾಗೂ ಇತರರು ಕಾಕ್‌ಪಿಟ್‌ಗೆ ತೆರಳಿ ವಿಮಾನವನ್ನು ನಿಯಂತ್ರಣಕ್ಕೆ ತರಲು ನೆರವಾದ ಘಟನೆಯನ್ನೂ ಟ್ರಂಪ್ ಉಲ್ಲೇಖಿಸಿದ್ದಾರೆ.

## ನೆತನ್ಯಾಹು: ನಿಜವಾದ ಹೀರೋ

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕೂಡ ಸ್ಮಿತ್ ಮಚ್ಚರ್ ಅವರನ್ನು ಶ್ಲಾಘಿಸಿದ್ದಾರೆ. ಗಾಯಗೊಂಡಿದ್ದರೂ ದಾಳಿಕೋರನ ವಿರುದ್ಧ ಪ್ರತಿರೋಧ ತೋರಿಸಿ ಕಾಕ್‌ಪಿಟ್ ಬಾಗಿಲು ತೆರೆಯುವ ಮೂಲಕ ಪ್ರಯಾಣಿಕರಿಗೆ ಒಳಬರಲು ಅವಕಾಶ ಮಾಡಿಕೊಟ್ಟರು ಎಂದು ನೆತನ್ಯಾಹು ಹೇಳಿದ್ದಾರೆ.

ಈ ಕ್ರಮದಿಂದ ಪ್ರಯಾಣಿಕರು ದಾಳಿಕೋರನನ್ನು ನಿಯಂತ್ರಿಸಲು ಸಾಧ್ಯವಾಯಿತು ಮತ್ತು 174 ಮಂದಿಯ ಜೀವ ಉಳಿಯಿತು ಎಂದು ಅವರು ಹೇಳಿದ್ದಾರೆ. ಸ್ಮಿತ್ ಮಚ್ಚರ್ ಅವರನ್ನು ನಿಜವಾದ ಹೀರೋ ಎಂದು ಕರೆದ ನೆತನ್ಯಾಹು, ಅವರು ಶೀಘ್ರ ಹಾಗೂ ಸಂಪೂರ್ಣವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸಿದ್ದಾರೆ.

## ಸಿಎಂ ಭೂಪೇಂದ್ರ ಪಟೇಲ್ ಹೇಳಿಕೆ

ಸಿಎಂ ಭೂಪೇಂದ್ರ ಪಟೇಲ್ ಹೇಳಿಕೆ ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಮಾಹಿತಿ ನೀಡಿರುವ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಇಸ್ರೇಲ್‌ಗೆ ತೆರಳುತ್ತಿದ್ದ ವಿಮಾನದ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಅವರ ಧೈರ್ಯವನ್ನು ಇಂದು ಇಡೀ ಜಗತ್ತೇ ಕೊಂಡಾಡುತ್ತಿದೆ. ದಾಳಿಯಿಂದಾಗಿ ರಕ್ತಸಿಕ್ತರಾಗಿದ್ದರೂ, ಅವರು 174 ಪ್ರಯಾಣಿಕರ ಪ್ರಾಣ ಉಳಿಸಲು ತೋರಿದ ಅಪ್ರತಿಮ ಧೈರ್ಯವು ಅತ್ಯಂತ ಸ್ಫೂರ್ತಿದಾಯಕ ಮತ್ತು ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮುಂದುವರೆದು, ಗುಜರಾತ್‌ನ ಈ ವೀರ ಪುತ್ರ ತಮ್ಮ ಸಾಹಸದ ಮೂಲಕ ಜಾಗತಿಕ ಮಟ್ಟದಲ್ಲಿ ಗುಜರಾತ್ ಮತ್ತು ದೇಶದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅವರ ರಕ್ತದಲ್ಲಿ ಹರಿಯುತ್ತಿರುವ ಗುಜರಾತಿ ಮನೋಭಾವವು ನಮ್ಮೆಲ್ಲರಲ್ಲಿ ಅಪಾರ ಹೆಮ್ಮೆಯನ್ನು ಮೂಡಿಸಿದೆ. ಅವರ ಅಸಾಧಾರಣ ಧೈರ್ಯ ಮತ್ತು ಮಾನವೀಯತೆಯನ್ನು



ಗೌರವಿಸಲು, ಗುಜರಾತ್ ಸರ್ಕಾರವು ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಅವರಿಗೆ 'ವಿಶಿಷ್ಟ ಗುಜರಾತ್ ಗರಿಮಾ ಪ್ರಶಸ್ತಿಯನ್ನು ನೀಡಿ ಗೌರವಿಸಲಿದೆ. ಅವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಇಡೀ ಗುಜರಾತ್ ಪ್ರಾರ್ಥಿಸುತ್ತಿದೆ. ದೇಶದ ನಾಗರಿಕರ ಸಹಾನುಭೂತಿ ಮತ್ತು ಪ್ರಾರ್ಥನೆಗಳು ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಅವರೊಂದಿಗಿವೆ ಎಂದು ಸಿಎಂ ಭೂಪೇಂದ್ರ ಪಟೇಲ್ ಹೇಳಿದ್ದಾರೆ.

# 'ಸರ್ಕಾರವೇ ಸಮಾಜದ ಸ್ವಾಸ್ಥ್ಯ ಹಾಳು ಮಾಡಲು ನಿಂತಂತೆ ಕಾಣ್ತಿದೆ': ಉರ್ದು ಹಬ್ಬ ಆಚರಣೆ ನಿರ್ಧಾರಕ್ಕೆ ನಾರಾಯಣಗೌಡ ಕಿಡಿ

## ಕನ್ನಡಿಗರ ಮೇಲೆ ಉರ್ದು ಭಾಷಿಕರನ್ನು, ಉರ್ದು ಭಾಷಿಕರ ಮೇಲೆ ಕನ್ನಡಿಗರನ್ನು ಎತ್ತಿಕಟ್ಟುವ ಹುನ್ನಾರ

• ಉದಯವಾಹಿನಿ, ಬೆಂಗಳೂರು

ವಿಧಾನಸೌಧದ ಗ್ರ್ಯಾಂಡ್‌ಸ್ಟೆಪ್ಸ್ ಮೇಲೆ ಉರ್ದು ಹಬ್ಬ ಆಚರಣೆಗೆ ಕರವೇಯಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಎಕ್ಸ್ ಖಾತೆಯಲ್ಲಿ ಈ ಬಗ್ಗೆ ಕರವೇ ಅಧ್ಯಕ್ಷ ನಾರಾಯಣಗೌಡ ಪೋಸ್ಟ್ ಮಾಡಿದ್ದು, ಇದೊಂದು ಅವಿವೇಕತನ, ಅಪ್ರಬುದ್ಧ, ದುರಹಂಕಾರದ ನಡೆ. ಏನು ಮಾಡಿದರೂ ನಡೆಯುತ್ತೆ ಎಂಬ ಅಧಿಕ ಪ್ರಸಂಗದ ನಿಲುವು. ಸರ್ಕಾರವೇ ಸಮಾಜದ ಸ್ವಾಸ್ಥ್ಯ ಹಾಳು ಮಾಡಲು ನಿಂತಂತೆ ಕಾಣ್ತಿದೆ. ಈ ಕಾರ್ಯಕ್ರಮ ನಡೆಯಲು ಯಾವುದೇ ಕಾರಣಕ್ಕೂ ಬಿಡಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ಕಾರಕ್ಕೆ ಮಾಡಲು ಬೇಕಾದಷ್ಟು ಕೆಲಸಗಳಿವೆ, ಅದನ್ನು ಮಾಡಲಿ. ಉರ್ದು ಹಬ್ಬದ ತಲೆಹರಟೆ ನಿರ್ಧಾರ ಎಲ್ಲಿಂದ ಬಂತು, ಕೇಳಿದ್ಯಾರು ಸ್ಪಷ್ಟವಾಗಿ ಹೇಳುವುದಾದರೆ ಕನ್ನಡಿಗರ ಮೇಲೆ ಉರ್ದು ಭಾಷಿಕರನ್ನು, ಉರ್ದು ಭಾಷಿಕರ ಮೇಲೆ ಕನ್ನಡಿಗರನ್ನು ಎತ್ತಿಕಟ್ಟುವ ಹುನ್ನಾರ ಇದು. ಉರ್ದು ವಾರ್ತೆ ಬಗ್ಗೆ ನಡೆದ ಕೋಮುಗಲಭೆ ಸರ್ಕಾರ ಮರೆತಿದೆಯೇ? ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿಕೊಳ್ಳುವುದು ಇದೇ ಅಲ್ಲವೇ? ಸಿಎಂ ಡಿಕೆಶಿ ಕೂಡಲೇ ಈ ಉರ್ದು ಹಬ್ಬದ ಹುಚ್ಚಾಟ ನಿಲ್ಲಿಸಬೇಕು. ಇಲ್ಲವಾದಲ್ಲಿ ನಾವೇ ಈ ಸರ್ಕಾರಕ್ಕೆ ಚಳಿ ಬಿಡಿಸಬೇಕಾಗುತ್ತದೆ. ಕೋಮುಗಲಭೆಗೆ ಸಂಚು ರೂಪಿಸಿರುವವರನ್ನು ದೂರ ಇಡಬೇಕು. ಈ ದುಸ್ಸಾಹಸಕ್ಕೆ ಇಳಿದರೆ ಅದರ ಪರಿಣಾಮ ಎದುರಿಸಬೇಕಾಗುತ್ತೆ ಎಂದು ನಾರಾಯಣಗೌಡ ಎಚ್ಚರಿಸಿದ್ದಾರೆ. ಶಾಲೆಗಳಲ್ಲಿದ್ದ ಉರ್ದು ಈಗ ವಿಧಾನಸೌಧದ ಮೆಟ್ಟಿಲುಗಳಿಗೆ ಬಂದಿದೆ ಎಂದೂ ಇಲ್ಲದ ಈ ಪದ್ಧತಿಯನ್ನು ಯಾಕೆ ಮಾಡುತ್ತಿದ್ದೀರಿ? ಇದು ಓಲೈಕೆ ರಾಜಕಾರಣ ಅಲ್ಲವೇ? ವೋಟ್ ಬ್ಯಾಂಕ್‌ಗಾಗಿ ಕರ್ನಾಟಕದ ಗೌರವ ಕಳೆಯುವ ಕೆಲಸ ಆಗ್ತಿದೆ. ಕಾಂಗ್ರೆಸ್ ಅಂದ್ರೆ ತಾಲಿಬಾನ್ ಸರ್ಕಾರ ಎಂದು ಜನ ಮಾತಾಡ್ತಿದ್ದಾರೆ. ನೀವು ಕೂಡ ಅದಕ್ಕೆ ಒತ್ತು ಕೊಡುವ ಕೆಲಸವನ್ನೇ ಮಾಡುತ್ತಿದ್ದೀರಿ ಎಂದು ಪರಿಷತ್? ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಪಸಂಖ್ಯಾತರನ್ನು ಓಲೈಸಲು ಕಾಂಗ್ರೆಸ್ ಇಂತಹ ನಿರ್ಧಾರಕ್ಕೆ ಮುಂದಾಗಿದೆ. ಕನ್ನಡ ರಾರಾಜಿಸಬೇಕಾದ ಜಾಗದಲ್ಲಿ ಉರ್ದು ಹಬ್ಬ ಆಚರಣೆ ಮೂಲಕ ಒಡೆದು ಆಳುವ ನೀತಿ ಅನುಸರಿಸಲಾಗುತ್ತಿದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಕೂಡ ಕಿಡಿಕಾರಿದ್ದಾರೆ.

ವಿಧಾನಸೌಧದ ಗ್ರ್ಯಾಂಡ್ ಸ್ಟೆಪ್ಸ್ ಮೇಲೆ ಉರ್ದು ಹಬ್ಬ ಆಚರಣೆಯನ್ನು ನೈಜ ಕನ್ನಡ ಪರ ಹೋರಾಟಗಾರರು ವಿರೋಧಿಸಲ್ಲ. ನನ್ನ ಮಾತೃ ಭಾಷೆ ಉರ್ದು, ಆದರೆ ನನ್ನ ಹೃದಯದ ಭಾಷೆ ಕನ್ನಡ. ನಾನೇನು ಕನ್ನಡದವನು ಅಲ್ವಾ ಎಂದು ಸಚಿವ ರಿಜ್ವಾನ್ ಅರ್ಷದ್ ಪ್ರಶ್ನಿಸಿದ್ದಾರೆ. ತುಳುಗೆ ಸ್ಥಾನಮಾನ ನೀಡಿದ್ವಿ, ಅದಕ್ಕೆ ವಿರೋಧ ವ್ಯಕ್ತಪಡಿಸಿಲ್ಲ. ಕನ್ನಡಿಗರು ವಿಶಾಲ ಹೃದಯ ಹೊಂದಿರುವವರು. ಸಮಾಜವನ್ನು ಒಡೆಯಬೇಕು ಎನ್ನುವವರು ಇದನ್ನು ಮಾಡುತ್ತಿದ್ದಾರೆ ಎಂದವರು ದೂರಿದ್ದಾರೆ. ಉರ್ದು ಒಂದು ಭಾಷೆ ಅಲ್ವಾ ಮಾಡಲಿ ಬಿಡಿ ಎಂದು ಗೃ ಸಚಿವ ಪ್ರಿಯಾಂಕ್ ಖರ್ಗೆ ಕೂಡ ಹೇಳಿದ್ದು, ಖಾದರ್ ಏನು ಪ್ರಸ್ತಾವನೆ ಕೊಟ್ಟಿದ್ದಾರೆ ಎಂದು ಮಾಹಿತಿ ಇಲ್ಲ. ಆದರೆ ಯಾವುದೇ ಹಬ್ಬ, ಯಾವುದೇ ಭಾಷೆ ಆಚರಣೆಯನ್ನು ಮಾಡಬಹುದು. ಈಗ ಆಂಧ್ರಪ್ರದೇಶದಲ್ಲಿ ಉರ್ದು ಅಧಿಕೃತವಾದ ದ್ವಿತೀಯ ಭಾಷೆ. ಆಂಧ್ರದಲ್ಲಿ ಮೋದಿಯವರ ಬಲಗೈ ಬಂಟರದ್ದೇ ಸರ್ಕಾರ ಇಲ್ವಾ ಎಂದವರು ಪ್ರಶ್ನಿಸಿದ್ದಾರೆ.



### ಸಿಎಂ, ಡಿಸಿಎಂಗೆ ನೇರ ಆಗ್ರಹ

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಕ್ಷಣವೇ ಪ್ರವೇಶಿಸಿ ಈ ಉರ್ದು ಹಬ್ಬಟಿದ ನಿರ್ಧಾರವನ್ನು ಕೈಬಿಡಬೇಕು ಎಂದು ಕರವೇ ಆಗ್ರಹಿಸಿದೆ. ರಾಜ್ಯದಲ್ಲಿ ವಿವಾದಗಳನ್ನು ಸೃಷ್ಟಿಸಿ ಸೌಹಾರ್ದತೆಯನ್ನು ಹಾಳುಗೆಡಹಲು ಸಂಚು ರೂಪಿಸುತ್ತಿರುವವರನ್ನು ಸರ್ಕಾರ ತಕ್ಷಣವೇ ದೂರವಿಡಬೇಕು. ಇಲ್ಲವಾದಲ್ಲಿ ಕನ್ನಡಿಗರ ರಕ್ಷಣೆಗಾಗಿ ಉಗ್ರ ಹೋರಾಟ ರೂಪಿಸುವುದಾಗಿ ಕರವೇ ಸರ್ಕಾರಕ್ಕೆ ಸೂಚನೆ ನೀಡಿದೆ.

### ಭಾಷೆಗಳ ನಡುವೆ ಸಂಘರ್ಷ ಬೇಡ

ನಾರಾಯಣಗೌಡ ಅವರ ಹೇಳಿಕೆಯ ಮುಖ್ಯ ಅಂಶವೆಂದರೆ, ಉರ್ದು ಭಾಷೆಯ ವಿರುದ್ಧ ತಮ ಸಂಘಟನೆ ಇಲ್ಲ. ಆದರೆ ಸರ್ಕಾರದ ನಿರ್ಧಾರದಿಂದ ಕನ್ನಡಿಗರು ಮತ್ತು ಉರ್ದು ಭಾಷಿಕರ ನಡುವೆ ಅನಗತ್ಯ ಭಿನ್ನಾಭಿಪ್ರಾಯ ಮೂಡಬಾರದು ಎಂಬುದು. ಮುಂದೆ ಹಿಂದಿ, ತಮಿಳು, ತೆಲುಗು, ಮರಾಠಿ ಸೇರಿದಂತೆ ವಿವಿಧ ಭಾಷೆಗಳ ಕಾರ್ಯಕ್ರಮಗಳಿಗೂ ಇದೇ ರೀತಿಯ ಸರ್ಕಾರಿ ವೇದಿಕೆ ನೀಡುವ ಪ್ರಶ್ನೆಯನ್ನೂ ಅವರು ಮುಂದಿಟ್ಟಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ನಿರ್ಧಾರವನ್ನು ತಕ್ಷಣ ಕೈಬಿಡಬೇಕು ಎಂದು ಒತ್ತಾಯಿಸಿರುವ ಅವರು, ಸರ್ಕಾರ ವಿವಾದಾತಕ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ಕರ್ನಾಟಕ ರಕ್ಷಣಾ ವೇದಿಕೆ ಹೋರಾಟ ನಡೆಸಲಿದೆ ಎಂದು ಎಚ್ಚರಿಸಿದ್ದಾರೆ.

ಈ ದಿನದ ದರ ಪೆಟ್ರೋಲ್: 111.68₹/L ಡೀಸೆಲ್ : 99.56₹/L ಬಂಗಾರ: ₹ 14,924/Gram 24ct ₹ 13,680 /Gram 22ct ಬೆಳ್ಳಿ: ₹235.00/

# ರಾಜ್ಯ ಯುವ ಕಾಂಗ್ರೆಸ್ ಸಮಿತಿ- ಸಿ.ಎಂ.ಕಪ್-2026 ಅಂತರ-ಕಾಲೇಜು ಟೆನಿಸ್ ಬಾಲ್ ಕ್ರಿಕೆಟ್

• ಉದಯವಾಹಿನಿ, ಬೆಂಗಳೂರು

ಬಡವರ ಪರ ಧ್ವನಿ, ಯುವಕರ ಸ್ಫೂರ್ತಿ, ಪ್ರೇರಣೆಯಾಗಿದ್ದಾರೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್- ಹೆಚ್.ಎಸ್.ಮಂಜುನಾಥಗೌಡ ಮಹಾಲಕ್ಷ್ಮೀಲೇಔಟ್ ವಿಧಾನಸಭಾ ಕ್ಷೇತ್ರ ರಾಣಿ ಅಬ್ಬಕ್ಕ ಆಟದ ಮೈದಾನದಲ್ಲಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಹೆಚ್.ಎಸ್.ಮಂಜುನಾಥಗೌಡರವರ ನೇತೃತ್ವದಲ್ಲಿ ಸಿ.ಎಂ.ಕಪ್ ಟೆನಿಸ್ ಬಾಲ್ ಅಂತರ-ಕಾಲೇಜು ಕ್ರಿಕೆಟ್ ಪಂದ್ಯಾವಳಿ ನಾಲ್ಕು ದಿನಗಳ ಕಾಲ ನಡೆಯಲಿದೆ.ಅಧ್ಯಕ್ಷರಾದ ಹೆಚ್.ಎಸ್.ಮಂಜುನಾಥಗೌಡ ರವರು, ನಿಕಟಪೂರ್ವ ಬಿಬಿಎಂಪಿ ಸದಸ್ಯ ಎಸ್.ಕೇಶವಮೂರ್ತಿ, ಜಿಲ್ಲಾಧ್ಯಕ್ಷ ಅಬ್ದುಲ್ ವಾಜಿದ್ ರವರು ಸಿ.ಎಂ.ಕಪ್ ಕ್ರಿಕೆಟ್ ಪಂದ್ಯಾವಳಿಗೆ ಬ್ಯಾಟ್ ಬೀಸುವ ಮೂಲಕ ಪಂದ್ಯಾವಳಿಗೆ ಚಾಲನೆ ನೀಡಿದರು.ಹೆಚ್.ಎಸ್.ಮಂಜುನಾಥಗೌಡ ರವರು ಮಾತನಾಡಿ ಕಾಂಗ್ರೆಸ್ ಪಕ್ಷದ ಸರ್ಕಾರದ ಮುಖ್ಯಮಂತ್ರಿಗಳಾದ ಡಿ.ಕೆ.


ಉದಯವಾಹಿನಿ ಚಿತ್ರ

ಶಿವಕುಮಾರ್ ರವರು ಬಡವರ ಧ್ವನಿಯಾಗಿ ನಿಂತಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾಗಿ ಸರ್ಕಾರವನ್ನು ಅಧಿಕಾರಕ್ಕೆ ತಂದರು. ಚುನಾವಣೆ ಪೂರ್ವದಲ್ಲಿ ರಾಜ್ಯದ ಜನತೆಗೆ 5ಗ್ಯಾರಂಟಿ ಯೋಜನೆಗಳ ಪ್ರಣಾಳಿಕೆಯಲ್ಲಿ ಹೇಳಿದ್ದರು. ಸರ್ಕಾರ ರಚನೆಯಾದ ಕೊಡಲೇ ಗ್ಯಾರಂಟಿ ಯೋಜನೆಯನ್ನು ಅನುಷ್ಠಾನಗೊಳಿಸಿದರು.ಇಂದು ರಾಜ್ಯದಲ್ಲಿ ಕೊಟ್ಯಂತರ ಜನರ ಜೀವನಕ್ಕೆ ಗ್ಯಾರಂಟಿ ಯೋಜನೆಗಳು ಬೆಳಕಾಗಿದೆ ಮತ್ತು ಆರ್ಥಿಕವಾಗಿ ಸಬಲರಾಗಿದ್ದಾರೆ. ರಾಹುಲ್ ಗಾಂಧಿರವರು, ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ರವರು ಯುವಕರಿಗೆ ಸ್ಫೂರ್ತಿಯಾಗಿದ್ದಾರೆ. ಯುವಕರ ಪರ ಧ್ವನಿಯಾಗಿದ್ದಾರೆ. ಯುವಕರ ಭವಿಷ್ಯಕ್ಕಾಗಿ ಶ್ರಮಿಸುತ್ತಿದ್ದಾರೆ.ಸಿ.ಎಂ.ಹೆಸರಿನಲ್ಲಿ ನಾಲ್ಕು ದಿನಗಳ ಕಾಲ ಅಂತರ-ಕಾಲೇಜು ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ 32ಕಾಲೇಜು ಮತ್ತು ಪ್ರಥಮ ಬಹುಮಾನ 2ಲಕ್ಷ ಮತ್ತು ದ್ವಿತೀಯ ಬಹುಮಾನ 1ಲಕ್ಷ ಮತ್ತು ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ , ಸಚಿವ ಸಂಪುಟದ ಸಚಿವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾಂಗ್ರೆಸ್ ಪಕ್ಷದ ಮುಖಂಡರುಗಳಾದ ಸುಧೀಂದ್ರ, ಜನಾರ್ಧನ್, ಶ್ರೀನಿವಾಸ್, ಕುಮಾರ್, ಪರಿಸರ ರಾಮಕೃಷ್ಣಶಿವಕುಮಾರ್, ಯುವ ಕಾಂಗ್ರೆಸ್ ಕಾನೂನು ಘಟಕ ಅಧ್ಯಕ್ಷ ಶ್ರೀಧರ್, ಕಾರ್ಯದರ್ಶಿ ಅನಿಲ್, ಉತ್ತರ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಾಹುಲ್ ಗೌಡ, ಯುವ ಕಾಂಗ್ರೆಸ್ ಸ್ಯಾಮ್ಯುಯಲ್ ಉಪಸ್ಥಿತರಿದ್ದರು.

# ಊಂಜಲ್ ಸಂಗೀತ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ವಯ್ಯಾಲಿಕಾವಲಿನ 16ನೇ ಅಡ್ಡರಸ್ತೆಯಲ್ಲಿರುವ ಶ್ರೀವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ಅಕ್ಟೋಬರ್ 3, ಶನಿವಾರ ಸಂಜೆ 6-00ಕ್ಕೆ ಊಂಜಲ್ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದ್ದು ಕು|| ಅವನಿ ಭಟ್ ಗಾಯನಕ್ಕೆ ಪಿಟೀಲು ವಾದನದಲ್ಲಿ ಶ್ರೀ ಎಸ್. ಶಶಿಧರ್ ಮತ್ತು ತಬಲಾ ವಾದನದಲ್ಲಿ ಶ್ರೀ ಶ್ರೀನಿವಾಸ್ ಅನಂತರಾಮಯ್ಯ ಸಹಕರಿಸಲಿದ್ದಾರೆ ಎಂದು ಟಿಟಿಡಿ ಹೆಚ್.ಡಿ.ಪಿ.ಪಿ ಸಂಚಾಲಕರಾದ ಡಾ|| ಪಿ. ಭುಜಂಗರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

## ಮೊದಲ ಬಾರಿ ಸಿಗ್ನಲ್ ಜಂಪ್ ಗೆ 3 ಸಾವಿರ, ಮರುಕಳಿಸಿದರೆ 5 ಸಾವಿರ ಫೈನ್

• ಉದಯವಾಹಿನಿ, ಬೆಂಗಳೂರು

ಟ್ರಾಫಿಕ್ ಸಮಸ್ಯೆ ನಿಯಂತ್ರಣಕ್ಕೆ ಸಂಚಾರ ನಿಯಮ ಉಲ್ಲಂಘನೆಗಳಿಗೆ ವಿಧಿಸುವ ದಂಡದ ಮೊತ್ತವನ್ನು ಗಣನೀಯವಾಗಿ ಹೆಚ್ಚಿಸಲು ಸರ್ಕಾರ ಚಿಂತನೆ ನಡೆಸಿದೆ. ಈ ಸಂಬಂಧ ಸಾರಿಗೆ ಇಲಾಖೆ ಮತ್ತು ಗೃಹ ಇಲಾಖೆ ನಡುವೆ ಚರ್ಚೆ ನಡೆದಿದೆ.ನಡೆದ ಸಾರಿಗೆ ಇಲಾಖೆ ಮತ್ತು ಗೃಹ ಇಲಾಖೆಯ ಜಂಟಿ ಸಭೆಯಲ್ಲಿ, ಸಂಚಾರ ನಿಯಮ ಉಲ್ಲಂಘನೆಗಳಿಗೆ ಹೆಚ್ಚಿನ ದಂಡ ವಿಧಿಸುವ ಕುರಿತು ಚರ್ಚಿಸಲಾಗಿದೆ. ಸಚಿವ ಭೈರತಿ ಸುರೇಶ್ ಹಾಗೂ ಗೃಹ ಸಚಿವ ಪ್ರಿಯಾಂಕ್ ಖರ್ಗೆ ನೇತೃತ್ವದಲ್ಲಿ ಸಭೆ ನಡೆದಿದ್ದು, ಬೆಂಗಳೂರಿನ ಟ್ರಾಫಿಕ್ ಸಮಸ್ಯೆಗೆ ಸಂಚಾರ ನಿಯಮಗಳ ಉಲ್ಲಂಘನೆಯೂ ಪ್ರಮುಖ ಕಾರಣವಾಗಿರುವ ಹಿನ್ನೆಲೆಯಲ್ಲಿ ದಂಡ ಹೆಚ್ಚಿಸುವ ಬಗ್ಗೆ ಚರ್ಚೆ ನಡೆದಿದೆ.ಫುಟ್‌ಪಾತ್‌ನಲ್ಲಿ ವಾಹನ ನಿಲುಗಡೆ, ಒನ್‌ವೇ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಚಾಲನೆ, ಫುಟ್‌ಪಾತ್ ಮೇಲೆ ಚಾಲನೆ, ಅನಧಿಕೃತ ಪಾರ್ಕಿಂಗ್, ನೋ ಪಾರ್ಕಿಂಗ್ ಉಲ್ಲಂಘನೆ, ಸಿಗ್ನಲ್ ಜಂಪ್ ಹಾಗೂ ಟ್ರಾಫಿಕ್ ಮುಕ್ತ ಸಂಚಾರಕ್ಕೆ ಅಡ್ಡಿಪಡಿಸುವುದು ಸೇರಿದಂತೆ ವಿವಿಧ ನಿಯಮ ಉಲ್ಲಂಘನೆಗಳಿಗೆ ದಂಡ ಹೆಚ್ಚಿಸುವ ಪ್ರಸ್ತಾವನೆ ಚರ್ಚೆಯಲ್ಲಿದೆ.ಮೊದಲ ಉಲ್ಲಂಘನೆಗೆ ಪ್ರಸ್ತಾವಿತ ದಂಡ 3,000 ಮರುಕಳಿಸಿದರೆ, 5,000, ಒನ್‌ವೇ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಚಾಲನೆ. ಮೊದಲ ಉಲ್ಲಂಘನೆಗೆ ಪ್ರಸ್ತಾವಿತ ದಂಡ 3,000 ಮರುಕಳಿಸಿದರೆ, 5,000 ರು ಭಾರೀ ದಂಡ ವಿಧಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ.ಇನ್ನೂ ಅಂಕ ಆಧಾರಿತ ಚಾಲನಾ ಪರವಾನಗಿ ವ್ಯವಸ್ಥೆಯನ್ನು ಪರಿಚಯಿಸಲಿದೆ.

## ರೇಷನ್ ಕಾರ್ಡ್ ಇ-ಕೆವೈಸಿ ಪ್ರಕ್ರಿಯೆಗಾಗಿ ಇನ್ಮುಂದೆ ಕ್ಯೂ ನಿಲ್ಲಬೇಕಿಲ್ಲ!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯದ ರೇಷನ್ ಕಾರ್ಡ್ ಬಳಕೆದಾರರು ಇ-ಕೆವೈಸಿ ಪ್ರಕ್ರಿಯೆಗಾಗಿ ಇನ್ಮುಂದೆ ನ್ಯಾಯಬೆಲೆ ಅಂಗಡಿಗಳ ಮುಂದೆ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸಲು ಕರ್ನಾಟಕ ಆಹಾರ ಇಲಾಖೆಯು 'ಅನ್ನ ಸೇವೆ' ಎಂಬ ನೂತನ ಮೊಬೈಲ್ ಆಪ್ ಅನ್ನು ಅಧಿಕೃತವಾಗಿ ಬಿಡುಗಡೆ ಮಾಡಿದೆ. ಬೆಂಗಳೂರಿನ ಶಿವಾಜಿನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ರಿಜ್ವಾನ್ ಅರ್ಷದ್ ಅವರು ಈ ನೂತನ ತಾಂತ್ರಿಕ ಆಪ್‌ಗೆ ಚಾಲನೆ ನೀಡಿದ್ದಾರೆ. ಸ್ಮಾರ್ಟ್‌ಫೋನ್ ಹೊಂದಿರುವ ಸಾರ್ವಜನಿಕರು ನ್ಯಾಯಬೆಲೆ ಅಂಗಡಿಗಳು ಅಥವಾ ಗ್ರಾಮ ಒನ್ ಕೇಂದ್ರಗಳಿಗೆ ಅಲೆಯುವ ತಾಪತ್ರಯವಿಲ್ಲದೆ, ತಮ್ಮ ಮೊಬೈಲ್ ಮೂಲಕವೇ ಕುಟುಂಬದ ಸದಸ್ಯರ ಇ-ಕೆವೈಸಿ ಪ್ರಕ್ರಿಯೆಯನ್ನು ಸುಲಭವಾಗಿ ಪೂರ್ಣಗೊಳಿಸಬಹುದು.

**ಮುಖ ಚಹರೆ ಗುರುತು:** ಹೆಬ್ಬೆರಳ ಗುರುತು (ಬೆರಳಚ್ಚು) ಮೂಡದ ಹಿರಿಯ ನಾಗರಿಕರು ಮತ್ತು ಮಕ್ಕಳಿಗೆ ಈ ಆಪ್‌ನಲ್ಲಿ ಫೇಸ್ ಅಥೆಂಟಿಕೇಶನ್ ತಂತ್ರಜ್ಞಾನದ ಮೂಲಕ ಮುಖದ ಚಹರೆ ಗುರುತಿಸಿ ಇ-ಕೆವೈಸಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಮೊದಲ ಹಂತದಲ್ಲಿ ಈ ಸೇವೆಯನ್ನು ರಾಜ್ಯದ 8 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ. ಈ ಜಿಲ್ಲೆಗಳ ಸುಮಾರು 4.5 ಕೋಟಿ ಫಲಾನುಭವಿಗಳು ಇದರ ಲಾಭ ಪಡೆಯಬಹುದು. ಆ ಜಿಲ್ಲೆಗಳೆಂದರೆಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ, ಉಡುಪಿ, ಹಾವೇರಿ, ಉತ್ತರ ಕನ್ನಡ, ಬಳ್ಳಾರಿ, ಬೀದರ್, ಕೊಪ್ಪಳ. ಅದರಂತೆ, ಈ ಪೈಲಟ್ ಯೋಜನೆ ಯಶಸ್ವಿಯಾದ ನಂತರ ಉಳಿದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

## ಸರ್ವಕಾಲಿಕ ಪ್ರವಾಸಿ ತಾಣವಾಗಿಸಲು ಸರ್ಕಾರ ಮಾಸ್ಟರ್ ಪ್ಲ್ಯಾನ್..!

• ಉದಯವಾಹಿನಿ, ಬೆಂಗಳೂರು

ವಿಶ್ವವಿಖ್ಯಾತ ಜೋಗ ಜಲಪಾತವನ್ನು ಸರ್ವಕಾಲಿಕ ಪ್ರವಾಸಿ ತಾಣವನ್ನಾಗಿ ಪರಿವರ್ತಿಸಲು ರಾಜ್ಯ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ.

ಕೇವಲ ಮಳೆಗಾಲಕ್ಕೆ ಮಾತ್ರ ಸೀಮಿತವಾಗಿದ್ದ ಜೋಗದ ವೈಭವವನ್ನು ಇನ್ಮುಂದೆ ವರ್ಷದ 365 ದಿನಗಳೂ ಕಣ್ತುಂಬಿಕೊಳ್ಳಲು ಪ್ರವಾಸೋದ್ಯಮ ಇಲಾಖೆ ಮಾಸ್ಟರ್ ಪ್ಲಾನ್ ಸಿದ್ಧಪಡಿಸಿದೆ.

ಸಚಿವ ಕೆ.ಜೆ. ಜಾರ್ಜ್ ಅವರು ಇತ್ತೀಚೆಗೆ ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ, ಜೋಗ ಜಲಪಾತ ಅಭಿವೃದ್ಧಿ ಯೋಜನೆಗಳನ್ನು ತೀವ್ರಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ತಾಂತ್ರಿಕ ಅಧ್ಯಯನಗಳನ್ನು ಶೀಘ್ರ ಪೂರ್ಣಗೊಳಿಸುವುದು ಹಾಗೂ ಅಗತ್ಯ ಕಾನೂನುಬದ್ಧ ಅನುಮೋದನೆಗಳ ಪ್ರಕ್ರಿಯೆಯನ್ನು ವೇಗಗೊಳಿಸುವಂತೆ ಅವರು ನಿರ್ದೇಶನ ನೀಡಿದ್ದಾರೆ. ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಜೋಗ ಜಲಪಾತದಲ್ಲಿ ನಡೆಯುತ್ತಿರುವ ಕಾಮಗಾರಿಗಳ ಪ್ರಗತಿ ಹಾಗೂ ವರ್ಷಪೂರ್ತಿ ನಿಗದಿತ ಅವಧಿಗಳಲ್ಲಿ ಜಲಪಾತದಲ್ಲಿ ನೀರಿನ ಹರಿವು ಇರುವಂತೆ ಮಾಡುವ ಪ್ರಸ್ತಾವನೆ ಕುರಿತು ಸಚಿವರು ಪರಿಶೀಲನೆ ನಡೆಸಿದರು.ಜಲಪಾತದ ಮೇಲ್ಭಾಗಕ್ಕೆ ನೀರನ್ನು ಪಂಪ್ ಮಾಡುವ ಉದ್ದೇಶಿತ ವ್ಯವಸ್ಥೆಯ ಕುರಿತು ಸಮಗ್ರ ಕಾರ್ಯಸಾಧ್ಯತಾ ಅಧ್ಯಯನ ನಡೆಸುವಂತೆ ಜಾರ್ಜ್ ಸೂಚಿಸಿದರು.

## ನಟಿ ರನ್ಯಾ ರಾವ್‌ಗೆ 89 ಕೋಟಿ ದಂಡ ವಿಧಿಸಿ ಆದೇಶಿಸಿದ ಕಸ್ಟಮ್ಸ್ ಇಲಾಖೆ

• ಉದಯವಾಹಿನಿ, ಬೆಂಗಳೂರು

ಚಿನ್ನದ ಅಕ್ರಮ ಸಾಗಾಟ ಪ್ರಕರಣದ ಆರೋಪಿತೆಯಾಗಿರುವ ನಟಿ ಹರ್ಷವರ್ಧಿನಿ ಅಲಿಯಾಸ್ ರನ್ಯಾ ರಾವ್‌ಗೆ ಮತ್ತೊಂದು ಸಂಕಷ್ಟ ತಂದೊಡ್ಡಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಕ್ರಮ ಚಿನ್ನ ಸಾಗಾಟ ಆರೋಪ ಸಂಬಂಧ ರನ್ಯಾ ರಾವ್‌ಗೆ 89 ಕೋಟಿ ದಂಡ ಪಾವತಿಸುವಂತೆ ಕಸ್ಟಮ್ಸ್ ಇಲಾಖೆ ಆದೇಶಿಸಿದೆ. ದುಬೈನಿಂದ ನಗರದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅಕ್ರಮವಾಗಿ ಸುಮಾರು ಕೋಟಂತ್ಯರ ಮೌಲ್ಯದ ಚಿನ್ನ ಕಳ್ಳಸಾಗಣೆಗೆ ಯತ್ನಿಸಿದ ಆರೋಪ ಹೊತ್ತಿರುವ ರನ್ಯಾ ರಾವ್ ಅವರಿಗೆ ಕಸ್ಟಮ್ಸ್ ಇಲಾಖೆ ಭಾರೀ ಶಾಕ್ ನೀಡಿದೆ. ರನ್ಯಾರಾವ್ ಸಹ ಆರೋಪಿಗಳ ಜೊತೆ ಸೇರಿ ದುಬೈನಿಂದ 2024 ಮಾರ್ಚ್ 7ರಿಂದ 2025 ಫೆಬ್ರುವರಿ 18ರವರೆಗೆ ಅಕ್ರಮವಾಗಿ ಚಿನ್ನ ಸಾಗಾಟ ಮಾಡಿರುವುದನ್ನ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಪತ್ತೆಹಚ್ಚಿತ್ತು. ಈ ಪ್ರಕರಣದಲ್ಲಿ ರನ್ಯಾರಾವ್ ಸೇರಿದಂತೆ ತರುಣ್, ಸಾಹಿಲ್ ಜೈನ್ ಹಾಗೂ ಭರತ್ ಜೈನ್ ಎಂಬುವರನ್ನ ಬಂಧಿಸಿತ್ತು. ಒಂದು ವರ್ಷದ ಅವಧಿಯಲ್ಲಿ 113 ಕೆ.ಜಿ. ಚಿನ್ನ ಸಾಗಾಟ ಮಾಡಿರುವುದು ಸಾಬೀತಾಗಿದೆ. ಕಸ್ಟಮ್ಸ್ ಕಾಯ್ದೆ-1962 ಅನುಸಾರ 89 ಕೋಟಿ ದಂಡ ಪಾವತಿಸುವಂತೆ ರನ್ಯಾರಾವ್ ಗೆ ಕಸ್ಟಮ್ಸ್ ಜಂಟಿ ನಿರ್ದೇಶಕ ಡಾ.ಸಂದೀಪ್ ಗುಂಜಾಲ್ ಅವರು ಆದೇಶಿಸಿದ್ದಾರೆ.

# ಹೆಬ್ಬಾಳ ಕೆರೆಯ 3.45 ಎಕರೆ ಜೌಗು ಪ್ರದೇಶ ನಾಶಕ್ಕೆ ಯತ್ನ !

### ಯೋಜನೆಗಾಗಿ ಹೆಬ್ಬಾಳ ಕೆರೆಯ 3.45 ಎಕರೆ ಭೂಮಿಯನ್ನು ಬಳಸಿಕೊಳ್ಳಲು ಅಭಿವೃದ್ಧಿ ಪ್ರಾಧಿಕಾರದಿಂದ (ಕೆಟಿಸಿಡಿಎ) ಅನುಮತಿ ಪಡೆದಿದೆ.

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಹತ್ವಾಕಾಂಕ್ಷೆಯ ಯೋಜನೆಯಾದ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೆ ನಿರ್ಮಿಸಲು ಉದ್ದೇಶಿಸಿರುವ ಅವಳಿ ಸುರಂಗ ರಸ್ತೆ ಯೋಜನೆಗೆ ಇದೀಗ ಮತ್ತೊಂದು ಕಾನೂನು ತೊಡಕು ಎದುರಾಗುವ ಸಾಧ್ಯತೆ ಇದೆ.

1 2.25 ಎಕರೆಗಿಂತ ಹೆಚ್ಚಿನ ವಿಸ್ತೀರ್ಣ
2 ಸುಮಾರು 14,000 ಜೌಗು ಪ್ರದೇಶಗಳು
3 ರಾಜ್ಯ ಸರ್ಕಾರ ಸೂಕ್ತವಾಗಿ ಸಂರಕ್ಷಿಸಿಲ್ಲ

ಜಲಮೂಲಗಳ ಸಂರಕ್ಷಣೆ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ಆದೇಶಗಳನ್ನು ಈ ಯೋಜನೆ ಉಲ್ಲಂಘಿಸುತ್ತದೆ ಎಂಬ ಆರೋಪ ಕೇಳಿಬಂದಿದೆ.

ಯೋಜನೆಗಾಗಿ ಹೆಬ್ಬಾಳ ಕೆರೆಯ 3.45 ಎಕರೆ ಭೂಮಿಯನ್ನು ಬಳಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ (ಕೆಟಿಸಿಡಿಎ) ಅನುಮತಿ ಪಡೆದಿದೆ.

ಆದರೆ, ಸುಪ್ರೀಂ ಕೋರ್ಟ್‌ನ ಆದೇಶಗಳ ಪ್ರಕಾರ ಎಲ್ಲಾ ಜೌಗು ಪ್ರದೇಶಗಳು ಹಾಗೂ ಜಲಮೂಲಗಳನ್ನು ಸಂರಕ್ಷಿಸಬೇಕು ಮತ್ತು ಅವುಗಳನ್ನು ಬೇರೆ ಉದ್ದೇಶಗಳಿಗೆ ಬಳಸಲು ಅವಕಾಶ ನೀಡಬಾರದು.

ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ 2.25 ಎಕರೆಗಿಂತ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಯಾವುದೇ ಜಲಮೂಲವನ್ನು ಜೌಗು ಪ್ರದೇಶ ಎಂದು ಪರಿಗಣಿಸಲಾಗುತ್ತದೆ. ಈ ಮಾನದಂಡವನ್ನು ಅನ್ವಯಿಸಿದರೆ ರಾಜ್ಯದಲ್ಲಿ ಸುಮಾರು 14,000 ಜೌಗು ಪ್ರದೇಶಗಳು ಈ ವ್ಯಾಪ್ತಿಗೆ ಬರುತ್ತವೆ. ಆದರೆ, ಇವುಗಳಲ್ಲಿ ಬಹುತೇಕ ಪ್ರದೇಶಗಳನ್ನು ರಾಜ್ಯ ಸರ್ಕಾರ ಸೂಕ್ತವಾಗಿ ಸಂರಕ್ಷಿಸಿಲ್ಲ ಎಂದು ತಜ್ಞರು ಆರೋಪಿಸಿದ್ದು, ಈ ವಿಚಾರವಾಗಿ ನ್ಯಾಯಾಲಯದ ಮೊರೆ ಹೋಗಲು ಸಿದ್ಧತೆ ನಡೆಸುತ್ತಿದ್ದಾರೆ.ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ)



ಉದಯವಾಹಿನಿ ಚಿತ್ರ

ಪರಿಸರ ವಿಜ್ಞಾನ ಕೇಂದ್ರದ ಪ್ರೊ. ಟಿ.ವಿ. ರಾಮಚಂದ್ರ ಮಾತನಾಡಿ, ಕೆಟಿಸಿಡಿಎ ಮತ್ತು ಬಿಡಿಎಗಳು ಯೋಜನೆಗೆ ಕರ್ನಾಟಕ ಜೌಗು ಪ್ರದೇಶ ಪ್ರಾಧಿಕಾರದ (ಕೆಡಬ್ಲ್ಯುಎ) ಅನುಮತಿ ಪಡೆಯಬೇಕು ಎಂದು ಹೇಳಿದ್ದಾರೆ. ಹೆಬ್ಬಾಳ ಕೆರೆಯ ಕೆಲವು ಭಾಗಗಳಲ್ಲಿ ಈಗಾಗಲೇ ಒತ್ತುವರಿಯಾಗಿದೆ. ಇದೀಗ ಸುರಂಗ ರಸ್ತೆ ಯೋಜನೆಗಾಗಿ ಕೆರೆಯ ಭಾಗವನ್ನು ಬಳಸಲು ಅವಕಾಶ ನೀಡಿದರೆ ಜಲಮೂಲ ಮತ್ತಷ್ಟು ನಾಶವಾಗಲಿದೆ ಎಂದು ಅವರು ಹೇಳಿದ್ದಾರೆ. ಪ್ರೊ. ರಾಮಚಂದ್ರ ಅವರು ಭಾರತ ಜೌಗು ಪ್ರದೇಶ ಪ್ರಾಧಿಕಾರ ಹಾಗೂ ರಾಷ್ಟ್ರೀಯ ಜೌಗು ಪ್ರದೇಶ ಸಮಿತಿಯ ಸದಸ್ಯರೂ ಆಗಿದ್ದಾರೆ.ಕೆಟಿಸಿಡಿಎಯ ಹಿರಿಯ ಅಧಿಕಾರಿಯೊಬ್ಬರು ಮಾತನಾಡಿ, ''ಹೆಬ್ಬಾಳ ಕೆರೆಯ ಕೆಳಭಾಗದಲ್ಲಿರುವ ಕೆರೆ ಭೂಮಿಯನ್ನು ಭೂಗತ ಯೋಜನೆಗಾಗಿ ಬಳಸಲು ಕೆಲವು ಷರತ್ತುಗಳೊಂದಿಗೆ ಅನುಮತಿ ನೀಡಲಾಗಿದೆ. ಜೌಗು ಪ್ರದೇಶ ಪ್ರಾಧಿಕಾರದಿಂದ ಅನುಮತಿ ಪಡೆದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳಿದ್ದಾರೆ.ಅನುಮತಿ ನೀಡುವ ಮೊದಲು ಬಿಡಿಎಯಿಂದ ಸ್ಪಷ್ಟೀಕರಣ ಕೋರಿ ಕಡತವನ್ನು ಎರಡು ಬಾರಿ ವಾಪಸ್ ಕಳುಹಿಸಲಾಗಿತ್ತು ಎಂದು ತಿಳಿಸಿದ್ದಾರೆ.ಬಿಡಿಎ ಮೊದಲ ಬಾರಿಗೆ 2026ರ ಜೂನ್ 29ರಂದು ಕೆಟಿಸಿಡಿಎಯನ್ನು ಸಂಪರ್ಕಿಸಿತ್ತು. ಬಳಿಕ ಜುಲೈ 17ರಂದು ಮತ್ತೊಮ್ಮೆ ಪತ್ರ ವ್ಯವಹಾರ ನಡೆಸಿತ್ತು. ಜುಲೈ 23, 2026ರಂದು ಕೆಟಿಸಿಡಿಎ ಯೋಜನೆಗೆ ಅನುಮತಿ ನೀಡಿದೆ .ಬಿಡಿಎ ಅಧಿಕಾರಿಯೊಬ್ಬರು ಮಾತನಾಡಿ, ಕೆಟಿಸಿಡಿಎಯಿಂದ ಪಡೆದ ಅನುಮತಿಯೇ ಸಾಕಾಗುತ್ತದೆ. ಜೌಗು ಪ್ರದೇಶ ಪ್ರಾಧಿಕಾರದಿಂದ ಯಾವುದೇ ಅನುಮತಿ ಕೋರಿಲ್ಲ, ಕೆಟಿಸಿಡಿಎ 2014ರಲ್ಲಿ ಅಸ್ತಿತ್ವಕ್ಕೆ ಬಂದ ರಾಜ್ಯ ಸಂಸ್ಥೆಯಾಗಿರುವುದರಿಂದ ಅದರ ಅನುಮತಿ ಪಡೆಯಲಾಗಿದೆ. ಹೆಬ್ಬಾಳ ಕೆರೆಯ ಉಸ್ತುವಾರಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿದ್ದು, ಈ ವಿಚಾರವನ್ನು ಅವರು ಪರಿಶೀಲಿಸಬೇಕು ಎಂದು ಹೇಳಿದ್ದಾರೆ.

> ಕರ್ನಾಟಕ ಜೌಗು ಪ್ರದೇಶ ಪ್ರಾಧಿಕಾರವು ಯೋಜನೆಯ ಕಡತವನ್ನು ಪರಿಶೀಲಿಸಿದ ಬಳಿಕ ಅದನ್ನು ಭಾರತ ಜೌಗು ಪ್ರದೇಶ ಪ್ರಾಧಿಕಾರ ಹಾಗೂ ರಾಷ್ಟ್ರೀಯ ಜೌಗು ಪ್ರದೇಶ ಸಮಿತಿಗೆ ಕಳುಹಿಸಿ ಚರ್ಚೆ ಮತ್ತು ಅನುಮೋದನೆ ಪಡೆಯಬೇಕಿತ್ತು ಎಂದು ಹೇಳಿದ್ದಾರೆ.-ಪ್ರೊ. ರಾಮಚಂದ್ರ

### ಯಾವುದೇ ಕಡತ ತಮ್ಮ ಬಳಿ ಬಂದಿಲ್ಲ

ಯೋಜನೆಗೆ ಅನುಮತಿ ಕೋರಿ ಇದುವರೆಗೆ ಯಾವುದೇ ಕಡತ ತಮ್ಮ ಬಳಿ ಬಂದಿಲ್ಲ ಎಂದು ಕರ್ನಾಟಕ ಜೌಗು ಪ್ರದೇಶ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ. ಈ ವಿಚಾರದ ಬಗ್ಗೆ ತಮಗೆ ಮಾಹಿತಿ ಇಲ್ಲ ಎಂದು ಕೆಟಿಸಿಡಿಎ ಅಧಿಕಾರಿಗಳು ಹೇಳಿದ್ದಾರೆ.

### ರಾಜಕೀಯ ನಾಯಕರಲ್ಲಿ ಇರಬೇಕು.

ಧರ್ಮದ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಇರಬಹುದು. ಆದರೆ ನಮ್ಮ ಧರ್ಮದ ಇತಿಹಾಸ, ಪರಂಪರೆ, ಶರಣರ ಪರಂಪರೆ ಮತ್ತು ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ಉಂಟಾದಾಗ,ಅದನ್ನು ಪಕ್ಷಾತೀತವಾಗಿ ಪ್ರಶ್ನಿಸುವ ಧೈರ್ಯ ನಮ್ಮ ಧಾರ್ಮಿಕ ಹಾಗೂ ರಾಜಕೀಯ ನಾಯಕರಲ್ಲಿ ಇರಬೇಕು.

## ಮತದಾರರನ್ನು ಅಳಿಸಲು ಫಾರ್ಮ್ 7 ದುರ್ಬಳಕೆ ಆರೋಪ

• ಉದಯವಾಹಿನಿ, ಬೆಂಗಳೂರು

ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಸಮಯದಲ್ಲಿ ಮತದಾರರ ಹೆಸರುಗಳನ್ನು ಅಳಿಸಲು ಸಲ್ಲಿಸುವ ಫಾರ್ಮ್ 7 ಅರ್ಜಿಗಳ ದುರ್ಬಳಕೆಯ ಆರೋಪಗಳನ್ನು ಕಾನೂನು ಚೌಕಟ್ಟಿನಲ್ಲಿ ಪರಿಶೀಲಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದಾರೆ.ನಟ ಪ್ರಕಾಶ್ ರಾಜ್ ನೇತೃತ್ವದ ನಿಯೋಗವು ಬುಧವಾರ ಸದಾಶಿವನಗರದಲ್ಲಿರುವ ಮುಖ್ಯಮಂತ್ರಿಗಳ ನಿವಾಸಕ್ಕೆ ಭೇಟಿ ನೀಡಿ, ಒಕ್ಕೂಟದ ಎಸ್‌ಐಆರ್ ಆಡಿಟ್ ವರದಿಯನ್ನು ಸಲ್ಲಿಸಿತು. ನಿಯೋಗದಲ್ಲಿ ಕಾರ್ಯಕರ್ತರಾದ ನೂರ್ ಶ್ರೀಧರ್, ಮಹಮ್ಮದ್ ಯೂಸುಫ್ ಕಣ್ಣಿ, ಜೆ.ಎಂ. ವೀರಸಂಗಯ್ಯ, ಕೆ.ಎಲ್. ಅಶೋಕ್, ಅಬ್ದುಲ್ ಮಜೀದ್, ಕೆ.ಎಸ್. ವಿಮಲಾ ಸೇರಿದಂತೆ ಇತರರು ಇದ್ದರು.ಬೂತ್ ಮಟ್ಟದ ಅಧಿಕಾರಿಗಳಿಗೆ ಹೆಸರುಗಳನ್ನು ಅಳಿಸಲು ಫಾರ್ಮ್ 7 ಅರ್ಜಿಗಳನ್ನು ನೀಡಿದ್ದ ಬಿಎಲ್‌ಎ-1 ಮತ್ತು ಬಿಎಲ್‌ಎ-2 ಪ್ರತಿನಿಧಿಗಳ ಕುರಿತು ತಮ್ಮ ಬಳಿ ಇರುವ ಮಾಹಿತಿಯನ್ನು ತಕ್ಷಣ ಸಲ್ಲಿಸುವಂತೆ ಮುಖ್ಯಮಂತ್ರಿ ನಿಯೋಗಕ್ಕೆ ಸೂಚಿಸಿದ್ದಾರೆ ಎಂದು ಎಸ್‌ಐಆರ್ ವಿರೋಧಿ ಒಕ್ಕೂಟದ ನಾಯಕ ಕೆ.ಎಲ್. ಅಶೋಕ್ ತಿಳಿಸಿದ್ದಾರೆ.

''ಮುಖ್ಯಮಂತ್ರಿಯಾಗಿ ಪ್ರತಿಯೊಬ್ಬರ ಮತವನ್ನು ರಕ್ಷಿಸುವುದು ನನ್ನ ಕರ್ತವ್ಯ'' ಎಂದು ಡಿ.ಕೆ. ಶಿವಕುಮಾರ್ ಇದೇ ವೇಳೆ ನಿಯೋಗಕ್ಕೆ ಹೇಳಿದರು.ಫಾರ್ಮ್ 7 ಸಂಬಂಧಿತ ಆರೋಪಗಳನ್ನು ಕಾನೂನಿನ ವ್ಯಾಪ್ತಿಯಲ್ಲಿ ಸಮಗ್ರವಾಗಿ ಪರಿಶೀಲಿಸಲಾಗುವುದು ಎಂದು ಸಿಎಂ ಭರವಸೆ ನೀಡಿದ್ದಾರೆ ಎಂದು ಅಶೋಕ್ ಹೇಳಿದರು. ಅಕ್ಟೋಬರ್ 1ರಂದು ಮುಖ್ಯಮಂತ್ರಿಗಳು ಚುನಾವಣಾ ಆಯೋಗವನ್ನು ಖುದ್ದಾಗಿ ಸಂಪರ್ಕಿಸಿ, ಈ ವಿಷಯದ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಲಿದ್ದಾರೆ ಎಂದೂ ಅವರು ತಿಳಿಸಿದರು.


ಉದಯವಾಹಿನಿ ಚಿತ್ರ

## ನವೆಂಬರ್ ಒಳಗೆ ಹಣ ಬಿಡುಗಡೆ ಮಾಡದಿದ್ದರೆ ಲಂಚ ತಿಂದ ಶಾಸಕರ ಹೆಸರು ಬಹಿರಂಗ'

• ಉದಯವಾಹಿನಿ, ಬೆಂಗಳೂರು

ನವೆಂಬರ್ ಅಂತ್ಯದೊಳಗೆ ಕಾಮಗಾರಿ ನಿರ್ವಹಿಸಿರುವ ಬಾಕಿ ಬಿಲ್‌ಗಳಿಗೆ ಹಣ ಬಿಡುಗಡೆ ಮಾಡದಿದ್ದರೆ ಡಿಸೆಂಬರ್ ನಲ್ಲಿ ಲಂಚ ಪಡೆದಿರುವ ಶಾಸಕರ ಹೆಸರನ್ನು ಬಹಿರಂಗ ಪಡಿಸಿ ಅವರನ್ನು ದೇವರ ಮುಂದೆ ಪ್ರಮಾಣ ಮಾಡುವಂತೆ ಆಹ್ವಾನಿಸುವುದಾಗಿ ರಾಜ್ಯ ಗುತ್ತಿಗೆದಾರರ ಸಂಘ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಸಂಘದ ಅಧ್ಯಕ್ಷ ಆರ್.ಮಂಜುನಾಥ್, ಸರಕಾರದ ವಿವಿಧ ಇಲಾಖೆಗಳಿಂದ ಅಂದಾಜು 37,970 ಸಾವಿರ ಕೋಟಿ ರೂ. ಬಾಕಿ ಬಿಲ್‌ಗಳಿವೆ. ಗುತ್ತಿಗೆದಾರರ ಸಂಘದ ಕೆಂಪಣ್ಣ ಅವರ ಹೆಸರನ್ನು ಬಳಸಿಕೊಂಡು ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ.

ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ನಮಗೆ ಸಹಾಯ ಮಾಡಲಿಲ್ಲ, ಅಂದಿನ ಡಿಸಿಎಂ ಆಗಿದ್ದ ಡಿ.ಕೆ.ಶಿವಕುಮಾರ್, ಫ್ರೀಡಂಪಾರ್ಕ್‌ನಲ್ಲಿ ನಡೆಸಿದ್ದ ಪ್ರತಿಭಟನಾ ಸ್ಥಳಕ್ಕೆ ಬಂದು ಒಂದೇ ಕಂತಿನಲ್ಲಿ ಹಣ ಬಿಡುಗಡೆ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದರು ಎಂದರು. ಮುಖ್ಯಮಂತ್ರಿ ಆದ ಬಳಿಕ ಡಿ.ಕೆ. ಶಿವಕುಮಾರ್, ಜೂ.30ರಂದು ನಡೆದ ಸಭೆಯಲ್ಲಿ


ಉದಯವಾಹಿನಿ ಚಿತ್ರ

ಬಾಕಿ ಬಿಲ್‌ಗಳಿಗೆ ಹಣ ಪಾವತಿಸುವುದಾಗಿ ಭರವಸೆ ಕೊಟ್ಟಿದ್ದರೂ ಇದುವರೆಗೆ ಈಡೇರಿಲ್ಲ. ಹಾಗಾಗಿ, ನಮ್ಮ ಸಮಸ್ಯೆಗಳು ಬಗೆಹರಿಯದಿದ್ದರೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪಾದಯಾತ್ರೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಆರ್.ಮಂಜುನಾಥ್ ಎಚ್ಚರಿಕೆ ನೀಡಿದರು. ಹಿಂದಿನ ಸರ್ಕಾರಕ್ಕಿಂತ ಈಗಿನ ಸರ್ಕಾರದಲ್ಲಿ ಕಮಿಷನ್ ದಂಧೆ ಹೆಚ್ಚಳವಾಗಿದೆ. ಕಮಿಷನ್ ಕೊಟ್ಟವರಿಗೆ ಮಾತ್ರ ಬಿಲ್ ಪಾವತಿಸಲಾಗುತ್ತಿದೆ. ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಶೇ.75ರಷ್ಟು ಶಾಸಕರು, ಟೆಂಡರ್ ಗಳಲ್ಲಿ ಮೂಗು ತೂರಿಸುತ್ತಿದ್ದಾರೆ. ಅನುದಾನ ಇಲ್ಲದಿದ್ದರೆ ಯಾವುದೇ ಕಾರಣಕ್ಕೂ ಟೆಂಡರ್ ನಡೆಸಬಾರದು.

> ಕೂಡಲೇ ಕಾಂಟ್ರಾಕ್ಟ್ ಮ್ಯಾನೇಜ್‌ಮೆಂಟ್ (ಒಪ್ಪಂದ ನಿರ್ವಹಣೆ) ರದ್ದುಗೊಳಿಸಬೇಕು. 4 ವರ್ಷದಿಂದ ಬಾಕಿ ಬಿಲ್‌ಗಳಿಗೆ ಹಣ ಬಿಡುಗಡೆ ಆಗದ ಹಿನ್ನೆಲೆಯಲ್ಲಿ 1.5 ಲಕ್ಷ ಗುತ್ತಿಗೆದಾರರು ಪರದಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಹಣ ಬಿಡುಗಡೆಯಾಗದಿದ್ದರೆ ವಿಷ ಕುಡಿಯುವ ಪರಿಸ್ಥಿತಿ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.-ಆರ್.ಮಂಜುನಾಥ್

## ಪತಿ ಕೊಲೆ ಒಂದು ದಿನದ ಮಟ್ಟಿಗೆ ಪೆರೋಲ್ ನೀಡಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ನೈತಿಕತೆಯ ಆಧಾರದಲ್ಲಿ ಕಾನೂನುಬದ್ಧ ಹಕ್ಕನ್ನು ನಿರಾಕರಿಸಲಾಗುವುದಿಲ್ಲ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಮೊದಲ ಪತಿಯ ಹತ್ಯೆಗೆ ಸಂಚು ಮತ್ತು ಕೊಲೆ ಆರೋಪ ಸಾಬೀತಾಗಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಜೈಲು ಶಿಕ್ಷೆ ಅನುಭವಿಸುತ್ತಿರುವ ಪ್ರೇಮಿಗಳಿಬ್ಬರು ಪರಸ್ಪರ ಮದುವೆಯಾಗಲು ಒಂದು ದಿನದ ಮಟ್ಟಿಗೆ ಸೀಮಿತವಾಗಿ ಪೆರೋಲ್ ಮಂಜೂರು ಮಾಡಿದೆ.

ಕೊಲೆ ಪ್ರಕರಣದಲ್ಲಿ ಬೆಳಗಾವಿ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿರುವ ಶ್ರೀಧರ ಮತ್ತು ಸಿದ್ದವ್ವ ಎಂಬ ಇಬ್ಬರೂ ಅಪರಾಧಿಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜೆ.ಎಸ್. ಕಮಲ್ ಅವರಿದ್ದ ಧಾರವಾಡ ಪೀಠ, ಈ ಆದೇಶ ನೀಡಿದೆ.

ಪತಿಯನ್ನು ಹತ್ಯೆ ಮಾಡಲು ಸಂಚು ರೂಪಿಸಿದ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾದ ಇಬ್ಬರು ಅಪರಾಧಿಗಳು ಈಗ ಮದುವೆ ಕಾರಣಕ್ಕಾಗಿ ಪೆರೋಲ್ ಕೋರುತ್ತಿರುವುದು ನೈತಿಕ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ. ಆದರೂ, ಶಾಸನಬದ್ಧವಾಗಿ ನಿಷೇಧವಿಲ್ಲದಿರುವಾಗ, ಕೇವಲ ನೈತಿಕತೆಯ ಆಧಾರದ ಮೇಲೆ ಕಾನೂನುಬದ್ಧ ಹಕ್ಕನ್ನು ನಿರಾಕರಿಸಲಾಗುವುದಿಲ್ಲ. ಕಾನೂನಿನ ಚೌಕಟ್ಟಿನಲ್ಲಿ ಈ ಅರ್ಜಿಯನ್ನು ಪರಿಶೀಲಿಸಬೇಕಾಗಿದೆ ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

ಸುಪ್ರೀಂಕೋರ್ಟ್ ಮತ್ತು ವಿವಿಧ ಹೈಕೋರ್ಟ್‌ಗಳ ಆದೇಶಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, ಕೈದಿಗಳು ತಮ್ಮ ಕುಟುಂಬ ಮತ್ತು ಸಾಮಾಜಿಕ ಸಂಬಂಧಗಳನ್ನು ಕಾಯ್ದುಕೊಳ್ಳಲು ಪೆರೋಲ್ ನೀಡುವುದು ಅಪರಾಧ ಸರಿಪಡಿಸುವಿಕೆಯ ಪ್ರಮುಖ ಭಾಗವಾಗಿದೆ. ಇದು ಕೈದಿಗಳ ಪುನರ್? ವಸತಿಗೆ ನೆರವಾಗುತ್ತದೆ ಎಂದು ತಿಳಿಸಿದೆ. ಅರ್ಜಿದಾರರು ವಿಚಾರಣೆ ಮತ್ತು ಶಿಕ್ಷೆಯ ಅವಧಿ ಸೇರಿದಂತೆ ಈಗಾಗಲೇ 3 ವರ್ಷ, 5 ತಿಂಗಳು, 25 ದಿನಗಳ ಕಾಲ ಜೈಲುವಾಸ ಅನುಭವಿಸಿದ್ದಾರೆ. ಜೈಲಿನಲ್ಲಿ ಇವರ ನಡವಳಿಕೆ ಬಗ್ಗೆ ಯಾವುದೇ ಕೆಟ್ಟ ಅಭಿಪ್ರಾಯಗಳು ಇಲ್ಲ.

# ಗ್ರಾಮೀಣ ಅಂತರ್ಜಲ ಮಟ್ಟದ ವಿವರ ಸಂಗ್ರಹಕ್ಕೆ ಸಚಿವ ಈಶ್ವರ್ ಖಂಡ್ರೆ ಸೂಚನೆ

• ಉದಯವಾಹಿನಿ, ಬೆಂಗಳೂರು

ಮಳೆ ಕೊರತೆಯಿಂದ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ 5,927 ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟದ ವಿವರವನ್ನು ಸಮರೋಪಾದಿಯಲ್ಲಿ ಸಂಗ್ರಹಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಬಿ ಖಂಡ್ರೆ ಸೂಚನೆ ನೀಡಿದ್ದಾರೆ. ವಿಕಾಸಸೌಧದಲ್ಲಿಂದು ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳ


ಉದಯವಾಹಿನಿ ಚಿತ್ರ

ಸಂಖ್ಯೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚಳ ಆಗುತ್ತಿದೆ. ಬೇಸಿಗೆಯಲ್ಲಿ ಪರಿಸ್ಥಿತಿ ಇನ್ನೂ ಬಿಗಡಾಯಿಸುತ್ತದೆ.

ಹೀಗಾಗಿ ಮುಂದಿನ ಮುಂಗಾರಿನವರೆಗೆ ಎದುರಾಗಬಹುದಾದ ಕುಡಿಯುವ ನೀರಿನ ಸಮಸ್ಯೆಯನ್ನು ಅಂದಾಜಿಸಿ, ಸಮರ್ಪಕ ಯೋಜನೆ ರೂಪಿಸಿ ಎಂದು ನಿರ್ದೇಶನ ನೀಡಿದರು. ಪ್ರಸ್ತುತ ಎಷ್ಟು ಗ್ರಾಮಗಳಿಗೆ ಕೊಳವೆ ಬಾವಿ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ. ಬೇಸಿಗೆಯಲ್ಲಿ ಎಷ್ಟು ಕೊಳವೆ ಬಾವಿಗಳು ಬತ್ತಿಹೋಗುವ ಸಾಧ್ಯತೆ ಇದೆ. ಇಲ್ಲಿ ಪರ್ಯಾಯ ಜಲ ಮೂಲವೇನು. ಮೇಲ್ಮೈ ನೀರಿನ ಲಭ್ಯತೆ ಇದ್ದಲ್ಲಿ ಅಥವಾ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆದರೆ ಜಲ ಪೂರೈಕೆಗೆ ಎಷ್ಟು ಟ್ಯಾಂಕರ್ ಗಳನ್ನು ಬಾಡಿಗೆಗೆ ಪಡೆಯಬೇಕಾಗುತ್ತದೆ ಎಂಬ ಸಂಪೂರ್ಣ ಯೋಜನೆ ರೂಪಿಸುವಂತೆ ತಿಳಿಸಿದರು.ಅಂತರ್ಜಲ ಹಾಗೂ ಮೇಲ್ಮೈ ಜಲ ಎರಡೂ ಲಭ್ಯವಿಲ್ಲದಂತಹ ಸೂಕ್ಷ್ಮ ಪ್ರದೇಶಗಳಿಗೆ ಸಮೀಪದಲ್ಲಿ ಎಲ್ಲಿ ನೀರಿನ ಲಭ್ಯತೆ ಇದೆ. ಅದನ್ನು ಗ್ರಾಮಗಳಿಗೆ ಪೂರೈಸಲು ಏನೆಲ್ಲ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಈಗಿನಿಂದಲೇ ಯೋಜನೆ ರೂಪಿಸುವಂತೆ ತಿಳಿಸಿದರು.ಹಿತಮಿತವಾಗಿ ನೀರು ಬಳಸಲು ಜಾಗೃತಿ ಮೂಡಿಸಿ ರಾಜ್ಯದ ಬಹುತೇಕ ಕಡೆ ಮಳೆಯ ಕೊರತೆಯಿಂದ ಕುಡಿಯುವ ನೀರಿನ ಸಮಸ್ಯೆ ಇದ್ದು, ಗ್ರಾಮೀಣ ಜನರಿಗೆ, ಕೈಗಾರಿಕೆ, ಶಾಲೆ, ಕಾಲೇಜು, ವಿವಿಧ ಸಂಸ್ಥೆಗಳಿಗೆ ಹಿತಮಿತವಾಗಿ ನೀರು ಬಳಸುವಂತೆ ಜಾಗೃತಿ ಮೂಡಿಸಲು ಈಶ್ವರ ಖಂಡ್ರೆ ಸೂಚಿಸಿದರು.

# ಎಸ್‌ಐಆರ್ ಪ್ರಕ್ರಿಯೆಯಲ್ಲಿ ದಿನಕ್ಕೊಂದು ಗೊಂದಲಗಳು ಸೃಷ್ಟಿಯಾಗುತ್ತಿವೆ: ಡಿಸಿಎಂ

### ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಿಇಸಿ ಜ್ಞಾನೇಶ್ ಕುಮಾರ್ ಅವರನ್ನು ವಜಾಗೊಳಿಸಲು ಒತ್ತಾಯಿಸುವ ಬಗ್ಗೆ ಚರ್ಚೆ ಆಗಿದೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಹಲವು ಗೊಂದಲಗಳು ಸೃಷ್ಟಿಯಾಗುತ್ತಿದ್ದು, ಮತದಾರರ ಪಟ್ಟಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಕಾಂಗ್ರೆಸ್ ಪಕ್ಷ ಈಗಾಗಲೇ ತನ್ನ ಆಕ್ಷೇಪವನ್ನು ದಾಖಲಿಸಿದೆ ಎಂದು ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಹೇಳಿದರು. ಸದಾಶಿವನಗರದ ನಿವಾಸದ ಬಳಿ ಗುರುವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಹಲವು ದಿನಗಳಿಂದ ಎಸ್‌ಐಆರ್ ವಿಚಾರಕ್ಕೆ ಸಂಬಂಧಿಸಿ ದಿನಕ್ಕೊಂದು ಗೊಂದಲಗಳು ಸೃಷ್ಟಿಯಾಗುತ್ತಲೇ ಇವೆ. ಎಎಸ್ ಡಿಡಿಒ ವಿಚಾರದಲ್ಲೂ ಗೊಂದಲ ಉಂಟಾಯ್ತು. ಬದುಕಿರುವವರನ್ನು ಕೂಡ ಮೃತರ ಪಟ್ಟಿಗೆ ಸೇರಿಸಲಾಗಿತ್ತು. ಮತದಾರರಿಗೆ ನೋಟಿಸ್ ನೀಡುವುದರಲ್ಲೂ ಗೊಂದಲಗಳಾಗಿವೆ. ಈಗ ಮುಂದುವರಿದು ಯಾರು ಬೇಕಾದರೂ ಚುನಾವಣಾ ಆಯೋಗಕ್ಕೆ ಫಾರ್ಮ್ 7 ಅರ್ಜಿಯನ್ನು ಸಲ್ಲಿಸಿ ಬೇರೊಬ್ಬ ಮತದಾರರನ್ನು ಮತಪಟ್ಟಿಯಿಂದ ಅಳಿಸಿಹಾಕಬಹುದು ಎಂಬಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

1 ಎಲೆಕ್ಟ್ರಾನಿಕ್ ಸೂಚ್ಯಂಕ ರಚನೆ
2 ಪ್ರಾಧಿಕಾರಗಳ ಬಹಿರಂಗಪಡಿಸುವಿಕೆ
3 ಕಾಯ್ದೆಯ ಸೆಕ್ಷನ್ 25ರಡಿ ಅಗತ್ಯ

ಹೀಗಾಗಿ ದೇಶಾದ್ಯಂತ ನಡೆಯುತ್ತಿರುವ ಈ ಪ್ರಕ್ರಿಯೆಯನ್ನು ವಿರೋಧಿಸಿ ನಮ್ಮ ಪಕ್ಷದ ವತಿಯಿಂದ ಈಗಾಗಲೇ ದೂರನ್ನು ಸಲ್ಲಿಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ


ಉದಯವಾಹಿನಿ ಚಿತ್ರ

ಯಾವ ರೀತಿಯ ಬೆಳವಣಿಗೆಗಳಾಗುತ್ತವೆ ಎಂಬುದರ ಆಧಾರದ ಮೇಲೆ ನಾವು ನಿರ್ಧಾರಗಳನ್ನು ಕೈಗೊಳ್ಳುತ್ತೇವೆ ಎಂದು ಡಿಸಿಎಂ ಹೇಳಿದರು. ಈ ಕುರಿತಾಗಿ ದೆಹಲಿಯಲ್ಲಿ ಈಗಾಗಲೇ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ನಡೆಸಲಾಗಿದೆ. ಚುನಾವಣಾ ಆಯುಕ್ತರನ್ನು ವಜಾಗೊಳಿಸುವ ಕುರಿತು ಪಕ್ಷ ತೀರ್ಮಾನಿಸಿದೆ. ನಮ್ಮ ವರಿಷ್ಠರ ಸೂಚನೆಯಂತೆ ಮುಂದಿನ ನಡೆಗಳನ್ನು ನಿರ್ಧರಿಸುತ್ತೇವೆ. ನಾನು ಕೂಡ ದೆಹಲಿ ಪ್ರವಾಸದ ವೇಳೆ ಪಕ್ಷದ ವರಿಷ್ಠರನ್ನು ಭೇಟಿಯಾಗಿ ರಾಜ್ಯದ ಅನೇಕ ವಿದ್ಯಮಾನಗಳ ಬಗ್ಗೆ ಚರ್ಚಿಸಿದ್ದೇನೆ ಎಂದು ದೆಹಲಿ ಭೇಟಿಯ ಬಗ್ಗೆ ಅವರು ತಿಳಿಸಿದರು. ರಾಜ್ಯದಲ್ಲಿನ ಬರ ಪರಿಸ್ಥಿತಿಯ ಬಗ್ಗೆ ಕೇಂದ್ರಕ್ಕೆ ಮನವರಿಕೆ ಮಾಡಿಕೊಡಲು ರಾಜ್ಯದ ಸರ್ವಪಕ್ಷ ನಿಯೋಗ ಪ್ರಧಾನಿಯವರನ್ನು ಭೇಟಿಯಾಗಲು ಇನ್ನೂ ದಿನಾಂಕ ನಿಗದಿಯಾಗಿಲ್ಲ. ಈ ಕುರಿತಾಗಿ ಮುಖ್ಯಮಂತ್ರಿಯವರು ಪ್ರಧಾನಿ ಕಚೇರಿಯಿಂದ ಪ್ರತಿಕ್ರಿಯೆಯ ನಿರೀಕ್ಷೆಯಲ್ಲಿದ್ದಾರೆ. ದಿನಾಂಕ ನಿಗದಿಯಾದ ಕೂಡಲೇ ಸರ್ವಪಕ್ಷ ನಿಯೋಗವನ್ನು ಕೊಂಡೊಯ್ದು ರಾಜ್ಯದ ಸ್ಥಿತಿಗತಿಯನ್ನು ಪ್ರಧಾನಿ ಅವರಿಗೆ ಮನನ ಮಾಡಿಕೊಡಲಿದ್ದೇವೆ ಎಂದು ಜಿ. ಪರಮೇಶ್ವರ್ ಹೇಳಿದರು.

### ಮಳೆ ಕೊರತೆ ಬೆಳೆ ಹಾನಿ

ಕೇಂದ್ರದಿಂದ ರಾಜ್ಯಕ್ಕೆ ಬರುತ್ತಿರುವ ಬರ ಅಧ್ಯಯನ ತಂಡಕ್ಕೆ ಕಳೆದ ಜೂನ್ ನಿಂದ ಈವರೆಗೆ ರಾಜ್ಯದಲ್ಲಿ ಉಂಟಾಗಿರುವ ಮಳೆ ಕೊರತೆ ಹಾಗೂ ಬೆಳೆ ಹಾನಿಯ ಬಗ್ಗೆ ಮಾಹಿತಿಯನ್ನು ಒದಗಿಸಲಾಗುವುದು. ಕಳೆದ ಒಂದೆರೆಡು ದಿನಗಳಿಂದ ರಾಜ್ಯದ ಕೆಲವೆಡೆಗಳಲ್ಲಿ ಸುರಿಯುತ್ತಿದೆಯಾದರೂ ಇದರಿಂದ ರೈತರಿಗೆ ಹೆಚ್ಚಿನ ಪ್ರಯೋಜನವಿಲ್ಲ ಎಂಬುದನ್ನು ತಿಳಿಸಲಾಗುವುದು ಎಂದು ಮಾಹಿತಿ ನೀಡಿದರು.

> ತುಮಕೂರು ಲೋಕಸಭಾ ಕ್ಷೇತ್ರದ ಸಂಸದರು ಹಾಗೂ ಕೇಂದ್ರ ಸಚಿವರೂ ಆಗಿರುವ ವಿ.ಸೋಮಣ್ಣ ಅವರನ್ನು ದೆಹಲಿಯಲ್ಲಿ ಭೇಟಿಯಾಗಿ ತುಮಕೂರಿನಿಂದ ರಾಯದುರ್ಗ ಮತ್ತು ದಾವಣಗೆರೆ ಮಾರ್ಗವಾಗಿ ಚಾಲ್ತಿಯಲ್ಲಿರುವ ರೈಲ್ವೆ ಕಾಮಗಾರಿ ಮತ್ತು ಕೆಲವೆಡೆಗಳಲ್ಲಿ ಉಂಟಾಗಿರುವ ಅಡಚಣೆಗಳ ಬಗ್ಗೆ ಚರ್ಚೆ ನಡೆಸಿರುವುದಾಗಿದೇ ಡಿಸಿಎಂ ಜಿ. ಪರಮೇಶ್ವರ್

# ಹಿರಿಯರ ಪಾಲನೆಗೆ ಹಿಂದೇಟು, ಆಸ್ತಿಗೆ ಮಾತ್ರ ಪಾಲು ಕೇಳುವುದು ನೋವಿನ ಸಂಗತಿ

• **ಉದಯವಾಹಿನಿ, ಗುಂಡ್ಲುಪೇಟೆ**

ತಂದೆ-ತಾಯಿಯನ್ನ ಪೋಷಿಸಲು ಹಿಂದೇಟು ಹಾಕುವ ಮಕ್ಕಳು, ಅವರ ಆಸ್ತಿಯಲ್ಲಿ ಮಾತ್ರ ಪಾಲು ಕೇಳುವುದು ನೋವಿನ ಸಂಗತಿ ಎಂದು ಅಪರ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶ ಆರ್.ಬಿ. ಗಿರೀಶ್ ಬೇಸರ ವ್ಯಕ್ತಪಡಿಸಿದರು.ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಹಾಗೂ ತಾಲ್ಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಯಸ್ಸಾದ ತಂದೆ-ತಾಯಿಯನ್ನ ನೋಡಿಕೊಳ್ಳುವುದು ಮಕ್ಕಳ ಕರ್ತವ್ಯ ಎಂಬ ಭಾವನೆ ಹಿಂದಿನ ದಿನಗಳಲ್ಲಿ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಹಿರಿಯರ ಪಾಲನೆಗೆ ಮಕ್ಕಳು

ಉದಯವಾಹಿನಿ ಚಿತ್ರ




ಹಿಂದೇಟು ಹಾಕುತ್ತಿರುವ ಹಿನ್ನೆಲೆಯಲ್ಲಿ 2007 ರಲ್ಲಿ ಹಿರಿಯ ನಾಗರಿಕರ ಪೋಷಣೆ ಕಾಯ್ದೆ ಜಾರಿಗೆ ತರಲಾಗಿದೆ ಎಂದರು. ಮಕ್ಕಳ ನಿರ್ಲಕ್ಷ್ಯಕ್ಕೆ ಒಳಗಾದ ಹಿರಿಯ ನಾಗರಿಕರಿಗೆ ಉಚಿತ ಕಾನೂನು ನೆರವು ನೀಡಲಾಗುವುದು. ಹಿರಿಯ ನಾಗರಿಕರ ಪೋಷಣೆ ಕಾಯ್ದೆಯಡಿ ಪೋಷಣೆ ಹಾಗೂ ಕಲ್ಯಾಣಕ್ಕೆ ಸಂಬಂಧಿಸಿದಂತೆ ಕಂದಾಯ ಇಲಾಖೆಯ ಸಹಾಯಕ ಆಯುಕ್ತರಿಗೆ ಅಧಿಕಾರ ನೀಡಲಾಗಿದೆ. ತಂದೆ-ತಾಯಿಯ ಆಸ್ತಿಯನ್ನ ತಮ್ಮ ಹೆಸರಿಗೆ ಪರಭಾರೆ ಮಾಡಿಕೊಂಡು ಬಳಿಕ ಅವರನ್ನ ನಿರ್ಲಕ್ಷಿಸಿದ ಪ್ರಕರಣಗಳಲ್ಲಿ ಸೂಕ್ತ ವಿಚಾರಣೆ ನಡೆಸಿ, ಅಂತಹ ಆಸ್ತಿ ವರ್ಗಾವಣೆಯನ್ನ ರದ್ದುಪಡಿಸುವ ಅಧಿಕಾರ ಸಹಾಯಕ ಆಯುಕ್ತರಿಗೆ ಇದೆ ಎಂದು ತಿಳಿಸಿದರು.

ನ್ಯಾಯಾಧೀಶರು ಹಾಗೂ ಸಾರ್ವಜನಿಕರ ನಡುವೆ ನೇರ ಸಂವಹನದ ಅವಕಾಶ ಕಡಿಮೆ ಇರುತ್ತದೆ. ಆದರೆ ಕಂದಾಯ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಸಾರ್ವಜನಿಕರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರುವುದರಿಂದ ಹಿರಿಯ ನಾಗರಿಕರ ಸಮಸ್ಯೆಗಳ ಬಗ್ಗೆ ಹೆಚ್ಚಿನ ಅರಿವು ಹೊಂದಿರುತ್ತಾರೆ. ಹೀಗಾಗಿ ನೊಂದ ಹಿರಿಯ ನಾಗರಿಕರು ಕಾನೂನು ನೆರವು ಪಡೆಯಲು ತಾಲ್ಲೂಕು ಕಾನೂನು ಸೇವೆಗಳ ಸಮಿತಿಯನ್ನ ಸಂಪರ್ಕಿಸುವಂತೆ ತಿಳಿಸಬೇಕು ಎಂದರು. ತಹಶೀಲ್ದಾರ್ ಎಂ.ಎಸ್. ತನ್ಮಯ್ ಮಾತನಾಡಿ, ತಾಲ್ಲೂಕು ಕಚೇರಿಗೆ ವಿಧವಾ ವೇತನ, ಹಿರಿಯ ನಾಗರಿಕರ ವೇತನ, ಆಧಾರ್ ಕಾರ್ಡ್, ಖಾತೆ ಸೇರಿದಂತೆ ವಿವಿಧ ಕೆಲಸಗಳಿಗೆ ಆಗಮಿಸುವ ಹಿರಿಯ ನಾಗರಿಕರಿಗೆ ಆದ್ಯತೆ ನೀಡಿ, ಯಾವುದೇ ತೊಂದರೆಯಾಗದಂತೆ ಸೇವೆ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಕಾರ್ಯಕ್ರಮದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಅಲೀಂ ಪಾಷ, ಖಜಾನೆ ಇಲಾಖೆಯ ಸಹಾಯಕ ನಿರ್ದೇಶಕ ಮಹೇಶ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ತಾಲ್ಲೂಕು ಕಚೇರಿ ಸಿಬ್ಬಂದಿ ಉಪಸ್ಥಿತರಿದ್ದರು.

# ನೈಸ್ ರಸ್ತೆಗೆ ನೀಡಿರುವ ಜಮೀನು ವಾಪಸ್ ಕೊಡಿ

## ನೈಸ್ ರಸ್ತೆಗೆ ನಮ್ಮ ಆಕ್ಷೇಪವಿಲ್ಲ. ಆದರೆ ನೈಸ್ ರಸ್ತೆ ಹೆಸರಲ್ಲಿ ಹೆಚ್ಚುವರಿಯಾಗಿ ಜಮೀನು ತೆಗೆದುಕೊಂಡಿದ್ದಾರೆ. ಆದರೆ ಜಾಗ ಹಾಗೇ ಉಳಿದುಕೊಂಡಿದೆ.

• **ಉದಯವಾಹಿನಿ, ತುಮಕೂರು**

1 ನೈಸ್ ರಸ್ತೆಗೆ ನಮ್ಮ ಆಕ್ಷೇಪವಿಲ್ಲ
2 ಪೂಜ್ಯರಿಗೆ ಒಂದು ಭರವಸೆ ನೀಡಿ
3 ಖೇಣಿಯವರೇ ಮಠಕ್ಕೆ ಬಂದಿದ್ದರು

ನೈಸ್ ರಸ್ತೆ ಯೋಜನೆಗೆ ಸಿದ್ದಗಂಗಾ ಮಠದ ಜಮೀನು ನೀಡಿರುವ ಸಂಬಂಧ ಹಾಗೂ ನೈಸ್ ಸಂಸ್ಥೆಯ ಮುಖ್ಯಸ್ಥ ಅಶೋಕ್ ಖೇಣಿ ಅವರ ಹೇಳಿಕೆಗಳಿಗೆ ಸಂಬಂಧಿಸಿದಂತೆ ತುಮಕೂರಿನ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರು ಸ್ಪಷ್ಟನೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀಗಳು, ನಾವು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಹೋಗಿರೋದು ಸತ್ಯ. ನಮಗೆ ಬಿಡಿಎನಲ್ಲಿ ಕೆಲಸ ಆಗಬೇಕಿತ್ತು. ಎರಡರಿಂದ ಮೂರು ವಿಚಾರಗಳಲ್ಲಿ ಅವರನ್ನು ಖುದ್ದಾಗಿ ಭೇಟಿ ಮಾಡಿದ್ದೆವು. ಆ ವಿಚಾರಗಳು ಸಂಪುಟ (ಕ್ಯಾಬಿನೆಟ್) ಸಭೆಗೆ ಹೋಗಬೇಕಿದ್ದ ಕಾರಣ ಅವರ ಬಳಿ ತೆರಳಿದ್ದೆವು.

ಭೇಟಿಯಾದ ನಿಖರ ದಿನಾಂಕ ನೆನಪಿಲ್ಲ, ಸಿದ್ದರಾಮಯ್ಯನವರು ಸಿಎಂ ಆದ ಮೇಲೆಯೇ, ಸುಮಾರು ಒಂದೂವರೆ ತಿಂಗಳ ಹಿಂದೆ ಭೇಟಿಯಾಗಿದ್ದೆವು. ನಾನು ಬರ್ತೀನಿ ಅಂತ ಅವರ ಸಿಬ್ಬಂದಿ ಅವರಿಗೆ ಸರಿಯಾಗಿ ಮಾಹಿತಿ ನೀಡಿರಲಿಲ್ಲ. ಮಠದಿಂದ ಬೇರೆ ಯಾರೋ ಬರ್ತಾರೆ ಅಂತ ಅವರು ತಿಳಿದುಕೊಂಡಿದ್ದರು.

ಆದರೆ, ನೀವು ಅರ್ಜಿ ಕೊಡಲು ಬರಬೇಡಿ, ಆಶೀರ್ವಾದ ಮಾಡಲು ಬನ್ನಿ, ಕರೆದರೆ ನಾನೇ ಬರ್ತೀನಿ ಎಂದು ಅತ್ಯಂತ ಸಂಸ್ಕಾರದ ಮಾತನ್ನು ಹೇಳಿದರು. ನಮಗೆ ಅನಿವಾರ್ಯ ಪರಿಸ್ಥಿತಿ ಇತ್ತು. ನಮ್ಮ ಸಮಸ್ಯೆಯನ್ನು ಮಧ್ಯದಲ್ಲಿ ಯಾರಿಗೂ ಹೇಳದೆ ನೇರವಾಗಿ ಹೇಳುವುದು ಒಳ್ಳೆಯದು ಎಂದು ತೆರಳಿದ್ದೆವು. ರೈತರು ಕೂಡ ಬಹಳ ಒತ್ತಾಯ ಮಾಡುತ್ತಿದ್ದರಿಂದ ಅನಿವಾರ್ಯವಾಗಿ ಹೋಗಬೇಕಾಯಿತು ಎಂದು ಶ್ರೀಗಳು ವಿವರಿಸಿದರು.

ಅಶೋಕ್ ಖೇಣಿ ಪೂಜ್ಯರಿಗೆ ಒಂದು ಭರವಸೆ ನೀಡಿದ್ದರು. ಪತ್ರದಲ್ಲಿ ಬರೆದುಕೊಟ್ಟು ಸೈಟ್ ನೀಡುವುದಾಗಿ ಹೇಳಿದ್ದರು. ಜೊತೆಗೆ ಮಠಕ್ಕೆ ನಿಶ್ಚಿತ ಆದಾಯ ಬರುವಂತೆ ಮಾಡಿಕೊಡ್ತೀನಿ ಎಂದು ಭರವಸೆ ನೀಡಿದ್ದರು. ಆದರೆ ಅದ್ಯಾವುದೂ ಈಡೇರಿಲ್ಲ. ಕಳೆದ 8 ವರ್ಷಗಳಿಂದ ಅವರನ್ನು ಸಂಪರ್ಕ ಮಾಡಲು ಸತತ ಪ್ರಯತ್ನ ಮಾಡುತ್ತಿದ್ದೇವೆ, ಅದ್ಯಾವುದೂ ಆಗಿಲ್ಲ.

ಅವರಿಗೆ ಪತ್ರ ಬರೆದರೂ ಉತ್ತರ ನೀಡಿಲ್ಲ. ಈಗ ರೈತರು ಮಠದವರೇ ಕೊಟ್ಟಿದ್ದಾರೆ, ನಮ್ಮದೇನು ಎಂದು ಜಮೀನು ನೀಡಿದ್ದೆವು, ನೀವು ಬನ್ನಿ ಎಂದು ಒತ್ತಾಯ ಮಾಡಿದರು. ಸಿಎಂ ಭೇಟಿ ಮಾಡೋಣ ಎಂದು ಒತ್ತಾಯಿಸಿದ ಹಿನ್ನೆಲೆಯಲ್ಲಿ ಹೋಗಿದ್ದೆವು. ರಸ್ತೆಗೆ ಬಳಸಿಕೊಂಡಿರುವುದನ್ನು ಬಿಟ್ಟು ಉಳಿಕೆ ಜಮೀನನ್ನು ರೈತರಿಗೆ ವಾಪಸ್ ಕೊಡಿ ಎಂದು ಕೇಳಿದ್ದೇವೆ. ಅದೇನು ತೀರ್ಮಾನ ಮಾಡ್ತಾರೋ ಗೊತ್ತಿಲ್ಲ, ಅದನ್ನು ಬಿಟ್ಟು ಬೇರೆ ವಿಚಾರವಿಲ್ಲ ಎಂದು ಸ್ಪಷ್ಟಪಡಿಸಿದರು.

ಸೋಂಪುರ ಅಕ್ಕಪಕ್ಕದಲ್ಲಿ ಜಮೀನಿದೆ. ಇದರಲ್ಲಿ ಎರಡು ಎಕರೆ ಮಾತ್ರ ರಸ್ತೆಗೆ ಬಳಸಿಕೊಂಡಿದ್ದಾರೆ, ಉಳಿದ 6 ಎಕರೆ ಜಮೀನು ಹಾಗೆಯೇ ಇದೆ. ನಮ್ಮದು 6 ಎಕರೆ ಇದ್ದರೆ, ರೈತರದ್ದು ಬೇರೆ ಬೇರೆ ಪ್ರಮಾಣದಲ್ಲಿದೆ. ಸ್ವಾಧೀನ ಮಾಡಿಕೊಂಡ ಜಮೀನನ್ನು 25 ವರ್ಷಗಳಲ್ಲಿ ಬಳಸಿಕೊಳ್ಳದೆ ಇದ್ದರೆ ವಾಪಸ್ ಕೊಡುವಂತೆ ಸುಪ್ರೀಂ ಕೋರ್ಟ್ ಆದೇಶವಿದೆಯಂತೆ. ಹಾಗಾಗಿ ಜಮೀನು ವಾಪಸ್ ನೀಡುವಂತೆ ಕೇಳಿಕೊಂಡಿದ್ದೇವೆ ಎಂದು ನುಡಿದರು.

ಉದಯವಾಹಿನಿ ಚಿತ್ರ



> 2001-2002ರಲ್ಲಿ ಖೇಣಿಯವರೇ ಮಠಕ್ಕೆ ಬಂದಿದ್ದರು. ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿ ಅವರನ್ನು ಒಪ್ಪಿಸಿದ್ದರು. ಸೋಂಪುರದಲ್ಲಿ ಮಠಕ್ಕೆ ಸೇರಿದ 7 ಎಕರೆ 39 ಗುಂಟೆ ಜಮೀನಿತ್ತು, ಅದನ್ನು ಭಕ್ತರೊಬ್ಬರು ದಾನವಾಗಿ ನೀಡಿದ್ದರು. ಆ ಜಮೀನು ಹಾಗೆಯೇ ಇತ್ತು. ರಸ್ತೆಗೆ ಬೇಕಿದೆ ಕೊಡಿ ಎಂದು ಅವರು ಕೇಳಿದ್ದರು ಎಂದರು.
> -ಶ್ರೀ ಸಿದ್ದಲಿಂಗ ಸ್ವಾಮೀಜಿ

**ಜಮೀನು ವಾಪಸ್ ಕೊಡಿ ಎಂದು ರೈತರು ಒತ್ತಾಯ**

ನೈಸ್ ರಸ್ತೆಗೆ ನಮ್ಮ ಆಕ್ಷೇಪವಿಲ್ಲ. ಆದರೆ ನೈಸ್ ರಸ್ತೆ ಹೆಸರಲ್ಲಿ ಹೆಚ್ಚುವರಿಯಾಗಿ ಜಮೀನು ತೆಗೆದುಕೊಂಡಿದ್ದಾರೆ. ರಸ್ತೆ ಆದ್ಮೇಲೆ ಟೋಲ್ ಬಳಸುತ್ತಿದ್ದಾರೆ, ಆದರೆ ಜಾಗ ಹಾಗೇ ಉಳಿದುಕೊಂಡಿದೆ. ಹೀಗಾಗಿ ಉಳಿದ ಜಮೀನು ವಾಪಸ್ ಕೊಡಿ ಎಂದು ರೈತರು ಒತ್ತಾಯ ಮಾಡುತ್ತಿದ್ದಾರೆ. ನಮ್ಮ ಜೊತೆಗೆ ಜಮೀನು ಕೊಟ್ಟಂತಹ ರೈತರು ಬಹಳ ಜನರಿದ್ದಾರೆ.

# ಮೆಡಿಕಲ್ ಕಾಲೇಜು ಕಟ್ಟಡ ವೀಕ್ಷಣೆ

• **ಉದಯವಾಹಿನಿ, ಕನಕಪುರ**

ಉದಯವಾಹಿನಿ ಚಿತ್ರ



ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಅವರು ತಾಲ್ಲೂಕಿನ ರಾಯಸಂದ್ರದ ಭೂಮಿಯಲ್ಲಿ ನಿರ್ಮಾಣವಾಗುತ್ತಿರುವ ಮೆಡಿಕಲ್ ಕಾಲೇಜು ಕಟ್ಟಡದ ಕಾಮಗಾರಿಯನ್ನು ವೀಕ್ಷಿಸಿದರು. ರಾಯಸಂದ್ರದ ಬಳಿಯಿರುವ ರಾಷ್ಟ್ರಕವಿ ಕುವೆಂಪು ವಸತಿ ಬಡಾವಣೆ ಪಕ್ಕದಲ್ಲಿ ನಿರ್ಮಾಣವಾಗುತ್ತಿರುವ ಸರ್ಕಾರಿ ಮೆಡಿಕಲ್ ಕಾಲೇಜು ಕಾಮಗಾರಿಯನ್ನು ಇದೇ ಮೇ 4 ರಂದು ಗುದ್ದಲಿ ಪೂಜೆ ನೆರವೇರಿಸಲಾಗಿತ್ತು. ಈ ಯೋಜನೆಯನ್ನು 18 ತಿಂಗಳ ಒಳಗೆ ಪೂರ್ಣಗೊಳ್ಳುವಂತೆ ಗುತ್ತಿಗೆದಾರರಿಗೆ ವಾಗ್ದಾನ ಕಲ್ಪಿಸಲಾಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಅವರ ಕನಕಪುರದಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ತರಿಸಲೆಂಬ ಬಹು ವರ್ಷಗಳ ಕನಸು ನನಸಾಗುತ್ತಿದೆ.

ಈ ಸಂದರ್ಭ ಡಿ.ಕೆ. ಸುರೇಶ್ ಅವರು ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದರು. ಒಟ್ಟು 25 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಈ ಕಾಲೇಜಿನ ಕಾಮಗಾರಿ ತ್ವರಿತಗತಿಯಲ್ಲಿ ನಡೆಯುತ್ತಿದ್ದು, ರಾಯಸಂದ್ರ ಗ್ರಾಮದ ಇಬ್ಬರು ತಮ್ಮ ಭೂಮಿಯನ್ನು ಈ ಕಟ್ಟಡ ಯೋಜನೆಗೆ ನೀಡಲು ಒಪ್ಪಿಗೆ ಸೂಚಿಸಿದ್ದಾರೆ. ಈ ಬಗ್ಗೆ ಡಿ.ಕೆ. ಸುರೇಶ್ ಅವರು ಅವರೊಂದಿಗೆ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ವೈದ್ಯಕೀಯ ವಿಭಾಗದ ಅಧಿಕಾರಿಗಳು, ಹೌಸಿಂಗ್ ಬೋರ್ಡ್‌ನ ಕನಕಪುರ ವಿಭಾಗದ ಇಂಜಿನಿಯರ್ ಪ್ರಮೋದ್, ಬೆಸ್ಕಾಂ ಇಂಜಿನಿಯರ್ ಕೃಷ್ಣಮೂರ್ತಿ, ಜಿಲ್ಲಾ ದಿಶಾ ಸಮಿತಿ ಸದಸ್ಯರು ಮತ್ತು ಕಾಂಗ್ರೆಸ ಮುಖಂಡರಾದ ರಾಯಸಂದ್ರ ರವಿ, ಗ್ಯಾರಂಟಿ ಸಮಿತಿಯ ತಾ. ಅಧ್ಯಕ್ಷರಾದ ದಿಲೀಪ್, ಡಿ.ಎಂ. ವಿಶ್ವನಾಥ್, ರಾಯಸಂದ್ರ ಗ್ರಾಮಸ್ಥರು ಮತ್ತು ಬ್ಲಾಕ್ ಕಾಂಗ್ರೆಸ್ಸಿನ ಮುತ್ತುರಾಜ್, ಮಧು, ಎಸ್.ಎ. ನಾಗರಾಜು ಉಪಸ್ಥಿತರಿದ್ದರು.

# ಬಂಡೀಪುರದಲ್ಲಿ ಆನೆಯತ್ತ ಲಾರಿ ನುಗ್ಗಿಸಿದ ಪ್ರಕರಣ: ಮಾಲೀಕರಿಗೆ 5 ಸಾವಿರ ದಂಡ

• **ಉದಯವಾಹಿನಿ, ಗುಂಡ್ಲುಪೇಟೆ**

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಸ್ತೆ ದಾಟುತ್ತಿದ್ದ ಒಂಟಿ ಸಲಗದತ್ತ ಲಾರಿ ಮುನ್ನುಗ್ಗಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಲಾರಿ ಮಾಲೀಕರನ್ನು ಪತ್ತೆಹಚ್ಚಿರುವ ಅರಣ್ಯ ಇಲಾಖೆ ಅಧಿಕಾರಿಗಳು 5 ಸಾವಿರ ದಂಡ ವಿಧಿಸಿ ಎಚ್ಚರಿಕೆ ನೀಡಿದ್ದಾರೆ. ಬುಧವಾರ ಸಂಜೆ ಬಂಡೀಪುರ ಹೆದ್ದಾರಿಯಲ್ಲಿ ರಸ್ತೆ ದಾಟುತ್ತಿದ್ದ ಒಂಟಿ ಸಲಗದತ್ತ ಲಾರಿ ಮುನ್ನುಗ್ಗಿದ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು.



ಈ ಕುರಿತು ಉದಯವಾಹಿನಿ ಪತ್ರಿಕೆಯಲ್ಲಿ ವರದಿ ಪ್ರಕಟವಾದ ಬೆನ್ನಲ್ಲೇ ಪ್ರಕರಣವನ್ನ ಗಂಭೀರವಾಗಿ ಪರಿಗಣಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಲಾರಿಯ ನೋಂದಣಿ ಸಂಖ್ಯೆ ಆಧರಿಸಿ ಮಾಲೀಕರನ್ನ ಪತ್ತೆಹಚ್ಚಿದ್ದಾರೆ.

ಪ್ರಕರಣದಲ್ಲಿ ತ್ವರಿತವಾಗಿ ಕ್ರಮ ಕೈಗೊಂಡ ಬಂಡೀಪುರ ವ್ಯಾಪ್ತಿಯ ವಲಯ ಅರಣ್ಯಾಧಿಕಾರಿ ಮೋಹನ್ ಕುಮಾರ್ ಅವರ ಕಾರ್ಯವೈಖರಿಗೆ ವನ್ಯಜೀವಿಪ್ರಿಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

**ದಂಡ ವಿಧಿಸಿ ಎಚ್ಚರಿಕೆ**

ಉದಯವಾಹಿನಿ ಫಲಶ್ರುತಿ IMPACT

ಕೆಎಲ್-58-ಪಿ-7540 ನೋಂದಣಿ ಸಂಖ್ಯೆಯ ಲಾರಿಯ ಮಾಲೀಕ ಜೀನ್ಸದ್ ಎಂಬುವವರಿಗೆ 5 ಸಾವಿರ ದಂಡ ವಿಧಿಸಿ ಎಚ್ಚರಿಕೆ ನೀಡಲಾಗಿದೆ. ಅರಣ್ಯ ಮಾರ್ಗದಲ್ಲಿ ವನ್ಯಜೀವಿಗಳು ರಸ್ತೆಗೆ ಬರುವುದು ಸಾಮಾನ್ಯವಾಗಿದ್ದು, ವಾಹನ ಚಾಲಕರು ಎಚ್ಚರಿಕೆಯಿಂದ ಸಂಚರಿಸಬೇಕು. ವನ್ಯಜೀವಿಗಳ ಜೀವಕ್ಕೆ ಅಪಾಯ ಉಂಟುಮಾಡುವ ರೀತಿಯಲ್ಲಿ ವಾಹನ ಚಲಾಯಿಸುವುದು ಸರಿಯಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಉದಯವಾಹಿನಿ ಚಿತ್ರ



# ಮಾಲೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಬಲವನ್ನು ಹೆಚ್ಚಿಸುತ್ತಿದೆ

• **ಉದಯವಾಹಿನಿ, ಮಾಲೂರು**

ತಾಲ್ಲೂಕಿನಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳು ಹಾಗೂ ಪ್ರಗತಿಯನ್ನು ಗಮನಿಸಿ ವಿವಿಧ ಗ್ರಾಮಗಳ ಯುವಕರು ಬಿಜೆಪಿ ಮತ್ತು ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದು, ಮುಂಬರುವ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲೆಯ ಚುನಾವಣೆಗಳ ರೈತ ನೀತಿಯಿಂದ ಮೈತ್ರಿ ಬಲಗೊಳ್ಳುತ್ತಿದೆ ಎಂದು ಶಾಸಕ ಕೆ.ವೈ. ನಂಜೇಗೌಡ ಹೇಳಿದರು. ತಾಲ್ಲೂಕಿನ ಟೇಕಲ್ ಹೋಬಳಿಯ ಕೆ.ಜಿ.ಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಓಬಟ್ಟಿ ಗ್ರಾಮದಲ್ಲಿ ಯುವ ಮುಖಂಡ ಚಲಪತಿ ನೇತೃತ್ವದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಂದ ಹಲವರು ಕಾಂಗ್ರೆಸ್ ಸೇರ್ಪಡೆಯಾದ ಸಂದರ್ಭದಲ್ಲಿ ಪಕ್ಷದ ಧ್ವಜ ನೀಡಿ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದರು. ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಕಾಂಗ್ರೆಸ್ ಪಕ್ಷ ಸೇರುತ್ತಿರುವುದು ಬದಲಾವಣೆಯ ಸಂಕೇತವಾಗಿದೆ. ಪಟಾಲಮ್ಮನ ಬೆಟ್ಟದ ಸಾಲಿನಲ್ಲಿರುವ ಹಲವು ಗ್ರಾಮಗಳಿಂದ ಈ ಹಿಂದೆ ನಿರೀಕ್ಷಿತ ಮಟ್ಟದ ಸಹಕಾರ ದೊರೆಯುತ್ತಿರಲಿಲ್ಲ. ಆದರೆ ಇದೀಗ ಈ ಭಾಗದ ಜನರು ಅಭಿವೃದ್ಧಿಯನ್ನು ಬಯಸುತ್ತಿದ್ದು, ಕಾಂಗ್ರೆಸ್ ಪಕ್ಷಕ್ಕೆ ಉತ್ತಮ ಬೆಂಬಲ ನೀಡುತ್ತಿದ್ದಾರೆ. ಓಬಟ್ಟಿ ಗ್ರಾಮದಲ್ಲಿ ಯುವಕರು ಪಕ್ಷಕ್ಕೆ ಸೇರ್ಪಡೆಯಾಗಿರುವುದು ಸಂತಸ ತಂದಿದೆ ಎಂದರು.

# ಕುರುಡುಮಲೆ ಗಣಪತಿಗೆ ಪೂಜೆ ಸಲ್ಲಿಸಿ ರಾಜ್ಯ ಪ್ರವಾಸಕ್ಕೆ ವಿಜಯೇಂದ್ರ ಚಾಲನೆ

• **ಉದಯವಾಹಿನಿ, ಕೋಲಾರ**

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಅವರು ರಾಜ್ಯ ಪ್ರವಾಸಕ್ಕೆ ಚಾಲನೆ ನೀಡಿದ್ದು, ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಪ್ರಸಿದ್ಧ ಕುರುಡುಮಲೆ ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಸಾರ್ವಜನಿಕ ಜೀವನದ 25 ವರ್ಷಗಳ ಹಿನ್ನೆಲೆಯಲ್ಲಿ ಬಿಜೆಪಿ ಹಮ್ಮಿಕೊಂಡಿರುವ 'ಸೇವಾ ಸಂಕಲ್ಪ ಅಭಿಯಾನ' ಹಾಗೂ 'ಬೂತ್ ವಿಜಯ ಸಂಕಲ್ಪ ಯಾತ್ರೆ'ಯ ಭಾಗವಾಗಿ ವಿಜಯೇಂದ್ರ ರಾಜ್ಯ ಪ್ರವಾಸ ಕೈಗೊಂಡಿದ್ದಾರೆ.

ಅ.1ರಿಂದ ಆರಂಭವಾಗಿರುವ ಈ ಅಭಿಯಾನದಲ್ಲಿ ಮೊದಲ ಹಂತದಲ್ಲಿ ಹಲವು ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಿ ಪಕ್ಷದ ಸಂಘಟನಾ ಚಟುವಟಿಕೆಗಳಲ್ಲಿ ಭಾಗವಹಿಸುವ ಕಾರ್ಯಕ್ರಮವಿದೆ.ಕುರುಡುಮಲೆ ವಿನಾಯಕನ ಸನ್ನಿಧಿಯಲ್ಲಿ ವಿಜಯೇಂದ್ರ, ವಿಶೇಷ ಪೂಜೆ ಸಲ್ಲಿಸಿ ಸಂಕಲ್ಪ ಮಾಡಿದ್ದಾರೆ. ಬಳಿಕ ಕೋಲಾರ ಜಿಲ್ಲೆಯ ಬಂಗಾರಪೇಟೆ ಹಾಗೂ ಕೆ.ಜಿ.ಎಫ್ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರವಾಸ ಕೈಗೊಂಡು ಸಂಘಟನಾ ಸಭೆಗಳಲ್ಲಿ ಭಾಗವಹಿಸಿದ್ದಾರೆ.



ಉದಯವಾಹಿನಿ ಚಿತ್ರ

ಈ ವೇಳೆ ದೇವಾಲಯದ ಆವರಣದಲ್ಲಿ ಗಿಡ ನೆಡುವ ಸಂದರ್ಭದಲ್ಲಿ ಕೆಲ ಕಾರ್ಯಕರ್ತರು 'ಮುಂದಿನ ಮುಖ್ಯಮಂತ್ರಿ ಬಿ.ವೈ. ವಿಜಯೇಂದ್ರ' ಎಂದು ಘೋಷಣೆ ಕೂಗಿ ಸಂಭ್ರಮಿಸಿದ್ದಾರೆ. ಬಳಿಕ ವಿಜಯೇಂದ್ರ ಅವರು ನರೇಂದ್ರ ಮೋದಿ ಅವರಿಗೆ ಜೈಕಾರ ಕೂಗುವಂತೆ ಕಾರ್ಯಕರ್ತರಿಗೆ ಹೇಳಿದ್ದಾರೆ.

# ಹಿರಿಯರೇ ಸಮಾಜದ ಆಸ್ತಿ

• **ಉದಯವಾಹಿನಿ, ಮೈಸೂರು**

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಸರ್ಕಾರದ ಹಲವು ಇಲಾಖೆಗಳು ಹಾಗೂ ಹಿರಿಯ ನಾಗರಿಕರಿಗಾಗಿ ಶ್ರಮಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳ ಸಹಯೋಗದಲ್ಲಿ ಮೈಸೂರು ಜೆಎಸ್ ಎಸ್ ಆಸ್ಪತ್ರೆಯ ಶ್ರೀರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ -2026ರ ಸಂದರ್ಭದಲ್ಲಿ ಜಿಲ್ಲೆಯ ಹಲವು ವಿಶೇಷ ಸಾಧಕರೊಂದಿಗೆ ಮಾತೃ ಶ್ರೀ ಚೂಡಾರತ್ನಮ್ಮನವರನ್ನು ಸನ್ಮಾನಿಸಲಾಯಿತು.




ಉದಯವಾಹಿನಿ ಚಿತ್ರ

# ಅಕ್ಕ ಪಡೆಯಿಂದ ವಿವಿಧೆಡೆ ಜಾಗೃತಿ

• **ಉದಯವಾಹಿನಿ, ನಾಪೋಕ್ಲು**

ಮಹಿಳೆಯರು, ಮಕ್ಕಳು ಹಾಗೂ ಕಾರ್ಮಿಕರ ಸುರಕ್ಷತೆ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ 'ಅಕ್ಕಪಡೆ' ಸಿಬ್ಬಂದಿ ವಿವಿಧ ಗ್ರಾಮಗಳಲ್ಲಿ ಸಂಚರಿಸಿ ಜಾಗೃತಿ ಅಭಿಯಾನ ಹಾಗೂ ಪರಿಶೀಲನೆ ನಡೆಸಿದರು. ತಂಡವು ಕಾಟಕೇರಿ, ಹೆರವನಾಡು, ಬೆಟ್ಟಗೇರಿ, ಐವತ್ತೊಕ್ಲು ಕಾಲೊನಿ, ಬೆಂಗೂರು ನಿಸರ್ಗ ಕಾಲೊನಿ ಹಾಗೂ ಚೇರಂಬಾಣೆ ವಾರದ ಸಂತೆಯ ಸ್ಥಳಗಳಿಗೆ ತೆರಳಿ, ಅಲ್ಲಿನ ತೋಟದ ಲೈನ್ ಮನೆಗಳಿಗೆ ಭೇಟಿ ನೀಡಿತು. ಈ ಸಂದರ್ಭದಲ್ಲಿ ಲೈನ್ ಮನೆಗಳಲ್ಲಿ ವಾಸಿಸುತ್ತಿರುವ ಪ್ರತಿಯೊಬ್ಬರು ತಮ್ಮ ಗುರುತಿನ ದಾಖಲಾತಿಗಳನ್ನು ವ್ಯಾಪ್ತಿಯ ಪೊಲೀಸ್ ಠಾಣೆಗೆ ಕಡ್ಡಾಯವಾಗಿ ಸಲ್ಲಿಸುವಂತೆ ಸೂಚಿಸಲಾಯಿತು.

# ಭಲವಾದಿ ಸಮುದಾಯ ಸಂಘಟನೆಯ ಸಂಕಲ್ಪ

## ಜಿಲ್ಲಾ ಸಂಚಾಲಕರು ಎಲ್ಲಾ ತಹಶೀಲಿಗೆ ಭೇಟಿ ನೀಡಿ ಸಮಿತಿಗಳನ್ನು ರಚಿಸಬೇಕಾಗಿದೆ ಹಾಗೂ ಸದಸ್ಯತ್ವ ಅಭಿಯಾನ ನಡೆಸಬೇಕು

• **ಉದಯವಾಹಿನಿ, ಕೋಲಾರ**

ರಾಜ್ಯದಲ್ಲಿ ಬಲಗೈ ಸಮುದಾಯದ ಉಪಜಾತಿಗಳೆಲ್ಲಾ ಸಂಘಟಿತರಾಗಿ ಭಲವಾದಿ ಸಂಗಮದಲ್ಲಿ ಗುರುತಿಸಿಕೊಳ್ಳಲು ಈ ಸಂಗಮವನ್ನು ರಚಿತ ಮಾಡುವಂತೆ ಹುಟ್ಟು ಹಾಕಲಾಗಿದೆ. ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಎಂಬ ಹೆಸರಿನಲ್ಲಿ ಪರಿಚಿತರಾಗಿರುವ ಉಪಜಾತಿಗಳನ್ನು ಒಗ್ಗೂಡಿಸಲು ಈ ಸಂಗಮವನ್ನು ರಚಿಸಲಾಗಿದೆ. ಪಕ್ಷಾತೀತವಾಗಿ ಈ ಚಲವಾದಿ ಸಂಗಮದ ಸಂಘಟನೆ ಮಾಡಲಾಗಿದೆ ಎಂದು ರಾಜ್ಯ ಭಲವಾದಿ ಸಂಗಮದ ಅಧ್ಯಕ್ಷ ನವೀನ್ ಮಾನೆ ತಿಳಿಸಿದ್ದಾರೆ.

1 2 ತಿಂಗಳ ಹಿಂದೆ ಚಾಲನೆ ನೀಡಲಾಗಿದೆ
2 ದಲಿತ ಚಳವಳಿಯ ಸಂಘಟನೆ ಸೇರಿಸಿ
3 ಹಕ್ಕುಗಳಿಗಾಗಿ ಸಮರವನ್ನು ನಡೆಸುವುದು

ನಗರದ ಪತ್ರಕರ್ತರ ಭವನದಲ್ಲಿ ನವೀನ್ ಮಾನೆ ಅವರು ಮಾತನಾಡಿ, ಭಲವಾದಿ ಸಂಗಮವನ್ನು ರಾಜ್ಯಾದ್ಯಂತ ಸಂಘಟಿಸಲು ಪ್ರವಾಸ ಹಮ್ಮಿಕೊಂಡಿದೆ. ಬಲಗೈ ಸಮುದಾಯದಲ್ಲಿ 101 ಉಪಜಾತಿಗಳಿವೆ. ಭಲವಾದಿ ಸಂಗಮವನ್ನು ಪ್ರತಿ ತಹಶೀಲಿನಲ್ಲಿ ಸಂಘಟಿಸಲು 11 ಮಂದಿ ಜಿಲ್ಲಾಸಂಚಾಲಕರನ್ನು ನೇಮಿಸಲಾಗಿದೆಯೆಂದು ಹೇಳಿದರು. ಈ ಸಂಗಮದ ಸದಸ್ಯರು ರಾಜಕೀಯದಿಂದ ದೂರವಿರಬೇಕು. ಅವರು ಯಾವುದೇ ಚುನಾವಣೆಯಲ್ಲಿ ಭಾಗವಹಿಸಬಾರದು. ಈ ಸಂಗಮದಲ್ಲಿ ದಲಿತ ಚಳವಳಿಯ ಸಂಘಟನೆಯನ್ನು ಸೇರಿಸಿ ಸಮರ ಸೂರಿನಡಿ ಒಂದುಗೂಡಿಸಿ ಕೊಳ್ಳುವ ನಿಟ್ಟಿನಲ್ಲಿ ಕಳೆದ 2 ತಿಂಗಳ ಹಿಂದೆ ಚಾಲನೆ ನೀಡಲಾಗಿದೆ ಎಂದರು.

ಜಿಲ್ಲಾ ಸಂಚಾಲಕರು ಎಲ್ಲಾ ತಹಶೀಲಿಗೆ ಭೇಟಿ ನೀಡಿ ಸಮಿತಿಗಳನ್ನು ರಚಿಸಬೇಕಾಗಿದೆ ಹಾಗೂ ಸದಸ್ಯತ್ವ ಅಭಿಯಾನ ನಡೆಸಬೇಕು. ನಂತರ, ವೀರಶೈವ ಮತ್ತು ಒಕ್ಕಲಿಗ ಸಮುದಾಯ ಮಾದರಿಯಲ್ಲಿ ಸಂಘಟಿಸಲು ಮುಖ್ಯ ಸಮಿತಿಯನ್ನು ಆಯ್ಕೆ ಮಾಡಲು ಚುನಾವಣೆಗಳನ್ನು ನಡೆಸಲಾಗುವುದು. ಬಲಗೈ ಸಮುದಾಯದ ಕುಂದು ಕೊರತೆಗಳು, ಸರ್ಕಾರದ ಸೌಲಭ್ಯಗಳು, ನಮ್ಮ ಹಕ್ಕುಗಳಿಗಾಗಿ ಸಮರವನ್ನು ನಡೆಸುವುದು ಭಲವಾದಿ ಸಂಗಮದ ಮುಖ್ಯ ಧ್ಯೇಯವಾಗಿದೆ ಎಂದು ವಿವರಿಸಿದರು.

ಜಿಲ್ಲಾ ಸಂಚಾಲಕ ರಾಗಿ ಶ್ರೀನಿವಾಸಪ್ಪ, ನಾಗಪ್ಪ, ಚಲಪತಿ, ಎಸ್. ರವೀಂದ್ರ, ಅಂಬರೀಷ್, ಅಂಜನಪ್ಪ, ತಿಮ್ಮರಾಜು, ಬಿ. ಮೂರಳಿ, ವೆಂಕಟೇಶ್, ನರಸಿಂಹಮೂರ್ತಿ, ಮಂಜುನಾಥ್ ಸೇರಿದ 11 ಮಂದಿಯ ಪಟ್ಟಿಯನ್ನು ಬಿಡುಗಡೆ ಮಾಡಿದರು.ಪಾಂಚಗ್ಯಾರಂಟಿ ಯೋಜನೆಗಳ ಸೌಲಭ್ಯಗಳಿಂದ ಬಲಗೈ ಸಮುದಾಯ ವನ್ನು ವಂಚಿಸುತ್ತಿರುವುದು ಹಾಗೂ ಎಸ್.ಸಿ.ಟಿ.ಎಸ್.ಪಿ. ಯೋಜನೆಯ ಅನುದಾನ ದುರ್ಬಳಕೆ ಮಾಡಿರುವ ಸ್ಥಿತಿಯನ್ನು ಖಂಡಿಸಿದರು. ಹಾಸ್ಟೆಲ್ ಶುಲ್ಕದ ಉಳಿತಾಯಕ್ಕಾಗಿ ಸರ್ಕಾರವು ಉನ್ನತ ಶಿಕ್ಷಣದ ವಿದೇಶ ವ್ಯಾಸಂಗಕ್ಕೆ ವಿದ್ಯಾರ್ಥಿ ವೇತನ ನೀಡಬೇಕು, ಆದರೆ ಆಸ್ತಿ ಮಾರಿ ಬಡವರ ಪೋಷಕರು ಬೀದಿ ಪಾಲಾಗುವಂತಾಗಿದೆ ಎಂದು ಸರ್ಕಾರಕ್ಕೆ ಆಗ್ರಹ ಮಾಡಿದ್ದಾರೆ.ಪ್ರತ್ಯೇಕ ಸಂಬಂಧಿಸಿದಂತೆ ಅಟ್ರಾಸಿಟಿ ಕಾನೂನುಗಳನ್ನು ದುರ್ಬಳಕೆ ಮಾಡಬಾರದು ಸಮಾಜದಲ್ಲಿ ಸಮಾನತೆ, ಸಾಮರಸ್ಯ ಉಳಿಸಲು ಜಾಗೃತಿ ಆಂದೋಲನಗಳನ್ನು ಆಯೋಜಿಸಲಾಗುತ್ತಿದೆ. ಪತ್ರಿಕಾಗೋಷ್ಠಿಯಲ್ಲಿ ಭಲವಾದಿ ಮಹಾ ಸಂಗಮದ ವೆಂಕಟಚಲಪತಿ, ಮಾರ್ಜೇನಹಳ್ಳಿ ಬಾಬು, ಪ್ರತಾಪ್, ಮಲ್ಲಸಂದ್ರ ಶ್ರೀನಿವಾಸ್, ಕರವೇ ಶೇಖರ್, ವೆಂಕಟಚಲಪತಿ, ಕಿರಣ್ ಉಪಸ್ಥಿತರಿದ್ದರು.




ಉದಯವಾಹಿನಿ ಚಿತ್ರ

> ಈ ಸಂಘಟನೆಯು ಸ್ವತಂತ್ರವಾಗಿ, ರಾಜಕೀಯೇತರವಾಗಿ, ಎಲ್ಲಾ ಭಾಷೆಗಳನ್ನು ಒಳಗೊಂಡಂತೆ ಎಲ್ಲಾ ಉಪಜಾತಿಗಳನ್ನು ಒಂದೇ ವೇದಿಕೆಯಡಿ ಸಂಘಟಿಸುವ ಪ್ರಯತ್ನದಲ್ಲಿದೆ ಎಂದರು. -ಪ್ರೊ. ನಾರಾಯಣಸ್ವಾಮಿ

> ಕಾಂಗ್ರೆಸ್ ಸರ್ಕಾರವು ಕಳೆದ ಮೂರುವರೆ ವರ್ಷದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿರೋಧವಾಗಿ ಕಾರ್ಯನೇರವೇರಿಸಿದ ಘಟನೆಯನ್ನು ಖಂಡಿಸಿ, ಸರ್ಕಾರದ ವಿರುದ್ಧ ಪ್ರಕ್ರಿಯೆ ಬೇಕು ಎಂದು ಮನವಿ ಮಾಡಿದರು.
> - ಶ್ರೀನಿವಾಸ್

# ಮಿನಿ ನ್ಯೂಸ್

## 18,600 ಜಾನುವಾರುಗಳಿಗೆ ವಿಮೆ, 1.86 ಕೋಟಿ ಪರಿಹಾರ




ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚಿಕ್ಕನಾಯಕನಹಳ್ಳಿ**

ತಾಲ್ಲೂಕಿನಲ್ಲಿ ಈವರೆಗೆ 18,600 ಜಾನುವಾರುಗಳಿಗೆ ವಿಮೆ ಮಾಡಿಸಲಾಗಿದ್ದು, ಮೃತಪಟ್ಟ 300 ರಾಸುಗಳ ಮಾಲೀಕರ ಬ್ಯಾಂಕ್ ಖಾತೆಗಳಿಗೆ 1.86 ಕೋಟಿ ಪರಿಹಾರ ಜಮೆ ಮಾಡಲಾಗಿದೆ ಎಂದು ತುಮುಲ್ ನಿರ್ದೇಶಕ ಬಿ.ಎನ್. ಶಿವಪ್ರಕಾಶ್ ಹೇಳಿದರು.ಪಟ್ಟಣದಲ್ಲಿ ನಡೆದ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಸಭೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು. ಜಿಲ್ಲೆಯಲ್ಲೇ ಹಾಲು ಉತ್ಪಾದನೆಯಲ್ಲಿ ತಾಲ್ಲೂಕು ಪ್ರಥಮ ಸ್ಥಾನದಲ್ಲಿದೆ. ಗುಣಮಟ್ಟದ ಹಾಲು ಪೂರೈಕೆಯಾಗುತ್ತಿದೆ. ತಾಲ್ಲೂಕಿನಲ್ಲಿ 175 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 106 ಸಂಘಗಳನ್ನು ಗಣಕೀಕರಣಗೊಳಿಸಲಾಗಿದೆ ಎಂದರು. ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಮಾಡಿಸುವ ಪ್ರಕ್ರಿಯೆಯಲ್ಲಿಯೂ ತಾಲ್ಲೂಕು ಜಿಲ್ಲೆಯಲ್ಲಿಯೇ ಅಗ್ರಸ್ಥಾನದಲ್ಲಿದೆ. ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ತೂಕದ ಯಂತ್ರ, ಹಾಲು ಕರೆಯುವ ಯಂತ್ರ, ರಬ್ಬರ್ ಮ್ಯಾಟ್ ಹಾಗೂ ಹುಲ್ಲು ಕತ್ತರಿಸುವ ಯಂತ್ರಗಳನ್ನು ವಿತರಿಸಲಾಗಿದೆ ಎಂದು ಹೇಳಿದರು. ತೀವ್ರ ಬರಗಾಲ ಇರುವುದರಿಂದ ಜಾನುವಾರುಗಳಿಗೆ ಹಸಿ ಒಣ ಮೇವಿನ ಸಮರ್ಪಕ ವ್ಯವಸ್ಥೆ ಕಲ್ಪಿಸಬೇಕು. ಇತ್ತೀಚಿನ ದಿನಗಳಲ್ಲಿ ಪಶು ಆಹಾರದ ಗುಣಮಟ್ಟ ಕೊಂಚ ಕುಸಿದಿದ್ದು, ಅದನ್ನು ತಕ್ಷಣವೇ ಸುಧಾರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

## ಪ್ರದೀಪ್ ಈಶ್ವರ್ ವಿರುದ್ಧ ಜಾತೀಯ ವಿಷ ಬೀಜ ಬಿತ್ತಿದ ಆರೋಪ

• **ಉದಯವಾಹಿನಿ, ಚಿಂತಾಮಣಿ**



ಉದಯವಾಹಿನಿ ಚಿತ್ರ

ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡಬೇಕಾದ ಶಾಸಕ ಪ್ರದೀಪ್ ಈಶ್ವರ್ ಅವರು ಚಿಂತಾಮಣಿ ಕ್ಷೇತ್ರದಲ್ಲಿ ಜಾತೀಯ ವಿಷ ಬೀಜ ಬಿತ್ತಲು ಹೊರಟಿದ್ದಾರೆ ಎಂದು ದಲಿತ ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಬೀಡಾ ಶ್ರೀನಿವಾಸ್ ಆರೋಪಿಸಿದರು.ನಗರದ ಅಂಬೇಡ್ಕರ್ ಭವನದ ಬಳಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. 'ಶಾಸಕರು ತಮಗೆ ಸಂಬಂಧವಿಲ್ಲದ ಹಾಗೂ ಅದರ ಬಗ್ಗೆ ಗಾಳಿ-ಗಂಧವೂ ಗೊತ್ತಿಲ್ಲದ ವಿಷಯಗಳನ್ನು ಪ್ರಸ್ತಾಪಿಸಿ, ಸಮಾಜದ ವಿವಿಧ ಸಮುದಾಯಗಳ ಮಧ್ಯೆ ಬೆಂಕಿ ಹಚ್ಚಲು ಹೊರಟಿದ್ದಾರೆ' ಎಂದು ದೂರಿದರು. ನಗರದ ಶಾಲಾ ಆವರಣದಲ್ಲಿ 2 ವರ್ಷದ ಹಿಂದೆ ಅಪರಿಚಿತ ವ್ಯಕ್ತಿಗಳು ರಾತ್ರಿ ಹೊತ್ತು ಪಿಒಪಿ ಅಂಬೇಡ್ಕರ್ ಪ್ರತಿಮೆ ಇಟ್ಟು ಪರಾರಿಯಾಗಿದ್ದರು. ಸುಮಾರು ಎರಡು ತಿಂಗಳು ಈ ಬಗ್ಗೆ ವಾದ-ವಿವಾದಗಳು, ಹೋರಾಟ ನಡೆಯಿತು. ಆ ಬಳಿಕ ಅಂಬೇಡ್ಕರ್ ಭವನಕಾಮಗಾರಿ ಮುಕ್ತಾಯವಾಗಿ, ಭವ್ಯವಾದಅಂಬೇಡ್ಕರ್ ಪುತ್ಥಳಿಯೂ ಸ್ಥಾಪನೆಯಾಗಿದೆ. ಆದರೆ, ಇದೀಗ ಶಾಸಕರು ಈ ಪ್ರಕರಣವನ್ನು ಮತ್ತೆ ಅನಗತ್ಯವಾಗಿ ಕೆದಕುತ್ತಿದ್ದಾರೆ. ಅವರಿಗೆ ನಿಜವಾಗಿಯೂ, ಅಂಬೇಡ್ಕರ್ ಬಗ್ಗೆ ಗೌರವವಿದ್ದರೆ, ಅಂದು ಯಾಕೆ ಹೋರಾಟಕ್ಕೆ ಬರಲಿಲ್ಲ ಎಂದು ಪ್ರಶ್ನಿಸಿದರು. ರಾಜಕೀಯ ಉದ್ದೇಶಕ್ಕಾಗಿ ಈಗ ಅನಗತ್ಯವಾಗಿ ವಿಷಯ ಪ್ರಸ್ತಾಪಿಸಿ ಜನಾಂಗಳ ನಡುವೆ ದ್ವೇಷ, ಅಶಾಂತಿ ಮೂಡಿಸಲು ಹೊರಟಿರುವುದು ಎಷ್ಟು ಸರಿ ಎಂದರು.ನಗರದ ಹೊರವಲಯದ ಊಲವಾಡಿ ಗ್ರಾಮದ ವೇಣುಗೋಪಾಲ ದೇವಾಲಯಕ್ಕೆ ಪ್ರವೇಶಕ್ಕೆ ದಲಿತರಿಗೆ ಅವಕಾಶ ನೀಡುತ್ತಿಲ್ಲ ಎಂದು ಚಿಕ್ಕಬಳ್ಳಾಪುರ ಶಾಸಕರು ದೂರು ನೀಡಿದ್ದಾರೆ.

## ಅರಣ್ಯ ಇಲಾಖೆಯಿಂದ ಸಾಗುವಳಿ ಜಮೀನು ತೆರವು

• **ಉದಯವಾಹಿನಿ, ಶ್ರೀನಿವಾಸಪುರ**

ತಾಲ್ಲೂಕಿನ ನೆಲವಂಕಿ ಹೋಬಳಿಯ ಉಪ್ಪರಪಲ್ಲಿ ಗ್ರಾಮದ ಮಜರ ಮಲ್ಲಂಪಲ್ಲಿಯಲ್ಲಿ 'ಅರಣ್ಯ ಇಲಾಖೆ ಅಧಿಕಾರಿಗಳು ಸಾಗುವಳಿ ಜಮೀನನ್ನು ತೆರವುಗೊಳಿಸಿದ್ದು, ಸಂತ್ರಸ್ತ ರೈತರು ಅಧಿಕಾರಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಾಗುವಳಿ ಜಮೀನಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ರೈತ ಬಳಿ ಇದ್ದರೂ ಅರಣ್ಯ ಇಲಾಖೆ ಅಧಿಕಾರಿಗಳು ಸಾಗುವಳಿ ಜಮೀನು ಅರಣ್ಯ ಇಲಾಖೆಗೆ ಸೇರಿದೆಂದು ಪೊಲೀಸರ ಬಂದೋಬಸ್‌ನಲ್ಲಿ ತೆರವು ಕಾರ್ಯಾಚರಣೆ ನಡೆಸಿ, ಬೇಲಿ ನಿರ್ಮಿಸಲು ಮುಂದಾಗಿದ್ದಾರೆಂದು ರೈತರು ಆಕ್ರೋಶ ವ್ಯಕ್ತಪಡಿಸಿದರು. 1995ರಲ್ಲಿ ಉಪ್ಪರಪಲ್ಲಿ ಗ್ರಾಮದ ಸುಮಾರು 19 ಬಡ ಕುಟುಂಬಗಳಿಗೆ ಸರ್ಕಾರದಿಂದ ತಲಾ 2.20 ಎಕರೆ ಜಮೀನು ಮಂಜೂರಾಗಿತ್ತು. ಈ ಜಮೀನಿನಲ್ಲೇ ಹಲವು ವರ್ಷಗಳಿಂದ ಜನರು ಸಾಗುವಳಿ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಈಗ ಅರಣ್ಯ ಇಲಾಖೆ ಅಧಿಕಾರಿಗಳು ಜಮೀನು ತೆರವುಗೊಳಿಸುತ್ತಿರುವುದು ಬಡ ಕುಟುಂಬಗಳ ಜೀವನಾಧಾರವೇ ಕಸಿದುಕೊಂಡಂತಾಗಿದೆ.

ಬಡ ರೈತರ ಜಮೀನು ತೆರವುಗೊಳಿಸಲು ಮುಂದಾಗುವ ಅಧಿಕಾರಿಗಳು, ಪ್ರಭಾವಿ ವ್ಯಕ್ತಿಗಳು ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡರು ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂದು ರೈತರು ಆರೋಪಿಸಿದರು.

ರೈತರಿಗೆ ಪೊಲೀಸ್ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಕಿರುಕುಳ ನೀಡದಂತೆ ರಕ್ಷಣೆ ಒದಗಿಸಬೇಕು. ಹೈಕೋರ್ಟ್ ತಡೆಯಾಜ್ಞೆ ಹಾಗೂ ಇತರ ದಾಖಲೆಗಳನ್ನು ಪರಿಗಣಿಸಿ ಸಾಗುವಳಿ ಜಮೀನನ್ನು ಉಳಿಸಿಕೊಡಬೇಕು ಎಂದು ಸಂತ್ರಸ್ತ ರೈತರು ಜಿಲ್ಲಾಡಳಿತ ಹಾಗೂ ಉನ್ನತಾಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

## ಹುಚ್ಚರನ್ನು ಯಾರಾದ್ರೂ ಬಂಧಿಸಿ ಜೈಲಿಗೆ ಹಾಕುತ್ತಾರಾ? ಪ್ರಕಾಶ್ ರಾಜ್‌ಗೆ ಪ್ರತಾಪ್ ಸಿಂಹ ತಿರುಗೇಟು

• **ಉದಯವಾಹಿನಿ, ಮೈಸೂರು**

ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ದೇಶದ್ರೋಹಿಗಳು ಎಂದು ನಟ ಪ್ರಕಾಶ್ ರಾಜ್ ನೀಡಿರುವ ಹೇಳಿಕೆಗೆ ಬಿಜೆಪಿಯ ಮಾಜಿ ಸಂಸದ ಪ್ರತಾಪ್ ಸಿಂಹ ತಿರುಗೇಟು ನೀಡಿದ್ದಾರೆ. ನಟ ಪ್ರಕಾಶ್ ರಾಜ್ ಹಾಗೂ ಶಾಸಕ ಪ್ರದೀಪ್ ಈಶ್ವರ್ ಇಬ್ಬರೂ ಹುಚ್ಚರು ಎಂದು ಪ್ರತಾಪ್ ಸಿಂಹ ಟೀಕಿಸಿದ್ದಾರೆ. ಮೈಸೂರಿನಲ್ಲಿ ಮಾತನಾಡಿದ ಅವರು, ಇಬ್ಬರನ್ನೂ ಸಮಾಜದವರೇ ಹುಚ್ಚರು ಎಂದು ದೂರ ಇಟ್ಟಿದ್ದಾರೆ.



ಉದಯವಾಹಿನಿ ಚಿತ್ರ

ಮೋದಿ ಅವರು 13 ವರ್ಷಗಳಿಂದ ತಮ್ಮನ್ನು ಬಂಧಿಸಿಲ್ಲ ಎಂದು ಪ್ರಕಾಶ್ ರಾಜ್ ಹೇಳುತ್ತಾರೆ. ಹುಚ್ಚರನ್ನು ಯಾರಾದರೂ ಬಂಧಿಸಿ ಜೈಲಿಗೆ ಹಾಕುತ್ತಾರಾ ಎಂದು ಪ್ರಶ್ನಿಸಿದ್ದಾರೆ.

ಒಬ್ಬರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಠೇವಣಿ ಕಳೆದುಕೊಂಡಿದ್ದಾರೆ. ಮತ್ತೊಬ್ಬರು ಎಂಎಲ್‌ಎ ಗ್ಯಾರಂಟಿ ಶಿಶು ಎಂದು ಪ್ರದೀಪ್ ಈಶ್ವರ್ ಅವರನ್ನು ಉಲ್ಲೇಖಿಸಿ ಪ್ರತಾಪ್ ಸಿಂಹ ಟೀಕಿಸಿದ್ದಾರೆ. ಮುಂದಿನ ಚುನಾವಣೆಯಲ್ಲಿ ಕರ್ನಾಟಕದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಪ್ರದೀಪ್ ಈಶ್ವರ್ ಅವರಿಗೆ ಟಿಕೆಟ್ ನೀಡುವುದಿಲ್ಲ ಎಂದು ಪ್ರತಾಪ್ ಸಿಂಹ ಹೇಳಿದ್ದಾರೆ. ಅಲ್ಲಿ ಬೇರೆಯವರನ್ನು ಈಗಾಗಲೇ ಆಯ್ಕೆ ಮಾಡಿ ಇಡಲಾಗಿದೆ. ಐದು ವರ್ಷ ಏನೋ ಮಾತನಾಡಲಿ ಎಂದು ಸುಮ್ಮನೆ ಬಿಟ್ಟಿದ್ದಾರೆ ಎಂದು ಪ್ರತಾಪ್ ಸಿಂಹ ಹೇಳಿಕೆ ನೀಡಿದ್ದಾರೆ.

ಅಂತರಾಳದಿಂದ.. EDITORIAL

# ಮಕ್ಕಳ ಡಿಜಿಟಲ್ ಗೀಳಿಗೆ ಕಡಿವಾಣ ಸ್ವಯಂ ನಿಯಂತ್ರಣ ಅನಿವಾರ್ಯ



ಮಕ್ಕಳ ಡಿಜಿಟಲ್ ಗೀಳಿಗೆ ಕಡಿವಾಣ ಹಾಕುವ ವಿಷಯವಾಗಿ ಸುಪ್ರೀಂ ಕೋರ್ಟ್ ಕೇಂದ್ರ ಸರಕಾರವನ್ನು ತರಾಟೆಗೆ ತೆಗೆದುಕೊಂಡು ಮಕ್ಕಳನ್ನು ಸಾಮಾಜಿಕ ಜಾಲತಾಣ ಗೀಳಿನಿಂದ ಹೊರತರಲು ಕಠಿನ ಕಾನೂನು ನಿಯಮಾವಳಿಗಳನ್ನು ರೂಪಿಸುವಂತೆ ಸಲಹೆ ನೀಡಿದೆ. ಈ ಸಲಹೆಗೆ ಸಮ್ಮತಿಸಿರುವ ಕೇಂದ್ರ ಸರಕಾರ ಆದಷ್ಟು ಶೀಘ್ರದಲ್ಲಿಯೇ ಈ ಸಂಬಂಧ ಕಟ್ಟುನಿಟ್ಟಿನ ಕಾನೂನು ರೂಪಿಸಿ, ಸಂಬಂಧಿತ ಕಂಪೆನಿಗಳೊಂದಿಗೆ ಚರ್ಚಿಸಿ ಜಾರಿಗೆ ತರುವುದಾಗಿ ತಿಳಿಸಿದೆ. ಉದ್ದೇಶಿತ ಕಾನೂನು ಜಾರಿಗೆ ಬಂದ ಬಳಿಕವಾದರೂ ಮಕ್ಕಳ ಈ ಡಿಜಿಟಲ್ ವ್ಯಸನಕ್ಕೆ ಒಂದಿಷ್ಟು ಕಡಿವಾಣ ಬಿದ್ದಿತು ಎಂಬ ಆಶಾವಾದ ನಾಗರಿಕ ಸಮಾಜದ್ದಾಗಿದೆ.

ಕಳೆದೆರಡು ವರ್ಷಗಳಿಂದ ಮಕ್ಕಳಲ್ಲಿ ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ವೀಕ್ಷಣೆಯ ಗೀಳು ಹೆಚ್ಚುತ್ತಿರುವುದು, ಮತ್ತದರಿಂದ ಮಕ್ಕಳ ಶಾರೀರಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದು ವಿವಿಧ ಸಂಶೋಧನ ಮತ್ತು ಸಮೀಕ್ಷೆಗಳಲ್ಲಿ ಸಾಬೀತಾಗಿದೆ.

**ಡಿಜಿಟಲ್ ವೇದಿಕೆಗಳು ಮಕ್ಕಳ ಭವಿಷ್ಯ ಹಾಳುಗೆಡವುತ್ತಿವೆ ಎಂದು ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಅರ್ಜಿದಾರರ ಆತಂಕಕ್ಕೆ ಸಹಮತ ಅಪ್ರಾಪ್ತ ವಯಸ್ಕರಿಗೆ ಸಾಮಾಜಿಕ ಜಾಲತಾಣಗಳಲ್ಲಿ ಖಾತೆ ತೆರೆಯಲು ಹೇಗೆ ಅವಕಾಶ ನೀಡಲಾಗುತ್ತಿದೆ ಎಂದು ಕೇಂದ್ರ ಸರಕಾರವನ್ನು ಪ್ರಶ್ನಿಸಿ, ತತ್‌ಕ್ಷಣ ಸೂಕ್ತ ಕಾನೂನು ರೂಪಿಸುವಂತೆ ನಿರ್ದೇಶನ ನೀಡಿದೆ.**

**ಸಹಮತ ವ್ಯಕ್ತಪಡಿಸಿರುವ ಕೇಂದ್ರ ಶೀಘ್ರದಲ್ಲಿಯೇ ಕಠಿನ ಕಾನೂನು ರೂಪಿಸಿ ಅದಕ್ಕನುಸಾರವಾಗಿ ಕಾರ್ಯನಿರ್ವಹಿಸುವಂತೆ ಸಾಮಾಜಿಕ ಜಾಲತಾಣ ಕಂಪೆನಿಗಳಿಗೆ ನಿರ್ದೇಶನ ನೀಡುವುದಾಗಿ ನ್ಯಾಯಪೀಠಕ್ಕೆ ತಿಳಿಸಿದೆ.**

ಈ ಬಗ್ಗೆ ಆರೋಗ್ಯ, ಶೈಕ್ಷಣಿಕ ಸಂಸ್ಥೆಗಳು ಎಚ್ಚರಿಕೆ ನೀಡುತ್ತಲೇ ಬಂದಿರುವುದಲ್ಲದೆ ಈ ಕುರಿತಂತೆ ಜಾಗೃತಿ ಮೂಡಿಸುವಂತೆ ಸಲಹೆಯನ್ನೂ ನೀಡುತ್ತ ಬಂದಿವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ತನ್ನ ಐಟಿ ನಿಯಮಾವಳಿಗಳಲ್ಲಿ ಪದೇಪದೇ ಬದಲಾವಣೆಗಳನ್ನು ಮಾಡುತ್ತ ಬಂದಿದ್ದರೆ ರಾಜ್ಯ ಸರಕಾರಗಳು ಕೂಡ ಕಾಲಕಾಲಕ್ಕೆ ಅಪ್ರಾಪ್ತ ವಯಸ್ಸಿನವರಿಗೆ ಮೊಬೈಲ್ ಬಳಕೆ ನಿರ್ಬಂಧ, ಸಾಮಾಜಿಕ ಜಾಲತಾಣಗಳಲ್ಲಿ ಖಾತೆ ತೆರೆಯಲು ಅವಕಾಶ ನಿರಾಕರಣೆ ಮತ್ತಿತರ ನಿಯಮಾವಳಿಗಳನ್ನು ಜಾರಿಗೊಳಿಸುತ್ತಲೇ ಬಂದಿದೆ. ಆದರೆ, ಈ ಎಲ್ಲಾ ನಿರ್ಬಂಧ, ಕಠಿನ ನಿಯಮಗಳು ಹೊರತಾಗಿಯೂ ಮಕ್ಕಳ ಮೊಬೈಲ್ ಗೀಳಿಗೆ ಕಡಿವಾಣ ಹಾಕಲು ಸಾಧ್ಯವಾಗಿಲ್ಲ.

ಈಗಾಗಲೇ ಇಂತಹ ಕೆಲವು ಕಾನೂನುಗಳು ಜಾರಿಯಲ್ಲಿದ್ದರೂ ಅದು ವಸ್ತುಶಃ ಪಾಲನೆಯಾಗುತ್ತಿಲ್ಲ. ಸಾಮಾಜಿಕ ಜಾಲತಾಣಗಳಿಂದ ಮಕ್ಕಳನ್ನು ದೂರವಿರಿಸುವ ಸರಕಾರದ ಯಾವೊಂದು ಪ್ರಯತ್ನವೂ ನಿರೀಕ್ಷಿತ ಫಲ ನೀಡುತ್ತಿಲ್ಲ.

ಒಂದು ವೇಳೆ ಮಕ್ಕಳಿಗೆ ಸಾಮಾಜಿಕ ಜಾಲತಾಣದಲ್ಲಿ ಸ್ವಂತ ಖಾತೆ ಹೊಂದಲು ಅವಕಾಶ ನಿರಾಕರಿಸಿದರೂ ಇನ್ಯಾರದೋ ಖಾತೆಯಿಂದ ಮಕ್ಕಳು ತಮ್ಮ ಚಾಳಿಯನ್ನು ಮುಂದುವರಿಸುವ ಸಾಧ್ಯತೆಯಂತೂ ಇದ್ದೇ ಇದೆ. ಹೀಗಾಗಿ ಕಠಿನ ಕಾನೂನನ್ನು ಜಾರಿಗೊಳಿಸುವ ಜತೆಯಲ್ಲಿ ಈ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗುವ ಎಲ್ಲಾ ವಿಷಯಗಳ ಮೇಲೂ ನಿಗಾ ಇರಿಸುವ ಅನಿವಾರ್ಯತೆ ಇದೆ. ಇನ್ನು ಈ ಬಗ್ಗೆ ಮಕ್ಕಳಲ್ಲಿ ಮಾತ್ರವಲ್ಲದೆ ಅವರ ಪಾಲಕರಲ್ಲೂ ಜಾಗೃತಿ ಮೂಡಿಸುವ ಅಗತ್ಯವಿದೆ. ಸ್ವನಿಯಂತ್ರಣ ಇಲ್ಲದೆ ಈ ಸಾಮಾಜಿಕ ಜಾಲತಾಣಗಳ ವೀಕ್ಷಣೆಯ ಚಾಳಿಗೆ ಕಡಿವಾಣ ಹಾಕುವುದು ಕಷ್ಟಸಾಧ್ಯ. ಕಾನೂನು ಮತ್ತು ಸ್ವಯಂ ಅರಿವು ಜತೆ ಸೇರಿದಾಗಲಷ್ಟೇ ಡಿಜಿಟಲ್ ವ್ಯಸನಮುಕ್ತ ಸಮಾಜ ನಿರ್ಮಾಣ ಸಾಧ್ಯ.



## ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

97

# ಹೋಲಿಕೆಯ ವಿಷವರ್ತುಲ

**ನರವಿಜ್ಞಾನದ ದೃಷ್ಟಿಯಲ್ಲಿ, ನಿರಂತರ ಹೋಲಿಕೆ ಕಾರ್ಟಿಸಾಲ್ ಉಕ್ಕಿಸಿ ಆತಂಕ, ಚಿತ್ತಚಾಂಚಲ್ಯ, ಆತ್ಮವಿಶ್ವಾಸದ ಕುಸಿತಕ್ಕೆ ದಾರಿ ಮಾಡುತ್ತದೆ. ಬದಲಾಗಿ ಸ್ವಯಂ-ಕೇಂದ್ರಿತ ಗುರಿಯತ್ತ ಚಿತ್ತ ನೆಟ್ಟರೆ ಮಿದುಳಿನ ಸ್ಥಿರತೆ, ವಿವೇಚನಾಶಕ್ತಿ ತೀಕ್ಷ್ಣವಾಗುತ್ತದೆ. ಹೋಲಿಕೆ ಮನವನ್ನು ಕದಡುತ್ತದೆ, ಸ್ವ-ಅವಲೋಕನ ಮನವನ್ನು ಕಟ್ಟುತ್ತದೆ.**

ಯಶಸ್ಸು ಅಪಜಯವನ್ನು ಅರಗಿಸಿಕೊಳ್ಳುವ ಧೀರತೆ ಮತ್ತು ಸಕಾರಾತ್ಮಕ ಚಿತ್ತದಿಂದ ಮಾತ್ರವಲ್ಲ, ಹೋಲಿಕೆಯ ವಿಷವರ್ತುಲದಿಂದ ಹೊರಬರುವ ಜಾಣ್ಮೆಯಿಂದಲೂ ಮೂಡುತ್ತದೆ.

ಈ ವಿಷವರ್ತುಲವೇ ಮನದ ನೆಮ್ಮದಿ ಕದಿಯುವ ಅದೃಶ್ಯ ಬೀಗ. ಪರರ ಸಾಧನೆ ನೋಡಿ ತನ್ನನ್ನು ಕಿರಿದಾಗಿಸುವ ರೂಢಿಯನ್ನು ತ್ಯಜಿಸಬೇಕು. ಪ್ರತಿಯೊಬ್ಬರ ಪಥವು ಪ್ರತ್ಯೇಕ ಪಠ್ಯ.

ಅನ್ಯರ ಅಳತೆಗೋಲಿನಲ್ಲಿ ತನ್ನನ್ನು ತೂಗಿದರೆ ಆತ್ಮಪ್ರತ್ಯಯ ಕುಸಿಯುತ್ತದೆ. ಆದರೆ ನಿನ್ನೆಗೂ ಇಂದಿಗೂ ನಡುವಿನ ಅಂತರವನ್ನು ಅಳೆಯುವುದು ನಿಜವಾದ ಪ್ರಗತಿ. ನಿನ್ನೆ ಹೇಗಿದ್ದೆ? ಇಂದು ಎಷ್ಟು ಮಾಗಿದ್ದೇನೆ? ಎಂಬ ಅಂತರ್ಮುಖಿ ಪ್ರಶ್ನೆಯೇ ಬೆಳವಣಿಗೆಯ ವೇಗವರ್ಧಕ.

ಈ ಸುಳಿಯಿಂದ ಮುಕ್ತನಾದ ಕಲಿಕಾರ್ಥಿ ತನ್ನ ಅಂತಃಸತ್ವವನ್ನು ಅರಿಯುತ್ತಾನೆ. ಅವನಲ್ಲಿ ಆತ್ಮಸಂತೃಪ್ತಿ, ಪ್ರಶಾಂತ ಚಿತ್ತ, ಅಚಲ ಸಂಕಲ್ಪ ಅರಳುತ್ತವೆ.

ಆದ್ದರಿಂದ ಪರರತ್ತ ನೋಟವಲ್ಲ, ಸ್ವ-ಬೆಳವಣಿಗೆಯತ್ತ ದೃಷ್ಟಿ ಹರಿಸುವುದೇ ಯಶಸ್ಸಿನೆಡೆಗೆ ಕರೆದೊಯ್ಯುವ ಸಾತ್ವಿಕ ಶಕ್ತಿ.



## ಉತ್ತರ ಜಿಬಿಎ ಕಾಂಪೋಸಿಟ್ ಪಿ.ಯು ಕಾಲೇಜಿನಲ್ಲಿ ನ್ಯೂಟ್ರಿಷನ್ ಡೇ ಆಚರಣೆ



• **ಉದಯವಾಹಿನಿ, ಬೆಂಗಳೂರು**

ಉತ್ತರ ಜಿಲ್ಲೆ ಮತ್ತಿಕೆರೆಯಲ್ಲಿರುವ ಜಿಬಿಎ ಕಾಂಪೋಸಿಟ್ ಪಿ.ಯು.ಕಾಲೇಜುನಲ್ಲಿ ನ್ಯೂಟ್ರಿಷನ್ ಡೇ ಆಚರಣೆ. ವಿವಿಧ ತರಕಾರಿಗಳಿಂದ ಚಿತ್ರ ಮೂಡಿಸಲಾಗಿತ್ತು.

ವಿಷಯ ಪರಿವೀಕ್ಷಕರು, ಜಿಬಿಎ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಖಜಾಂಚಿ ಎನ್. ಎಸ್.ಸೋಮಶೇಖರ್‌ರವರು ಮತ್ತು ಪ್ರಾಂಶುಪಾಲರಾದ ಶ್ರೀಮತಿ ಕುಮದಾಕ್ಷಿ, ಶಿಕ್ಷಕ ವೃಂದದವರು ನ್ಯೂಟ್ರಿಷನ್ ಡೇ ಉದ್ಘಾಟನೆ ಮಾಡಿದರು. ಇದೇ ಸಂದರ್ಭದಲ್ಲಿ ಎನ್. ಎಸ್.ಸೋಮಶೇಖರ್ ರವರು ಮಾತನಾಡಿ ಮಕ್ಕಳಿಗೆ ಪೌಷ್ಟಿಕ ಆಹಾರ ಮತ್ತು ದಿನನಿತ್ಯ ವ್ಯಾಯಾಮ ಚಟುವಟಿಕೆಗಳು ಇದ್ದಾಗ ವಿದ್ಯಾವಂತ, ಆರೋಗ್ಯವಂತ ಬುದ್ದಿವಂತರಾಗಿ ಬೆಳಯುತ್ತಾರೆ.

ನಾವು ತಿನ್ನುವ ಆಹಾರದಲ್ಲಿ ಆರೋಗ್ಯವಿದೆ. ಸಿರಿಧಾನ್ಯ, ತರಕಾರಿ, ಬೇಳೆಕಾಳು ಪ್ರೋಟೀನ್ ಇರುವ ಆಹಾರ ಸೇವನೆಯಿಂದ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಮಕ್ಕಳಿಗೆ ಅರಿವು ಮೂಡಿಸುವ ಕಾರ್ಯಕ್ರಮವಾಗಿದೆ.ಜಂಕ್ ಪುಡ್ ನಿಂದ ಮಕ್ಕಳ ಆರೋಗ್ಯ ಹದಗೆಟ್ಟುತ್ತದೆ. ಚಿಕ್ಕ ವಯಸ್ಸಿನಲ್ಲಿ ಮಾರಕ ಕ್ಯಾನ್ಸರ್, ಹೃದಯ ಖಾಯಿಲೆ ತುತ್ತಗುತ್ತಾರೆ ಮಕ್ಕಳ ಆರೋಗ್ಯ ರಕ್ಷಣೆಯಾಗಬೇಕು ದೇಶದ ಭವಿಷ್ಯ ಅವರ ಕೈಯಲ್ಲಿ ಇದೆ ಎಂದು ಹೇಳಿದರು.

## ತೂಕ ಇಳಿಕೆಯಿಂದ ಸಕ್ಕರೆ ಮಟ್ಟ ನಿಯಂತ್ರಣದವರೆಗೆ; ಪ್ರತಿದಿನ ಬೆಳ್ಳುಳ್ಳಿ ಜಗಿದು ಆರೋಗ್ಯದಲ್ಲಾಗುವ ಬದಲಾವಣೆ ನೋಡಿ

ಅಡುಗೆ ಮನೆಯಲ್ಲಿ ಹೆಚ್ಚಾಗಿ ಬಳಸುವ ಆಹಾರ ಪದಾರ್ಥಗಳಲ್ಲಿ ಬೆಳ್ಳುಳ್ಳಿ ಕೂಡ ಒಂದು. ಅಡುಗೆಯ ರುಚಿ ಹೆಚ್ಚುಮಾಡುವುದಲ್ಲದೆ ಬೆಳ್ಳುಳ್ಳಿ ಹಿಂದಿನ ಕಾಲದಿಂದಲೂ ಔಷಧೀಯ ಗುಣಗಳಿಗಾಗಿ ಬಳಸಲಾಗುತ್ತಿದೆ.

ಇದರಲ್ಲಿರುವ ಆಲಿಸಿನ್ ಎಂಬ ಸಂಯುಕ್ತವು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ, ಸೋಂಕುಗಳ ವಿರುದ್ಧ ಹೋರಾಡಿ ಯಾವುದೇ ರೋಗ ಬರದಂತೆ ತಡೆಯುತ್ತದೆ. ಸಿಗುವ ಹಲವು ಆರೋಗ್ಯ ಪ್ರಯೋಜನಗಳ ಬಗ್ಗೆ ತಜ್ಞರೊಬ್ಬರು ಮಾಹಿತಿ ನೀಡಿದ್ದಾರೆ. ಬೆಳ್ಳುಳ್ಳಿಯಲ್ಲಿ ಆಯಂಟಿಆಕ್ಸಿಡೆಂಟ್ ಪ್ರಮಾಣಗಳು ಅಧಿಕವಾಗಿದೆ. ಇದು ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿ ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳ ವಿರುದ್ಧ ಹೋರಾಡಿ ಸೋಂಕುಗಳಿಂದ ದೇಹವನ್ನು ರಕ್ಷಿಸುತ್ತದೆ. ಖಾಲಿ ಹೊಟ್ಟೆಯಲ್ಲಿ ಸೇವಿಸಿದಾಗ ರೋಗ ನಿರೋಧಕ ಶಕ್ತಿಯನ್ನು ಬಲಪಡಿಸುವ ಮತ್ತು ಚೈತನ್ಯವನ್ನು ಹೆಚ್ಚಿಸುವ ಔಷಧವಾಗಿ ಕಾರ್ಯನಿರ್ವಹಿಸುತ್ತದೆ. ಗ್ಯಾಸ್ಟ್ರಿಕ್, ಹೊಟ್ಟೆ ಉಬ್ಬರದಿಂದ ಬಳಲುತ್ತಿದ್ದರೆ ಬೆಳ್ಳುಳ್ಳಿಯನ್ನು ಸೇವಿಸಬಹುದು.

ಇದು ಆಮ್ಲೀಯತೆಯನ್ನು ತಡೆದು ಹೊಟ್ಟೆ ಉಬ್ಬುವುದನ್ನು ನಿವಾರಿಸುತ್ತದೆ. ಬೆಳಗಿನ ಉಪಾಹಾರಕ್ಕೆ ಮೊದಲು ಬೆಳ್ಳುಳ್ಳಿ ಸೇವಿಸುವುದರಿಂದ ದಿನವಿಡೀ ಸುಗಮ ಜೀರ್ಣಕ್ರಿಯೆಯನ್ನು ಬೆಂಬಲಿಸುತ್ತದೆ. ಬೆಳ್ಳುಳ್ಳಿ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಸಮತೋಲನಗೊಳಿಸಲು ಸಹಾಯ ಮಾಡುತ್ತದೆ, ಇದು ಮಧುಮೇಹ ಇದ್ದವರಿಗ ಪ್ರಯೋಜನಕಾರಿಯಾಗಿದೆ. ಇದರ ಸಲ್ಫರ್ ಸಂಯುಕ್ತಗಳು ಇನ್ಸುಲಿನ್ ಸೂಕ್ಷ್ಮತೆಯನ್ನು ಹೆಚ್ಚಿಸಿ ಗ್ಲೂಕೋಸ್ ಚಯಾಪಚಯವನ್ನು ಸುಧಾರಿಸುತ್ತದೆ. ಬೆಳಗ್ಗೆ ಹಸಿ ಬೆಳ್ಳುಳ್ಳಿ ಸೇವಿಸುವುದರಿಂದ ದೇಹದ ಕೊಬ್ಬು ಕರಗುತ್ತದೆ. ಅಲ್ಲದೆ, ಇದು ಪದೇ ಪದೆ ಹಸಿವಾಗುವುದನ್ನು ತಡೆಯುತ್ತದೆ. 1ರಿಂದ 2 ಹಸಿ ಬೆಳ್ಳುಳ್ಳಿ ಎಸಳುಗಳನ್ನು ಲಘುವಾಗಿ ಜಜ್ಜಿ, ಉಗುರು ಬೆಚ್ಚಗಿನ ನೀರಿನೊಂದಿಗೆ ನುಂಗಬಹುದು. ಬೆಳ್ಳುಳ್ಳಿಯ ಖಾರ ತಡೆಯಲು ಜೇನುತುಪ್ಪ ಸೇರಿಸಿ ಸೇವಿಸಬಹುದು. ಆದರೆ ಅತೀಯಾಗಿ ಸೇವಿಸುವುದು ಒಳಿತಲ್ಲ.



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

**ಜಗತ್ತಿನ ಎಲ್ಲಾ ರಾಷ್ಟ್ರಕ್ಕಿಂತ ನಮ್ಮ ರಾಷ್ಟ್ರದ ಮಹಾನ್ ಮಾನವತಾವಾದಿಗಳು ಈ ಪುಣ್ಯ ಭೂಮಿಯಲ್ಲಿ ಜನಿಸಿ ಅವರು ರಾಷ್ಟ್ರಕ್ಕೆ ನೀಡಿದ ಕೊಡುಗೆ,ಆದರ್ಶ ಮತ್ತು ಅವರ ತತ್ವಸಿದ್ಧಾಂತಗಳು ಹಾಗೂ ಬೋಧನೆ ಅನನ್ಯ. ಈ ರೀತಿ ಇರುವ ರಾಷ್ಟ್ರ ಜಗತ್ತಿನ ಯಾವ ರಾಷ್ಟ್ರವೂ ಇಲ್ಲ ಆದರೆ ನಾವು ಇಂತಹ ಮಾನವೀಯ ಮೌಲ್ಯಗಳು ಒಳಗೊಂಡಿರುವ ಪವಿತ್ರ ಮಾನವತೆಯ ಬೋಧನೆಯನ್ನು ಜೀವನದ ಬದುಕಿನಲ್ಲಿ ಅಳವಡಿಸಿಕೊಳ್ಳಲು ಮೀನಾ ಮೇಷ ಎಣಿಸುತ್ತಿದ್ದೇವೆ. ಆದರೆ ಬೋಧನೆಗೆ ಮಾತ್ರ ನಮ್ಮ ರಾಷ್ಟ್ರ ಸೀಮಿತ ಆದರೆ ಅನುಸರಿಸಿ ಆಚರಣೆಗೆ ತರುವಲ್ಲಿ ಯಶಸ್ವಿಯಾಗಿಲ್ಲ ಆಚರಣೆ ಕೇವಲ ಮರೀಚಿಕೆ. ನಮ್ಮಲ್ಲಿ ಬೋಧನೆ ಹೇಳುವವರ ಸಂಖ್ಯೆ ಬಹಳಷ್ಟು ಜ್ಞಾನಿಗಳಿಗೆ ಈ ಭಾರತಾಂಬೆ ಜನ್ಮ ನೀಡಿದ್ದಾಳೆ ಆದರೆ ಅನುಸರಿಸಿ ಆಚರಣೆಗೆ ತಂದುಕೊಳ್ಳುವಲ್ಲಿ ವಿಫಲವಾಗಿರುವವರ ಸಂಖ್ಯೆಯೇ ಬಹಳಷ್ಟು ಜಾಸ್ತಿ ಇದೆ.**

# ಮಹಾತ್ಮರು ಜಗತ್ತಿಗೆ ಹೇಳಬೇಕಾದ ಒಳ್ಳೆಯದನ್ನೆಲ್ಲಾ ಹೇಳಿದ್ದಾರೆ ಆದರೆ ಇನ್ನುಳಿದಿರುವುದು ಕೇವಲ ಆಚರಣೆ, ಅನುಕರಣೆ ಮಾತ್ರ

ಜಗತ್ತಿನ ಈ ಭೂಮಂಡಲ ಸುಮಾರು 4600 ದಶಲಕ್ಷ ಹಿಂದಿನದು,30 ಸಾವಿರ ವರ್ಷಗಳ ಹಿಂದೆ ಮಾನವ ಪ್ರಾಣಿ ಜನನ.ಇಡೀ ಜಗತ್ತಿನಲ್ಲಿ ಏಳು ಸಮುದ್ರಗಳು, ನಾಲ್ಕು ಮಹಾಸಾಗರಗಳು ಒಳಗೊಂಡ 5 ಕೋಟಿ 84 ಲಕ್ಷ ಚದರ ಕಿಲೋಮೀಟರ್ ವಿಸ್ತೀರ್ಣದಿಂದ ಈ ಭೂಮಿ ಆವೃತ್ತವಾಗಿದೆ.

ಈಗ ಹಾಲಿ ಜಗತ್ತಿನಲ್ಲಿ ಒಟ್ಟು 880 ಕೋಟಿ ಜನಸಂಖ್ಯೆಯನ್ನು ಈ ಭೂಮಂಡಲ ಹೊತ್ತು ಕೊಂಡಿದೆ. ನಮ್ಮ ರಾಷ್ಟ್ರದಲ್ಲಿ ಸುಮಾರು 140 ಕೋಟಿ ಜನಸಂಖ್ಯೆ ಇದೆ.ಜಗತ್ತಿನ 281 ರಾಷ್ಟ್ರಗಳ ಪೈಕಿ ಭಾರತ ದೇಶ ತನ್ನದೇ ಆದ ವೈವಿಧ್ಯತೆಯನ್ನ, ವಿವಿಧತೆಯಲ್ಲಿ ಏಕತೆಯನ್ನು, ಉತ್ತಮ ಸಂಸ್ಕೃತಿ ಸಂಸ್ಕಾರವನ್ನು ಮಿಗಿಲಾಗಿ ಅನೇಕ ಗೊಡ್ಡು ಸಂಪ್ರದಾಯ ಪರಂಪರೆಯನ್ನ ಹಾಗೂ ಅನೇಕ ಮೂಢನಂಬಿಕೆಗಳನ್ನ ಬಿಡದೇ ಅನುಸರಿಸಿಕೊಂಡು ಬಾಳ್ವಿಕೆ ಮಾಡಿಕೊಂಡು ಬರುತ್ತಿರುವ ದೇಶ.

ನಮ್ಮ ಭೂಮಿ ಪುಣ್ಯಭೂಮಿ ಈ ಪುಣ್ಯಭೂಮಿಯಲ್ಲಿ ಸಾಧು ಸಂತರು, ಋಷಿಮುನಿಗಳು, ತಪಸ್ವಿಗಳು,ದಾರ್ಶನಿಕರು, ಮೇಧಾವಿಗಳು,ವೇದ ಪಂಡಿತರು, ಕವಿ ಸಾಹಿತಿಗಳು, ಮಠಾಧಿಪತಿಗಳು, ಪೀಠಾಧಿಪತಿಗಳು, ಮೌಲಾಗಳು,ಪಾದ್ರಿಗಳು, ಧರ್ಮ ಗುರುಗಳು ಇನ್ನೂ ಸಮಕಾಲೀನರು ಜನಿಸಿರುವ ನಾಡು.ಇಂತಹ ಮಹಾನುಭಾವರೆಲ್ಲರೂ ಅನಾದಿಕಾಲದಿಂದಲೂ ಸುಮ್ಮನೇ ಕುಳಿತುಕೊಂಡಿರಲಿಲ್ಲ. ರಾಷ್ಟ್ರಕ್ಕೆ ಜಗತ್ತಿಗೆ ಹಂತ ಹಂತವಾಗಿ ಬೆಳಕು ಚೆಲ್ಲಿಕೊಂಡೇ ಬಂದಿದ್ದಾರೆ. ಇದರಲ್ಲಿ ಒಂದು ವಿಶೇಷ ಯೋಗ,ಧ್ಯಾನ,ಪ್ರಾರ್ಥನೆ, ಸತ್ಸಂಗ ಮತ್ತು ಪ್ರವಚನ ಇವುಗಳು ಈ ರಾಷ್ಟ್ರದ ಆಸ್ತಿಗಳು. ಆದರೆ ಇವುಗಳು ಬಹುತೇಕ ಸದ್ಬಳಕೆ ಆಗದೇ ದುರ್ಬಳಕೆಯ ದಾರಿಯಲ್ಲಿ ಸಾಗಿವೆ. ಹಾಗೂ ಈ ಭೂಮಂಡಲ ಮಾನವನಿಗೆ ಒಂದು ಬ್ಯಾಂಕ್ ಇದ್ದಹಾಗೆ. ಇನ್ನೇನು ಉಳಿದಿಲ್ಲ ಹೇಳಿದ್ದೇ ಹೇಳಿದ್ದನ್ನ ಮತ್ತೆ ಮತ್ತೆ ಹೇಳಬೇಕು ಅಷ್ಟೇ! ಆದರೆ ಅವರು ಹೇಳಿದ್ದನ್ನೆಲ್ಲಾ ಕೇಳಿಕೊಂಡು ಬಿಟ್ಟಿದ್ದೂ ಆಗಿದೆ, ಮರೆತಿದ್ದೂ ಆಗಿದೆ ಆ ವೇದಿಕೆಗೆ ಮಾತ್ರ ಸೀಮಿತ. ಆದರೆ ಬಹುತೇಕ ನಾವುಗಳು ಅನುಸರಿಸದೇ ಆಚರಣೆ ಮಾತ್ರ ಶೂನ್ಯ ಎಂತಹ ವಿಪರ್ಯಾಸ.

**ಮನುಷ್ಯನಿಗೆ ದುಡಿದು ಬದುಕಲು ಪ್ರಕೃತಿಯ ಕೊಡುಗೆ ಅಪಾರ. ಈ ಮೂಲಕ ಸಾರ್ವಜನಿಕರಿಗೆ ಬೋಧನೆ,ಪ್ರವಚನ ಮಾಡುವವರಲ್ಲಿ ಭಾರತ ಬಿಟ್ಟರೆ ಮತ್ತೆ ಬೇರೆ ಯಾವುದೇ ದೇಶ ಇಲ್ಲ. ಅವರೆಲ್ಲರೂ ಕುಟುಂಬಕ್ಕೆ, ಸಮಾಜಕ್ಕೆ,ರಾಷ್ಟ್ರಕ್ಕೆ ಹಾಗೂ ಜಗತ್ತಿಗೆ ಏನೇನು ಒಳ್ಳೆಯದು ಹೇಳಬೇಕೋ ಅದನ್ನೆಲ್ಲವನ್ನೂ ಹೇಳಿ ಮುಗಿಸಿದ್ದಾರೆ.**

ಅಂತಹ ಮಹಾನುಭಾವರ ಆಚರಣೆಯನ್ನು ನಾವು ಅನುಸರಿಸದೇ ಇದ್ದರೆ ಅವರ ಆತ್ಮಕ್ಕೆ ಶಾಂತಿ ಎಲ್ಲಿ ದೊರಕುತ್ತದೆ.ಜಗತ್ತಿನಲ್ಲಿ ಒಂದೇ ಜಾತಿಯ ಮರವಾದರೂ ಅದರಲ್ಲಿರುವ ಎಲೆ, ಹೂವು,ಕಾಯಿ,ಹಣ್ಣು ಸಹ ಒಂದೇ ತರಹ ಇರುವುದಿಲ್ಲ.ಅದೇ ರೀತಿ ಪ್ರಾಣಿ-ಪಕ್ಷಿಗಳು ಒಂದೇ ಜಾತಿ ಆದರೂ ಸಹ ಒಂದೇ ತರಹ ಇರದೇ ಒಂದಕ್ಕೊಂದು ಭಿನ್ನವಾಗಿರುತ್ತವೆ. ಇನ್ನು ಮುಂದೆ ಮಾನವನ ಬಗ್ಗೆ ಲೆಕ್ಕ ಹಾಕಿಕೊಂಡರೆ ಮಾನವನೂ ಸಹ ಒಬ್ಬರಿಗೊಬ್ಬರು ಹೋಲುವುದೇ ಇಲ್ಲ ಸೃಷ್ಟಿ ಎಂತಹ ಅದ್ಭುತ.ಮಾನವ ಶ್ರೇಷ್ಠವಾದ ಜೀವಿ ಸರಿ ಆದರೆ ಎಲ್ಲಾ ಜೀವಿಗಳಿಗಿಂತ ಕಡೆ. ಕಾರಣ ಹಲವು ಸತ್ಯ ಒಂದೇ! **ಉದಾಹರಣೆಗೆ:** ಮಠ, ಮಂದಿರ,ದೇವಸ್ಥಾನ ಮಸೀದಿ, ಚರ್ಚಿಗೆ ಹೋಗುತ್ತೇವೆ, ಸತ್ಸಂಗ,ಪ್ರವಚನ ಕೇಳಲು ಹೋಗುತ್ತೇವೆ, ಗುರುಕುಲ ಹಾಗೂ ಶಾಲೆಗೆ ಹೋಗುತ್ತೇವೆ. ಕಾರಣ ಗೊತ್ತಿದೆ ಆದರೆ ಪ್ರಶ್ನೆಗೆ ಉತ್ತರ ಇಲ್ಲ. ಬಹುತೇಕ ಮಹಾನುಭಾವರು ನುಡಿದಂಗೆ ನಡೆಯುವುದಿಲ್ಲ, ನಡೆದಂಗೆ ನುಡಿಯುವುದಿಲ್ಲ, ಬರೆದಂಗೆ ಬದುಕುವುದಿಲ್ಲ, ಬದುಕದಂಗೆ ಬರೆಯುವುದಿಲ್ಲ. ನಾವು ಮೊದಲು ಬದಲಾಗದೇ ಬೇರೆಯವರ ಬದಲಾವಣೆಯನ್ನು ಎಂದಿಗೂ ಬಯಸಬಾರದು. ಒಟ್ಟಾರೆ ಸಾಕಷ್ಟು ಮಹಾನುಭಾವರು ಭಗವಂತನಿಗೂ ಮೀರಿ ಮನುಕುಲಕ್ಕೆ ಆದಿಯಿಂದ ಇಲ್ಲಿಯವರೆವಿಗೂ ಬಹಳಷ್ಟು ಒಳ್ಳೆಯದನ್ನ ಹೇಳಿಕೊಂಡು ಬಂದಿರುವ ಸಾಕಷ್ಟು ಉದಾಹರಣೆಗಳಿವೆ ಇನ್ನೇನು ಕೂಡ ಉಳಿದಿಲ್ಲ. ಆದರೆ ನಾವುಗಳು ಅನುಸರಿಸದೇ ಆಚರಣೆಗೆ ತರುವುದು ಕಷ್ಟಸಾಧ್ಯ.ಆಚರಣೆ,ಅನುಕರಣೆ ಮಾತ್ರ ಶೂನ್ಯ.





• **ಹಿಂದಿನ ಸಂಚಿಕೆಯಿಂದ** 121ನೆಯ ಅಧ್ಯಾಯ

ಅಪ್ಪಣೆ. ಮಹಾಪ್ರಭು ಎಂದು ಅಮಾತ್ಯ ಪ್ರಹಸ್ತನು ನುಡಿದು, ಅಂಗದನತ್ತ ತಿರುಗಿ, ಎಲೆ ಕಪಿಯೇ ಹೆದರಬೇಡ, ನೀನು ಕೇಳಿದುದನ್ನು ಕೊಡುತ್ತೇನೆ. ಯುದ್ಧಸನ್ನದ್ಧರಾದ ರಕ್ಕಸರ ನಡುವೆ ನಿಂತ ನಿನ್ನನ್ನು ನೋಡಿ ಯಾರಿಗೂ ನಗು ಬರುತ್ತಿಲ್ಲ. ಆದರೆ ನಿನ್ನನ್ನು ಯಾರು ಕಂಡರೂ ಪ್ರೀತಿಯಿಂದ ಕುಣಿಕುಣಿಸಿ ಸಂತೋಷಪಡುತ್ತಾರೆ. ದೈತ್ಯೇಂದ್ರನ ಮುಂದೆ ನಿನ್ನ ಕುಣಿತಗಳನ್ನು ತೋರಿಸು ಎಂದಾಗ ಅಂಗದನು, ಉತ್ತಮವಾದ ರಾಜನೀತಿಗಳನ್ನು ಬದಿಗೊತ್ತಿ ಅವಹೇಳನಕಾರಿಯಾಗಿ ನಡೆದುಕೊಳ್ಳುತ್ತಿರುವ ನೀನು ಯಾರು ಎಂಬುದನ್ನು ಮೊದಲು ಹೇಳಿದರೆ ನಾನು ನನ್ನ ಪರಿಚಯವನ್ನು ಮಾಡಿಕೊಳ್ಳುತ್ತೇನೆ'' ಎಂದು ನುಡಿದ.

ಈ ಮಾತುಗಳನ್ನು ಕೇಳಿದ ಪ್ರಹಸ್ತನು ಕೋಪಾವಿಷ್ಟನಾಗಿ, ಈ ರೀತಿ ಅವಹೇಳನಕಾರಿಯಾಗಿ ಪರಿಹಾಸ ಮಾಡುತ್ತಿರುವ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಗರ್ಜಿಸಲು, ಈ ಸಮಯವು ಹೆಚ್ಚಿನ ಪರಿಹಾಸಕ್ಕೆ ತಕ್ಕುದಲ್ಲ ಎಂದು ಬಗೆದ ಅಂಗದನು, ಈ ಬುವಿಯಲ್ಲಿ ಈ ಮೋಡಿ ಈ ಗಾಡಿ, ಈ ಚಂದ ಈ ಅಂದ, ಈ ಥಳುಕು ಈ ಬಳುಕುಗಳಿಂದ ಕೂಡಿ ಅನನ್ಯಸಾಧಾರಣನಾದ ಚಂದ್ರಸೂರ್ಯಸಮಾನ ಪರಾಕ್ರಮಿಯಾದ ನಿನ್ನೊಡನೆ ಮಾತನಾಡದಿರುವುದೆಂತು ಸಾಧ್ಯ ಎಂದು ಹೇಳಿ, ನನ್ನನ್ನು ನೀನು ಕಪಿ ಎಂದು ಕರೆದೆಯಲ್ಲವೇ? ವನಚರರು ವಿಕೃತಾಂಗರು ಅತಿ ಚಪಲರು ಎಂಬುದು ಲೋಕದಲ್ಲಿ ರೂಢಿಯಾದ ಮಾತು; ಆದರೆ ಹಣ್ಣು ಹಂಪಲುಗಳನ್ನು ತಿಂದು ಬದುಕುವುದು ನಮಗೆ ಸಹಜ. ಕುರುಹೇ ಇಲ್ಲದ ನಾನು ನೀನು ಯಾರು' ಎಂದು ಬೆಸಗೊಂಡರೆ ನಿನಗೆ ಇಷ್ಟು ಕೋಪವೇಕೆ? ನನಗೆ ಉತ್ತರವನ್ನು ಕೊಟ್ಟುಬಿಟ್ಟರೆ ನಿನ್ನ ಘನತೆಗೆ ಮುಕ್ಕಾಗುತ್ತದೆಯೇ? ಕಾಡೇ ನಮ್ಮ ತವರುಮನೆ, ಅದರಲ್ಲಿ ತಪ್ಪಾದುದೇನಿದೆ?

ಒಂದು ಎರಡು ಮೂರು ಇಪ್ಪತ್ತು ಕಿರೀಟಗಳನ್ನು ಧರಿಸಿ ಕುಳಿತಿರುವವರನ್ನು ನೋಡುತ್ತ, ಅವರ ಎಡಬಲಗಳಲ್ಲಿ ನಾನಾ ಸ್ವರೂಪಗಳಲ್ಲಿರುವ ದೈತ್ಯರನ್ನು ನೋಡುತ್ತ ನನಗೆ ಭ್ರಮೆ ಆವರಿಸಿತು ಇವರುಗಳಲ್ಲಿ ರಾಜನು ಯಾರು ಎಂಬ ಶಂಕೆ ನನ್ನಲ್ಲಿ ಉಂಟಾಯಿತು. ಅಲ್ಲ, ಹೆದರಿಕೊಂಡು ನಾಯಿನರಿಯಂತೆ ಹೊಂಚು ಹಾಕಿಕೊಂಡು ರಘುನಂದನನ ಸುದತಿಯನ್ನು ಜನಸ್ಥಾನದಿಂದ ಕದ್ದು ತಂದ ಶೂರನಾರೆಂಬುದನ್ನು ತೋರಿಸಿದರೆ ನಾನು ಅವನನ್ನು ನೋಡಿ ಸಂತಸಗೊಳ್ಳುತ್ತೇನೆ. ಬಲ ಪೌರುಷಗಳಿಂದ ಈ ನೆಲವನ್ನು ಬಹುಕಾಲ ಪಾಲಿಸಿ, ರಾಘವನ ಹೆಂಡತಿಯ್ನು ಅಪಹರಿಸಲು ತಾಟಕಿಯ ಮಗನನ್ನು ಪ್ರಾರ್ಥಿಸಿಕೊಂಡು, ಅವನು ಮೃಗರೂಪವನ್ನು ಧರಿಸಿ ಆಶ್ರಮದ ಸುತ್ತ ಸುಳಿಯುತ್ತಿರಲು, ವಂಚನೆಯಿಂದ ವೇಷವನ್ನು ಮರೆಸಿಕೊಂಡು ಕರೆತರುವಂತಹ ಬೇರೆ ಮಹಾಪುರುಷರು ಲೋಕದಲ್ಲಿ ಬೇರೆ ಯಾರಿದ್ದಾರೆ! ಕ್ಷಿತಿಜಾತೆಯನ್ನು ಕದ್ದು ತಂದ ಪರಾಕ್ರಮಿಯು ಯಾರೆಂದು ತೋರಿಸಿದರೆ ಅವನನ್ನು ನಾನು ಸಂತೋಷದಿಂದ ಕಂಡು ಹೋಗುತ್ತೇನೆ ಎಂದು ಅಂಗದನು ನುಡಿದ.

ಇಷ್ಟು ಚಟುಲನುಡಿಗಳನ್ನಾಡುವ ಆ ಕಪಿಯನ್ನು ಕಿನಿಸಿನಿಂದ ನೋಡಿದ ಆ ದೈತ್ಯನಾಥನು ಕೃತಕವಾದ ನಸುನಗೆಯಿಂದ ಕೂಡಿ, ''ವನಚರನೇ ನೀನು ಯಾರು? ಈ ಹಿಂದೆ ಬಂದಿದ್ದ ಮರ್ಕಟನು ನಿನಗೆ ಏನಾಗಬೇಕು? ಅವನು ಈಗ ಎಲ್ಲಿ ಹೋಗಿದ್ದಾನೆ? ನೀನು ಯಾರ ಮನೆಯಲ್ಲಿ ಊಳಿಗಕ್ಕೆ ಇದ್ದೀಯೆ?'' ಎಂದು ವಿಚಾರಿಸಿದ. ಆಗ ಅಂಗದನು ಆ ಅಸುರನನ್ನು ಕುರಿತು, ಸಮುದ್ರತಟದಲ್ಲಿ ಸಮಾಧಿಯಲ್ಲಿ ಕುಳಿತಿರಲು ಅವನನ್ನು ಹಿಡಿಯಲು ಬಂದ ನಿನ್ನನ್ನು ತನ್ನ ಕಂಕುಳಲ್ಲಿ ಇರುಕಿಸಿಕೊಂಡು ನಾಲ್ಕೂ ಕಡಲುಗಳನ್ನು ಸುತ್ತಿ ಬಂದು ಆಕಾಶದಿಂದ ಎಸೆಯಲು ಅಳಿದುಳಿದು ಬಂದು ಯಾರ ಕಾಲಿಗೆ ಬಿದ್ದೆಯೋ ಆ ವಾಲಿಯ ಮಗ ಅಂಗದ ನಾನು. ಅಲ್ಲ, ಹೆದರಿಕೊಂಡು ನಾಯಿನರಿಯಂತೆ ಹೊಂಚು ಹಾಕಿಕೊಂಡು ಮೊದಲು ಬಂದಿದ್ದ ಕೋಡಗವು ಸಿಕ್ಕಿತೆಂದು ಅದನ್ನು ಬೆದರಿಸುತ್ತ ಓಡಿಸಿದಿರಲ್ಲ, ಅದು ಯಾವ ಕಡೆಯಲ್ಲಿ ಸಿಕ್ಕಿಕೊಂಡಿದೆಯೆಂಬುದು ನನಗೆ ಗೊತ್ತಿದೆ. ಹರಿಹರಸುರೇಂದ್ರಾದಿಗಳ ಮಕ್ಕಳೆಲ್ಲರೂ ಕಪಿರೂಪವನ್ನು ತಾಳಿ ಭಕ್ತಿತತ್ತರತೆಯಿಂದ ಬಂದು ರಘುವರನೊಡನೆ ಸೇರಿದ್ದಾರೆ.

ಮುಂದುವರೆಯುವುದು



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು



# ಭಾರತದ ಮಾಜಿ ಪ್ರಧಾನಿ,ಭಾರತರತ್ನ ಲಾಲ್ ಬಹದ್ದೂರ್ ಶಾಸ್ತ್ರಿರವರ 122ನೇ ವರ್ಷದ ಜನ್ಮದಿನಾಚರಣೆ

ಭಾರತರತ್ನ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿರವರು 1904 ಅಕ್ಟೋಬರ್ 02 ರಂದು ಉತ್ತರಪ್ರದೇಶದಲ್ಲಿ ಜನಿಸಿ ರಾಷ್ಟ್ರದಲ್ಲಿ ಸಾಮಾನ್ಯ, ಸರಳಕ್ಕೆ ಒತ್ತುಕೊಟ್ಟು ರಾಷ್ಟ್ರದ ಎಲ್ಲಾ ರಾಜಕಾರಣಿಗಳಿಗೆ ಉತ್ತಮ ಆದರ್ಶದ ಬೀಜವನ್ನು ಬಿತ್ತಿ ಮಾದರಿಯಾಗಿ ತನ್ನ 62 ನೇ ವಯಸ್ಸಿನಲ್ಲಿ ಅಂದರೆ 1966 ಜನವರಿ 11ರಂದು ರಾಷ್ಟ್ರದಿಂದ ಕಣ್ಮರೆಯಾಗಿ ರಾಷ್ಟ್ರದಲ್ಲಿ ರಾಜಕೀಯ ವಿಸ್ಮಯವನ್ನು ಮೂಡಿಸಿದರು.

ತನ್ನ ತಂದೆ-ತಾಯಿಗಳ ಆಶೀರ್ವಾದದಿಂದ ಉತ್ತಮ ಸಂಸ್ಕಾರ, ಶಿಕ್ಷಣದ ಜೊತೆಗೆ ಧೈರ್ಯ, ಸ್ವಾಭಿಮಾನ, ಪ್ರಾಮಾಣಿಕತೆ, ಸಂಯಮ ,ದಯೆ ಮೊದಲಾದ ಸದ್ಗುಣಗಳನ್ನು ಮೈಗೂಡಿಸಿಕೊಂಡರು.

ಮುಂದೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಅನೇಕ ವರ್ಷಗಳ ಕಾಲ ಸೆರೆಮನೆ ವಾಸ ಅನುಭವಿಸಿದರು. ಶಾಸ್ತ್ರಿಯವರು ಉತ್ತರಪ್ರದೇಶದ ಗೃಹ ಮತ್ತು ಸಾರಿಗೆ ಸಚಿವರಾಗಿ,ನಂತರ ನೆಹರು ಅವರ ಸಚಿವ ಸಂಪುಟದಲ್ಲಿ ಕೇಂದ್ರ ರೈಲ್ವೆ ಸಚಿವರಾಗಿದ್ದರು. ಆ ಸಮಯದಲ್ಲಿ ಆಂಧ್ರಪ್ರದೇಶದಲ್ಲಿ ರೈಲ್ವೆ ಅಪಘಾತ ಸಂಭವಿಸಿದ್ದರಿಂದ ಅದರ ಹೊಣೆಯನ್ನು ಹೊತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.1964ರಲ್ಲಿ ನೆಹರು ತೀರಿದಮೇಲೆ ಶಾಸ್ತ್ರಿಯವರು ಪ್ರಧಾನಮಂತ್ರಿ ಹುದ್ದೆಯನ್ನು ಅಲಂಕರಿಸಿದರು. ರಾಷ್ಟ್ರ ಮೆಚ್ಚುವ ರೀತಿ ಅತ್ಯಂತ ಸಮರ್ಥವಾಗಿ ಅಧಿಕಾರ ನೀಡಿದರು.ಆದರೆ ಆ ಸಮಯದಲ್ಲಿ ಅತ್ಯಂತ ಕಠಿಣ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. **ಉದಾಹರಣೆಗೆ:** ಆಹಾರದ ಅಭಾವ, ನಿರುದ್ಯೋಗ,ಬಡತನ, ಕಾಶ್ಮೀರ ಸಮಸ್ಯೆ, ಪಾಕಿಸ್ತಾನ ಆಕ್ರಮ, ಚೀನಾ ಗಡಿ ಸಮಸ್ಯೆ ಇನ್ನೂ ಅನೇಕ ಸಮಸ್ಯೆಗಳನ್ನು ದಿಟ್ಟ,ನೇರವಾಗಿ ಬಲವನ್ನು ಬಲದಿಂದಲೇ ಎದುರಿಸುತ್ತೇವೆ ಎಂದು ಸಾರಿದರು. ಭಾರತ-ಪಾಕಿಸ್ತಾನ ಬಿಕ್ಕಟ್ಟಿನ ಬಗ್ಗೆ ರಷ್ಯಾದ ತಾಸ್ಕೆಂಟ್ ನಲ್ಲಿ ನಡೆದ ಶಾಂತಿ ಸಭೆಗೆ ಧಾವಿಸಿದ ಶಾಸ್ತ್ರಿಯವರು ಆದರೆ ದೌರ್ಭಾಗ್ಯವೆಂದರೆ 1966 ಜನವರಿ 11 ಶಾಸ್ತ್ರಿಯವರು ನಿಗೂಢವಾಗಿ ಅಲ್ಲಿಯೇ ಹೃದಯಾಘಾತಕ್ಕೀಡಾಗಿ ತೀರಿಕೊಂಡರು.

ಯುದ್ಧವೀರ, ಶಾಂತಿಧೂತ, ಅಸಾಧಾರಣ ರಾಜಕೀಯ ಮುತ್ಸದ್ದಿ,ರಾಷ್ಟ್ರನಾಯಕ ಇನ್ನಿಲ್ಲವಾದರು.ಕೋಟಿ ಕೋಟಿ ಭಾರತೀಯರು ಮೆಚ್ಚಿದ ಮಹಾನ್ ನಾಯಕನಿಗೆ ಅಶ್ರುತರ್ಪಣ ನೀಡಿ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದರು. ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡಿ ಪ್ರಾಮಾಣಿಕತೆ, ಸರಳತೆಗಳ ಸಾಕಾರವಾಗಿದ್ದ ಮಹಾನ್ ರಾಷ್ಟ್ರ ನಾಯಕನಿಗೆ ಗೌರವ ಸಲ್ಲಿಸಿತು.ಶಾಸ್ತ್ರಿಯವರು ರಾಷ್ಟ್ರಕ್ಕೆ ನೀಡಿದ ಜೈ ಜವಾನ್, ಜೈ ಕಿಸಾನ್ ಘೋಷಣೆ ಭಾರತೀಯರಿಗೆ ಸದಾ ಸ್ಫೂರ್ತಿದಾಯಕ ನುಡಿಯಾಗಿ ಶಾಶ್ವತವಾಗಿ ಉಳಿದಿದೆ.

ಇಂಥಹ ರಾಷ್ಟ್ರನಾಯಕ ರಾಷ್ಟ್ರವನ್ನು ಅಗಲಿ ಇಲ್ಲಿಗೆ 60 ವರ್ಷವಾಯಿತು. ಇಂದು ಶಾಸ್ತ್ರಿಯವರ 122ನೇ ವರ್ಷದ ಜನ್ಮದಿನಾಚರಣೆಯ ಸಂಬಂಧ ಅವರನ್ನು ಸ್ಮರಿಸಿ, ನೆನೆಯುತ್ತಾ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರೆಯಲಿ ಎಂದು ಆ ಭಗವಂತನಲ್ಲಿ **ಪ್ರಾರ್ಥಿಸೋಣ.ವಿ.ಸೂ:** ಧ್ರುವ ನಕ್ಷತ್ರಗಳಾದ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಈ ಇಬ್ಬರು ಮಹಾನ್ ನಾಯಕರು ಕುಟುಂಬ ಹಾಗೂ ಅಧಿಕಾರದ ಮೇಲೆ ವ್ಯಾಮೋಹ ಬಿಟ್ಟು ಸಮರ್ಪಣಾ ಭಾವದಿಂದ ರಾಷ್ಟ್ರಕ್ಕೆ ಸಮರ್ಪಿಸಿಕೊಂಡರು.

ಇಂತಹ ಮಹಾನ್ ನಾಯಕರ ಹುಟ್ಟು ಅಕ್ಟೋಬರ್ ತಿಂಗಳಲ್ಲಿ ಮತ್ತು ಸಾವು ಕೂಡ ಜನವರಿ ತಿಂಗಳಲ್ಲಿ ಈ ಇಬ್ಬರದೂ ಕೂಡ ಒಂದು ರೀತಿಯ ಕಾಕತಳೀಯ.

# ರಕ್ತ ಶುದ್ಧಿ ಎಂದರೇನು? ಮೊಡವೆ ನಿವಾರಣೆಗೂ ಸಹಕಾರಿಯೇ?

ರಕ್ತವು ನಮ್ಮ ದೇಹದ ಸಪ್ತ ಧಾತುಗಳಲ್ಲಿ ಒಂದಾಗಿದ್ದು ಅತ್ಯಂತ ಮಹತ್ವ ಹೊಂದಿರುವ ಧಾತುವಾಗಿದೆ. ದೇಹವನ್ನು ಧಾರಣೆ ಮಾಡುವುದೇ ಧಾತುಗಳ ಕೆಲಸ ಅದರಲ್ಲೂ ಜೀವನ ಕರ್ಮವೇ ರಕ್ತ ಧಾತುವಿನ ಮುಖ್ಯ ಕೆಲಸ ಪ್ರಾಣವನ್ನು ದೇಹದ ಮೂಲೆ ಮೂಲೆಗೂ ತಲುಪಿಸಿ ಜೀವನ ಧಾರಣೆ ಮಾಡುವುದು ರಕ್ತ. ರಕ್ತವು ನಮ್ಮ ದೇಹದ ಸಪ್ತ ಧಾತುಗಳಲ್ಲಿ ಒಂದಾಗಿದ್ದು ಅತ್ಯಂತ ಮಹತ್ವ ಹೊಂದಿರುವ ಧಾತುವಾಗಿದೆ. ದೇಹವನ್ನು ಧಾರಣೆ ಮಾಡುವುದೇ ಧಾತುಗಳ ಕೆಲಸ ಅದರಲ್ಲೂ ಜೀವನ ಕರ್ಮವೇ ರಕ್ತ ಧಾತುವಿನ ಮುಖ್ಯ ಕೆಲಸ ಪ್ರಾಣವನ್ನು ದೇಹದ ಮೂಲೆ ಮೂಲೆಗೂ ತಲುಪಿಸಿ ಜೀವನ ಧಾರಣೆ ಮಾಡುವುದು ರಕ್ತ. ರಕ್ತವು ತನ್ನ ನೈಸರ್ಗಿಕ ಸ್ವಭಾವ ಹಾಗು ಗುಣಗಳನ್ನು ಹೊಂದಿರುವುದು ಅತ್ಯಾವಶ್ಯಕ ಕೆಲವೊಮ್ಮೆ ನಮ್ಮ ಆಹಾರಗಳಿಂದಾಗಿ ಹಾಗು ವಿಹಾರಗಳಿಂದಾಗಿ ರಕ್ತದ ಗುಣದಲ್ಲಿ ವ್ಯತ್ಯಾಸ ಕಂಡು ಬಂದಾಗ ರಕ್ತ ದುಷ್ಟವಾಗಿದೆ ಅಥವಾ ಕಲುಷಿತವಾಗಿದೆ ಎಂದು ತಿಳಿಯಬಹುದು. ರಕ್ತದ ಗುಣಗಳಲ್ಲಾಗುವ



ವ್ಯತ್ಯಾಸದಿಂದ ಸಣ್ಣ ಬಾಯಿ ಹುಣ್ಣಿನಿಂದ ಹಿಡಿದು ಅತೀ ಗಂಭೀರವಾದ ಕ್ಯಾನ್ಸರ್ ನಂತಹ ಸಮಸ್ಯೆಗಳೂ ಬರಬಹುದು. ದೇಹದ ಮೇಲೆ ಮೂಡುವ ಮೊಡವೆಗಳಿಗೂ ರಕ್ತ ಅಶುದ್ಧಿ ಒಂದು ಕಾರಣ. ಅತಿಯಾದ ಹುಳಿ, ಉಪ್ಪು, ಖಾರಗಳ ಸೇವನೆ, ಉದ್ದಿನಿಂದ ಮಾಡಿದ ಪದಾರ್ಥಗಳು, ಎಣ್ಣೆಯಲ್ಲಿ ಕರಿದ ಪದಾರ್ಥಗಳು, ಬೇಕರಿ ಪದಾರ್ಥಗಳು, ನಿತ್ಯ, ಅದರಲ್ಲೂ ರಾತ್ರಿ ಸಮಯದಲ್ಲಿ ಮೊಸರು ಬಳಕೆ, ಮದ್ಯ ಸೇವನೆ ಪ್ರಮುಖ ಕಾರಣಗಳು ಎಂದು ಆಯುರ್ವೇದ ಹೇಳುತ್ತದೆ. ಇದರ ಜೊತೆಗೆ ಊಟ ಮಾಡಿದ ನಂತರ ಹಗಲಿನಲ್ಲಿ ಮಲಗುವುದು, ಬಿಸಿಲಿನಲ್ಲಿ ಕೆಲಸ ಮಾಡುವುದು, ಅತಿಯಾದ ಸಿಟ್ಟು, ಅಜೀರ್ಣವಿದ್ದಾಗ ಊಟ ಮಾಡುವುದು ಹೀಗೆ ನಮ್ಮ ಆಹಾರ ಪದ್ದತಿಯಿಂದ ಹಿಡಿದು ಅನೇಕ ಕಾರಣಗಳಿಂದ ರಕ್ತದ ಗುಣದಲ್ಲಿ ಬದಲಾವಣೆ ಆಗುತ್ತದೆ. ಇದರಿಂದಾಗಿ ಹಲವು ಆರೋಗ್ಯ ಸಮಸ್ಯೆಗಳು ಬರಬಹುದು.

ಹೀಗೆ ಹದ ತಪ್ಪಿದ ರಕ್ತವನ್ನು ದುಷ್ಟ ರಕ್ತ ಅಥವಾ ಕಲುಷಿತ ರಕ್ತ ಎಂದು ಹೇಳಲಾಗುತ್ತದೆ. ರಕ್ತ ದುಷ್ಟಿಯ ಪ್ರಮಾಣ ನೋಡಿ ಚಿಕಿತ್ಸೆ ನಿರ್ಧಾರಿತವಾಗಿರುತ್ತದೆ. ಕೆಲವೊಮ್ಮೆ ಮೇಲೆ ಹೇಳಿದ ಆಹಾರ ಸೇವನೆಯನ್ನು ನಿಯಂತ್ರಿಸುವುದರಿಂದಲೂ ರಕ್ತ ಸ್ವಾಭಾವಿಕವಾಗಿ ಸರಿ ಹೋಗುತ್ತದೆ. ಕೆಲವೊಮ್ಮೆ ಔಷಧಗಳ ಸಹಾಯ ಪಡೆಯಬೇಕಾಗುತ್ತದೆ .ಕೆಲವು ಸಂದರ್ಭಗಳಲ್ಲಿ ಪಂಚಕರ್ಮಾದಿ ಚಿಕಿತ್ಸೆಯಿಂದ ರಕ್ತ ಶುದ್ಧಿ ಆಗುತ್ತದೆ.

### ಅಂತಾರಾಷ್ಟ್ರೀಯ ವ್ಯಾಪಾರವು ರೈತರ ಆದಾಯವನ್ನು ಹೆಚ್ಚಿಸುವುದಲ್ಲದೆ, ಈ ಪ್ರದೇಶದ ದ್ವಿದಳ ಧಾನ್ಯಗಳ ಆರ್ಥಿಕತೆ

# ಮಾಲ್ಡೀವ್ಸ್‌ಗೆ ಕಲಬುರಗಿ ಜಿಐ ಟ್ಯಾಗ್ ತೊಗರಿ ಬೇಳೆ; ರೈತರಿಗೆ ರಫ್ತು

**ಉದಯವಾಹಿನಿ, ಕಲಬುರಗಿ**

ರಾಜ್ಯದ ಜಿಐ ಟ್ಯಾಗ್ ಹೊಂದಿರುವ ಕಲಬುರಗಿ ತೊಗರಿಬೇಳೆ ಇದೀಗ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಪ್ರವೇಶ ಪಡೆದಿದೆ. ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಮಾಲ್ಡೀವ್ಸ್‌ಗೆ ಒಂದು ಟನ್ ಸರಕಿನ ರಫ್ತಿಗೆ ಅನುವು ಮಾಡಿಕೊಡುತ್ತಿದೆ.ಪ್ರೀಮಿಯಂ ಬೆಲೆಯು ರೈತರ ಆದಾಯ ಹೆಚ್ಚಳ: ತೊಗರಿಬೇಳೆ ಅಂತಾರಾಷ್ಟ್ರೀಯ ರಫ್ತಿನ ಪ್ರಮುಖ ಪ್ರಯೋಜನವೆಂದರೆ ಉತ್ತಮ ಬೆಲೆ ಲಭ್ಯವಾಗಲಿದೆ. ಈ ಬೇಳೆ ಪ್ರಸ್ತುತ ಮಾರುಕಟ್ಟೆ ದರವು ಪ್ರತಿ ಕೆಜಿಗೆ ಸುಮಾರು 60 ರೂ. ಇದ್ದರೆ, ರಫ್ತು–ಸಂಯೋಜಿತ ಸರಪಳಿಯ ಮೂಲಕ ರೈತರು ಪ್ರತಿ ಕೆಜಿಗೆ ಸುಮಾರು 82ರೂ. ಪಡೆಯಬಹುದು. ಇದು ಗಮನಾರ್ಹವಾದ ಹೆಚ್ಚುವರಿ ಆದಾಯವನ್ನು ಒದಗಿಸುತ್ತದೆ.ಈ ಕುರಿತು ಮಾತನಾಡಿ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಹನುಮಂತಪ್ಪ, ಅಂತಾರಾಷ್ಟ್ರೀಯ ವ್ಯಾಪಾರವು ರೈತರ ಆದಾಯವನ್ನು ಹೆಚ್ಚಿಸುವುದಲ್ಲದೆ, ಈ ಪ್ರದೇಶದ ದ್ವಿದಳ ಧಾನ್ಯಗಳ ಆರ್ಥಿಕತೆಯನ್ನು ಬಲಪಡಿಸಬಲ್ಲದು ಎಂದರು.

1. ರೈತರ ಆದಾಯ ಹೆಚ್ಚಳ
2. ರಕ್ಷಿಸುತ್ತಿರುವ ಜಿಐ ಟ್ಯಾಗ್
3. ಎಫ್‌ಪಿಒಗಳು ಪ್ರಮುಖವಾಗಿವೆ

ತೊಗರಿಕ ಬಟ್ಟಲು ಎಂದು ಗುರುತಿಸಿಕೊಂಡಿರುವ ಕರ್ನಾಟಕದ ಕಲಬುರಗಿಯಲ್ಲಿ ಈ ಬೆಳೆಯನ್ನು ಸುಮಾರು 1.5ಲಕ್ಷ ಹೆಕ್ಟೇರ್‌ನಲ್ಲಿ ಬೆಳೆಯುತ್ತಾರೆ. ಜಿಲ್ಲೆಯಲ್ಲಿ 250 ಬೇಳೆ ಮಿಲ್ ಇದ್ದು ಪ್ರತಿಯೊಂದು ದಿನಕ್ಕೆ 10 ರಿಂದ 15 ಟನ್ ಸಂಸ್ಕರಿಸುವ ಸಾಮರ್ಥ್ಯ ಹೊಂದಿದೆ. ಜಿಲ್ಲೆಯಿಂದ ವಾರ್ಷಿಕವಾಗಿ 2.5 ಲಕ್ಷದಿಂದ 3 ಲಕ್ಷ ಟನ್ ಬೇಳೆ


ಉದಯವಾಹಿನಿ ಚಿತ್ರ

ಬರುತ್ತದೆ. ಕಲಬುರಗಿ ಗುರುತನ್ನು ರಕ್ಷಿಸುತ್ತಿರುವ ಜಿಐ ಟ್ಯಾಗ್: ಯುಎಎಸ್ (ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ) ರಾಯಚೂರು ಮತ್ತು ಕರ್ನಾಟಕ ರಾಜ್ಯ ತೊಗರಿ ಅಭಿವೃದ್ಧಿ ನಿಗಮದ ಜಂಟಿ ಪ್ರಯತ್ನದಿಂದಾಗಿ, ಕಲಬುರಗಿ ತೊಗರಿ ಬೇಳೆ 2019ರಲ್ಲಿ ಭೌಗೋಳಿಕ ಸೂಚಕ (ಜಿಐ ಟ್ಯಾಗ್) ಮಾನ್ಯತೆಯನ್ನು ಪಡೆಯಿತು. ಈ ಜಿಐ ಗುರುತು, ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಬೆಳೆಯಲಾದ ತೊಗರಿಯನ್ನು ಕಲಬುರಗಿ ಹೆಸರಿನಲ್ಲಿ ನಕಲಿ ಮಾರುಕಟ್ಟೆ ಮಾಡುವುದರಿಂದ ರಕ್ಷಿಸಲು ಸಹಾಯ ಮಾಡುತ್ತದೆ.

ಈ ಬೇಳೆಯು ತನ್ನ ವಿಶಿಷ್ಟ ರುಚಿ, ಸುವಾಸನೆ, ದೀರ್ಘಕಾಲದ ಶೇಖರಣಾ ಸಾಮರ್ಥ್ಯ ಮತ್ತು ಸಂಸ್ಕರಣಾ ಗುಣಮಟ್ಟಕ್ಕೆ ಹೆಸರುವಾಸಿಯಾಗಿದೆ. ಇದರ ದುಂಡಗಿನ ಕಾಳುಗಳು ಅತ್ಯುತ್ತಮ ಗುಣಮಟ್ಟದ ಪಟ್ಕಾ ಬೇಳೆಯನ್ನು ನೀಡುತ್ತವೆ. ಇತರೆ ಅನೇಕ ತಳಿಗಳಿಗೆ ಹೋಲಿಸಿದರೆ ಇದು ಬೇಗನೆ ಬೇಯುತ್ತದೆ. ಈ ಪ್ರದೇಶದ ಮಣ್ಣಿನಲ್ಲಿರುವ ಕ್ಯಾಲ್ಸಿಯಂ ಮತ್ತು ಪೊಟ್ಯಾಸಿಯಮ್ ಅಂಶಗಳು ಕೂಡ ಇದರ ಈ ಗುಣಲಕ್ಷಣಗಳಿಗೆ

### ಮತ್ತಷ್ಟು ಬಲಪಡಿಸಲಿದೆ

**ಉತ್ಪಾದಕತೆಯನ್ನು ಹೆಚ್ಚಿಸುವ, ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ತೇಜಿಸುವ ಮತ್ತು ಜಿಐ ಹೆಸರಿನ ದುರುಪಯೋಗವನ್ನು ತಡೆಗಟ್ಟುವ ಮೂಲಕ, ಯುಎಎಸ್ ರಾಯಚೂರು ಮತ್ತು ತೊಗರಿ ಅಭಿವೃದ್ಧಿ ಸಂಸ್ಥೆಯಂತಹ ಸಂಸ್ಥೆಗಳು ಈ ಉತ್ಪನ್ನದ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಗುರುತನ್ನು ಮತ್ತಷ್ಟು ಬಲಪಡಿಸಲಿದೆ ಎಂದು ತಿಳಿಸಿದ್ದಾರೆ.**

### ಕಲಬುರಗಿ ಕೃಷಿ ಆರ್ಥಿಕತೆಯ ಪ್ರಮುಖ ಬೆಳೆ

**ಜಿಲ್ಲೆಯಲ್ಲಿ ಮುಖ್ಯ ಬೆಳೆಯಲ್ಲಿ ಕೆಂಪು ಬೇಳೆಯನ್ನು ಬೆಳೆಯಲಾಗುತ್ತದೆ. ಜೊತೆಗೆ ಜೋಳ, ಬೆಂಗಾಲ್ ಬೇಳೆ, ಸೂರ್ಯಕಾಂತಿಯನ್ನು ಬೆಳೆಯಲಾಗುತ್ತದೆ. ಈ ಸ್ಥಳೀಯ ತಳಿ ಬೆಳೆಯಲು 145ರಿಂದ 150 ದಿನ ಬೇಕು. ಹೆಚ್ಚಾಗಿ ಮಳೆಯಾಶ್ರಿತವಾಗಿದ್ದು, ತುಲನಾತ್ಮಕವಾಗಿ ಕಡಿಮೆ ಬಾಹ್ಯ ಸಂಪನ್ಮೂಲಗಳ ಅಗತ್ಯವಿದೆ.**

ಕಾರಣವಾಗಿವೆ. ಕಲಬುರಗಿ ಪ್ರದೇಶದಲ್ಲಿ ಶತಮಾನಗಳ ಹಿಂದೆಯೇ ತೊಗರಿ ಕೃಷಿ ನಡೆಯುತ್ತಿತ್ತು ಎಂಬುದನ್ನು ರಾಯಚೂರು ಕೃಷಿ ವಿಶ್ವವಿದ್ಯಾಲಯವು ಉಲ್ಲೇಖಿಸಿರುವ ಐತಿಹಾಸಿಕ ದಾಖಲೆಗಳು ಸೂಚಿಸುತ್ತವೆ. ದ್ವಿದಳ ಧಾನ್ಯದ ಬೆಳೆಯಾಗಿರುವುದರಿಂದ, ವಾತಾವರಣದ ಸಾರಜನಕವನ್ನು ಸ್ಥಿರೀಕರಿಸುವ ಮತ್ತು ಸಾವಯವ ಪದಾರ್ಥವನ್ನು ಸೇರಿಸುವ ಮೂಲಕ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಹೀಗಾಗಿ ಬೆಳೆ ಸರದಿಯಲ್ಲಿ ಇದು ಉಪಯುಕ್ತವಾಗಿದೆ.

## ಮಡಗಾಂವ್– ಮಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್ ಬೆಂಗಳೂರಿನವರೆಗೆ ವಿಸ್ತರಣೆ: ಅಶ್ವಿನಿ ವೈಷ್ಣವ್

**ಉದಯವಾಹಿನಿ, ಮಂಗಳೂರು**

ಕರಾವಳಿ ಮತ್ತು ರಾಜ್ಯ ರಾಜಧಾನಿಯ ನಡುವಿನ ರೈಲು ಸಂಪರ್ಕವನ್ನು ಬಲಪಡಿಸುವ ನಿಟ್ಟಿನಲ್ಲಿ, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಪ್ರಸ್ತುತ ಚಾಲನೆಯಲ್ಲಿರುವ ಮಡಗಾಂವ್–ಮಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲನ್ನು ಸುಬ್ರಹ್ಮಣ್ಯ ರಸ್ತೆ ಮತ್ತು ಕಬಕ ಪುತ್ತೂರು ಮಾರ್ಗವಾಗಿ ಬೆಂಗಳೂರಿಗೆ ವಿಸ್ತರಿಸುವುದಾಗಿ ಘೋಷಿಸಿದ್ದಾರೆ.



ಸೆಪ್ಟೆಂಬರ್ 28 ರಂದು ಬರೆದ ಪತ್ರದಲ್ಲಿ, ಈ ರೈಲು ಪ್ರಸ್ತುತ ಸಮಯದೊಂದಿಗೆ 'ಯಶವಂತಪುರ–ಮಂಗಳೂರು–ಮಡಗಾಂವ್ ವಂದೇ ಭಾರತ್ ಎಕ್ಸ್‌ಪ್ರೆಸ್' (ರೈಲು ಸಂಖ್ಯೆ 26655/26656) ಆಗಿ ಕಾರ್ಯನಿರ್ವಹಿಸಲಿದೆ ಎಂದು ರೈಲ್ವೆ ಸಚಿವರು ತಿಳಿಸಿದ್ದಾರೆ. ದಕ್ಷಿಣ ಕನ್ನಡದ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಆಗಸ್ಟ್ 6, 2025 ರಂದು ಸಲ್ಲಿಸಿದ ಮನವಿಯ ಮೇರೆಗೆ ಈ ವಿಸ್ತರಣೆಯನ್ನು ಕೈಗೊಳ್ಳಲಾಗಿದೆ. ಹಾಸನ–ಮಂಗಳೂರು ಘಾಟ್ ವಿಭಾಗದ ಸಂಪೂರ್ಣವಾಗಿ ವಿದ್ಯುದ್ದೀಕರಣಗೊಂಡಾಗಿನಿಂದಲೂ ಬೆಂಗಳೂರು ಮತ್ತು ಮಂಗಳೂರು ನಡುವೆ ಪ್ರೀಮಿಯಂ ಸೆಮಿ–ಹೈ–ಸ್ಪೀಡ್ ರೈಲಿಗಾಗಿ ಕರಾವಳಿ ಪ್ರದೇಶದ ಪ್ರಯಾಣಿಕರು, ಕೈಗಾರಿಕಾ ಸಂಘಟನೆಗಳು ಮತ್ತು ಜನಪ್ರತಿನಿಧಿಗಳ ದೀರ್ಘಕಾಲದ ಬೇಡಿಕೆ ಈಡೇರಿದೆ. ಯಶವಂತಪುರ – ಮಂಗಳೂರು ಮಾರ್ಗದಲ್ಲಿ 16 ಬೋಗಿಗಳ ವಂದೇ ಭಾರತ್ ರೈಲಿನ ಯಶಸ್ವಿ ಪ್ರಾಯೋಗಿಕ ಸಂಚಾರಗಳ ನಂತರ ಈ ಘೋಷಣೆ ಹೊರಬಿದ್ದಿದೆ. ನಿಯಮಿತ ವಾಣಿಜ್ಯ ಸೇವೆ ಪ್ರಾರಂಭಿಸುವ ಮೊದಲು ಕಾರ್ಯಾಚರಣೆಯ ಕಾರ್ಯಕ್ಷಮತೆ, ಸುರಕ್ಷತಾ ಮಾನದಂಡಗಳು ಮತ್ತು ಪ್ರಯಾಣದ ಸಮಯವನ್ನು ಮೌಲ್ಯಮಾಪನ ಮಾಡಲು ರೈಲ್ವೆ ಅಧಿಕಾರಿಗಳು ಇತ್ತೀಚೆಗೆ ಹಾಸನ–ಮಂಗಳೂರು ಘಾಟ್ ವಿಭಾಗ ಸೇರಿದಂತೆ ಸಂಪೂರ್ಣ ಮಾರ್ಗದಲ್ಲಿ ಪ್ರಾಯೋಗಿಕ ಸಂಚಾರ ನಡೆಸಿದ್ದರು.

## ಜೆಪಿಸಿ ಸಭೆಯಲ್ಲಿ ಸಿಯುಕೆ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಭಾಗಿ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಕಲಬುರಗಿ**

ವಿಕಸಿತ ಭಾರತ ಶಿಕ್ಷಾ ಅಧಿಷ್ಠಾನ ಮಸೂದೆ 2025 ಕುರಿತು ಬೆಂಗಳೂರಿನಲ್ಲಿ ಸೆಪ್ಟೆಂಬರ್ 29ರಂದು ನಡೆದ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಸಭೆಯಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಹಾಗೂ ಕಾನೂನು ಅಧ್ಯಯನ ಮತ್ತು ವಿದ್ಯಾರ್ಥಿ ಕಲ್ಯಾಣದ ನಿಕಾಯದ ಡೀನ್ ಪ್ರೊ. ಬಸವರಾಜ ಎಂ. ಕುಬಕಡ್ಡಿ ಭಾಗವಹಿಸಿದ್ದರು.

ಸಿಯುಕೆ ಪ್ರತಿನಿಧಿಗಳು ಪ್ರಸ್ತಾವಿತ ಮಸೂದೆಯ ಕುರಿತು ವಿಶ್ವವಿದ್ಯಾಲಯದ ಅನಿಸಿಕೆಗಳು ಮತ್ತು ಅಭಿಪ್ರಾಯಗಳನ್ನು ಜೆಪಿಸಿ ಮುಂದೆ ಮಂಡಿಸಿದರು. ಉನ್ನತ ಶಿಕ್ಷಣ ಸಂಸ್ಥೆಗಳನ್ನು ಒಂದೇ ಸೂರಿನಡಿ ತರುವ ಪ್ರಯತ್ನ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ) 2020ರ ಉದ್ದೇಶಗಳನ್ನು ಮುಂದುವರಿಸುವಲ್ಲಿ ಮಸೂದೆಯ ಮಹತ್ವವನ್ನು ವಿಶ್ವವಿದ್ಯಾಲಯವು ವಿವರಿಸಿತು.

ಮಸೂದೆಯ ವಿವಿಧ ನಿಬಂಧನೆಗಳ ಕುರಿತು ತನ್ನ ಅಭಿಪ್ರಾಯಗಳನ್ನು ಮಂಡಿಸಿದ ಸಿಯುಕೆ, ನೇಮಕಾತಿ, ಹಣಕಾಸು ಮತ್ತು ನಿಧಿ ನಿರ್ವಹಣೆ, ದಂಡ ಹಾಗೂ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಅಂಶಗಳತ್ತ ಜೆಪಿಸಿಯ ಗಮನ ಸೆಳೆಯಿತು.

ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ಅಧ್ಯಕ್ಷರಾದ ದಗ್ಗುಬಾಟಿ ಪುರಂದೇಶ್ವರಿ ಅವರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರನ್ನು ಒಳಗೊಂಡಿದೆ.

ಸಭೆಯಲ್ಲಿ ಜೆಪಿಸಿ ಸದಸ್ಯರಾದ ವಿವೇಕ ಠಾಕೂರ, ಇ.ಟಿ.ಮೊಹಮ್ಮದ್ ಬಶೀರ್,ಭರತ್ ಮತುಕುಮಿಲಿ, ವಂಶಿಕೃಷ್ಣ ಗದ್ದಂ ಸೇರಿದಂತೆ ಸಂಸತ್ ಸಚಿವಾಲಯದ ಅಧಿಕಾರಿಗಳು, ಕೇಂದ್ರ ಶಿಕ್ಷಣ ಸಚಿವಾಲಯ, ಉನ್ನತ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು, ರಾಜ್ಯ ಸರ್ಕಾರ ಹಾಗೂ ಮತ್ತು ಸಾರ್ವಜನಿಕ ವಲಯದ ಉದ್ಯಮಗಳ (ಪಿ.ಎಸ್.ಯು) ಪ್ರತಿನಿಧಿಗಳು ಭಾಗವಹಿಸಿದ್ದರು.

## ಕರಾವಳಿ ಭಾಗದ ಬಹುಕಾಲದ ಬೇಡಿಕೆಗೆ ಮುಕ್ತಿ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಮಂಗಳೂರು**

ದಕ್ಷಿಣ ಕನ್ನಡ ಜಿಲ್ಲೆಯ ರೈಲ್ವೆ ಪ್ರಯಾಣಿಕರ ದಶಕಗಳ ಕನಸು ಕೊನೆಗೂ ನನಸಾಗಿದೆ. ದಕ್ಷಿಣ ರೈಲ್ವೆಯ ಪಾಲಕ್ಕಾಡ್ ವಿಭಾಗದ ವ್ಯಾಪ್ತಿಯಲ್ಲಿದ್ದ ಮಂಗಳೂರು ರೈಲು ಪ್ರದೇಶವನ್ನು ನೈಋತ್ಯ ರೈಲ್ವೆಯ ಮೈಸೂರು ವಿಭಾಗಕ್ಕೆ ಅಧಿಕೃತವಾಗಿ ವರ್ಗಾಯಿಸಲಾಗಿದ್ದು, ಅಕ್ಟೋಬರ್ 1, 2026ರ ಮಧ್ಯರಾತ್ರಿಯಿಂದಲೇ ಈ ವಿಲೀನ ಪ್ರಕ್ರಿಯೆ ಜಾರಿಗೆ ಬಂದಿದೆ ಎಂದು ನೈಋತ್ಯ ವಲಯದ ಮೈಸೂರು ವಿಭಾಗದ ವಿಭಾಗೀಯ ಪ್ರಕಟಣೆ ತಿಳಿಸಿದೆ.

ಈ ಮಹತ್ವದ ಬೆಳವಣಿಗೆಯ ಹಿನ್ನೆಲೆಯಲ್ಲಿ, ನೂತನ ವ್ಯಾಪ್ತಿಯಲ್ಲಿ ರೈಲು ಕಾರ್ಯಾಚರಣೆಗಳು ಹಾಗೂ ಸಾರ್ವಜನಿಕ ಸೇವೆಗಳು ಯಾವುದೇ ತಡೆ ಇಲ್ಲದೇ ಸುಗಮವಾಗಿ ಸಾಗುವಂತೆ ನೋಡಿಕೊಳ್ಳಲು ಮೈಸೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ಶಮ್ಮಾಸ್ ಹಮೀದ್ ಅವರು ಮಂಗಳೂರಿಗೆ ಭೇಟಿ ನೀಡಿ ಸಮಗ್ರ ಪರಿಶೀಲನೆ ನಡೆಸಿದ್ದಾರೆ.

**ಎಡಿಆರ್‌ಎಂ ಭೇಟಿ ವ್ಯವಸ್ಥೆಗಳ ಪರಿಶೀಲನೆ:** ಮೈಸೂರು ವಿಭಾಗದ ವಿವಿಧ ಶಾಖಾಧಿಕಾರಿಗಳೊಂದಿಗೆ ಮಂಗಳೂರಿಗೆ ಆಗಮಿಸಿದ ಎಡಿಆರ್‌ಎಂ ಶಮ್ಮಾಸ್ ಹಮೀದ್ ಅವರು ಮಂಗಳೂರು ಸೆಂಟ್ರಲ್, ಮಂಗಳೂರು ಜಂಕ್ಷನ್, ಪಣಂಬೂರು ಹಾಗೂ ಜೋಕಟ್ಟೆ ಸೇರಿದಂತೆ ಪ್ರಮುಖ ರೈಲ್ವೆ ಕೇಂದ್ರಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಿದರು.

**ಸಿಬ್ಬಂದಿ ಮತ್ತು ಸಂಪನ್ಮೂಲ ಸಿದ್ಧತೆ:** ಸ್ಥಳೀಯ ರೈಲ್ವೆ ಸಿಬ್ಬಂದಿಯೊಂದಿಗೆ ಸಂವಾದ ನಡೆಸಿ, ಕರ್ತವ್ಯ ನಿರ್ವಹಣೆಗೆ ಅಗತ್ಯವಿರುವ ಮಾನವ ಸಂಪನ್ಮೂಲ, ಮೂಲಭೂತ ಸೌಕರ್ಯಗಳು ಮತ್ತು ತಾಂತ್ರಿಕ ಉಪಕರಣಗಳ ಲಭ್ಯತೆಯನ್ನು ಪರಿಶೀಲಿಸಿದರು.

**ಸುರಕ್ಷತೆ ಮತ್ತು ನಿರಂತರ ಕಾರ್ಯಾಚರಣೆ:** ರೈಲುಗಳ ಸಂಚಾರ, ಟ್ರ್ಯಾಕ್ ನಿರ್ವಹಣೆ, ಸುರಕ್ಷತಾ ನಿಯಮಗಳು ಹಾಗೂ ಪ್ರಯಾಣಿಕರ ಸೌಲಭ್ಯಗಳ ನಿರ್ವಹಣೆಗೆ ಯಾವುದೇ ರೀತಿಯ ತೊಡಕಾಗದಂತೆ ವಿವಿಧ ಇಲಾಖೆಗಳ ನಡುವೆ ಪರಿಣಾಮಕಾರಿ ಸಮನ್ವಯ ಸಾಧಿಸಲು ಸೂಚಿಸಿದರು.

## ಪಹಣಿ ಇಲ್ಲದ ಜಾಗದಲ್ಲಿ ನಿರ್ಮಿಸಿರುವ ಮನೆಗಳ ಕರ ಪಡೆಯಬಾರದು

**ಉದಯವಾಹಿನಿ, ಸಿದ್ದಾಪುರ**

ಪಹಣಿ ಇಲ್ಲದ ಜಾಗದಲ್ಲಿ ನಿರ್ಮಿಸಿರುವ ಮನೆಗಳ ಕರ ಪಡೆಯಬಾರದು ಎಂಬ ಆದೇಶ ವಿಧಾನಸಭೆಯಲ್ಲಿ ಮಂಡನೆಯಾದಾಗ ನಮ್ಮ ಶಾಸಕರು ಏನು ಮಾಡುತ್ತಿದ್ದರು?



ಬಡವರ ಕುರಿತು ಕಾಳಜಿ ಇದ್ದರೆ ಆದೇಶ ಹೊರಡಿಸುವ ಮೊದಲೇ ಸದನದಲ್ಲಿ ವಿರೋಧ ವ್ಯಕ್ತಪಡಿಸಬೇಕಿತ್ತು ಎಂದು ಬಿಜೆಪಿ ಮಂಡಲ ಅಧ್ಯಕ್ಷ ತಿಮ್ಮಪ್ಪ ಎಂ.ಕೆ. ಹೇಳಿದರು.ಪಟ್ಟಣದ ತಹಶೀಲ್ದಾರ್ ಕಚೇರಿ ಎದುರು ಪಹಣಿ ಇಲ್ಲದ ಜಾಗವನ್ನು ಹೊರತುಪಡಿಸಿ ಉಳಿದ ಮನೆಗಳ ಕರ ಪಡೆಯಬಾರದು ಎಂಬ ಆದೇಶವನ್ನು ವಿರೋಧಿಸಿ, ಸ್ಥಳೀಯ ಶಾಸಕರ ವೈಫಲ್ಯ ಖಂಡಿಸಿ ಬುಧವಾರ ನಡೆದ ಪ್ರತಿಭಟನೆಯ ನೇತೃತ್ವ ವಹಿಸಿ ಅವರು ಮಾತನಾಡಿದರು. "ಸಿದ್ದಾಪುರವನ್ನೂ ಬರಪೀಡಿತ ತಾಲ್ಲೂಕು ಎಂದು ಘೋಷಿಸುವಂತೆ ಗಟ್ಟಿ ಧ್ವನಿಯಲ್ಲಿ ಆಗ್ರಹಿಸಲು ಶಾಸಕರಿಗೆ ಆಗುತ್ತಿಲ್ಲ. ಈ ಮೂರೂವರೆ ವರ್ಷಗಳಲ್ಲಿ ತಾಲ್ಲೂಕಿಗೆ ಏನು ಮಾಡಿದ್ದಾರೆ? ಇದೇ ರೀತಿ ಮುಂದುವರಿದರೆ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳುವುದು ಅನಿವಾರ್ಯ' ಎಂದರು. ಜೆಡಿಎಸ್ ಮುಖಂಡ ಉಪೇಂದ್ರ ಪೈ ಮಾತನಾಡಿ, 'ಭ್ರಷ್ಟ ಸರ್ಕಾರದ ನಿಷ್ಕ್ರಿಯ ಶಾಸಕರ ಕುರಿತು ಮಾತನಾಡುವುದೇ ವ್ಯರ್ಥ. ದಿವಾಳಿ ಸರ್ಕಾರದ ಕುಬೇರ ಮುಖ್ಯಮಂತ್ರಿಗಳಿಗೂ ಬಡವರ ಕೂಗು ಕೇಳುತ್ತಿಲ್ಲ. ಬೇಡ್ತಿ–ವರದಾ ನದಿ ಜೋಡಣೆ ಯೋಜನೆಗೂ ತಾತ್ವಿಕ ಒಪ್ಪಿಗೆ ನೀಡಿದ್ದಾರೆ. ಮನೆಗಳ ನಂಬರ್ ರದ್ದಾದರೆ ಯಾವುದೇ ಸೌಲಭ್ಯ ದೊರೆಯುವುದಿಲ್ಲ. ಬಡ ಜನರ ಬದುಕಿನೊಂದಿಗೆ ರಾಜಕೀಯ ಮಾಡುವುದು ಸರಿಯಲ್ಲ' ಎಂದರು.

## ಕುಷ್ಟಗಿ: ಶಾಲೆಗಳಲ್ಲಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ

**ಉದಯವಾಹಿನಿ, ಕುಷ್ಟಗಿ**

ಈಶಾನ್ಯ ಶಿಕ್ಷಕರ ಮತಕ್ಷೇತ್ರದ ವಿಧಾನ ಪರಿಷತ್ ಚುನಾವಣೆಗೆ ಸಂಬಂಧಿಸಿದಂತೆ ಬಿಜೆಪಿ ಮುಖಂಡರು ತಾಲ್ಲೂಕಿನ ವಿವಿಧ


ಉದಯವಾಹಿನಿ ಚಿತ್ರ

ಖಾಸಗಿ ಅನುದಾನಿತ ಪ್ರೌಢಶಾಲೆಗಳಿಗೆ ತೆರಳಿ ಬುಧವಾರ ಪಕ್ಷದ ಅಭ್ಯರ್ಥಿ ಶಶಿಲ್ ನಮೋಶಿ ಪರ ಪ್ರಚಾರ ನಡೆಸಿದರು. ವಿಧಾನಸಭೆ ಪ್ರತಿಪಕ್ಷದ ಮುಖ್ಯಸಚೇತಕ ದೊಡ್ಡನಗೌಡ ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಎನ್.ರವಿಕುಮಾರ, ಪಿ.ಎಚ್.ಪೂಜಾರ ಸೇರಿದಂತೆ ಪಕ್ಷದ ಮುಖಂಡರು ತಾಲ್ಲೂಕಿನ ವಿವಿಧ ಶಾಲೆಗಳಿಗೆ ಭೇಟಿ ನೀಡಿ ಶಿಕ್ಷಕರನ್ನು ಭೇಟಿಯಾಗಿ ನಮೋಶಿ ಪರ ಮತಯಾಚಿಸಿದರು. ತಾವರಗೇರಾದ ಶಶಿಧರಸ್ವಾಮಿ ವಿದ್ಯಾನಿಕೇತನ ಸಂಸ್ಥೆಯ ಪ್ರೌಢಶಾಲೆ ಹಾಗೂ ಹಿರೇಮನ್ನಾಪುರದ ಗವಿಸಿದ್ದೇಶ್ವರ ಪ್ರೌಢಶಾಲೆಗೆ ಎನ್.ರವಿಕುಮಾರ ಹಾಗೂ ದೊಡ್ಡನಗೌಡ ಪಾಟೀಲ ಭೇಟಿ ನೀಡಿದರು. ಶಾಲೆಯ ಶಿಕ್ಷಕರೊಂದಿಗೆ ಸಭೆ ನಡೆಸಿ ಪಕ್ಷದ ಅಭ್ಯರ್ಥಿಗೆ ಬೆಂಬಲ ನೀಡುವಂತೆ ಕೋರಿದರು

### AI ಬಳಸಿ ನಕಲಿ ಹಾಲ್‌ಟಿಕೆಟ್ ಸೃಷ್ಟಿಸಿ ಪೊಲೀಸ್ ನೇಮಕಾತಿ ದೈಹಿಕ ಪರೀಕ್ಷೆಗೆ ಹಾಜರಾಗಲು ಯತ್ನ

# ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿ

**ಉದಯವಾಹಿನಿ, ಕಡಬ/ದ.ಕ**

ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿಯ ದೈಹಿಕ ಪರೀಕ್ಷೆಗೆ ಹಾಜರಾಗಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ನಕಲಿ ಪ್ರವೇಶ ಪತ್ರ ಸೃಷ್ಟಿಸಿ ವಂಚಿಸಲು ಯತ್ನಿಸಿದ ಆರೋಪದ ಮೇಲೆ ಕಡಬ ಮೂಲದ ಯುವಕನೊಬ್ಬನನ್ನು ಮಂಗಳೂರು ನಗರದ ಬರ್ಕೆ ಠಾಣಾ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬಂಧಿತನನ್ನು ಕಡಬ ತಾಲೂಕಿನ ಕೋಡಿಂಬಾಳ ಗ್ರಾಮದ ಬೆದ್ರಾಜೆ ಮನೆ ನಿವಾಸಿ ಯಜ್ಞೇಶ್ ಬಿ.ಜೆ. ರೈ (22) ಎಂದು ಗುರುತಿಸಲಾಗಿದೆ.

1. ತಂತ್ರಜ್ಞಾನವನ್ನು ದುರ್ಬಳಕೆ
2. ದೈಹಿಕ ಪರೀಕ್ಷೆಗೆ ಯತ್ನ
3. ಸಿಕ್ಕಿಬಿದ್ದ ಆರೋಪಿ


ಉದಯವಾಹಿನಿ ಚಿತ್ರ

**ಮಂಗಳಾ ಕ್ರೀಡಾಂಗಣದಲ್ಲಿ ಸಿಕ್ಕಿಬಿದ್ದ ಆರೋಪಿ:** ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿ 2026ರ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆ ಸೆ.28ರಂದು ಮಂಗಳೂರಿನ ಮಂಗಳಾ ಕ್ರೀಡಾಂಗಣದಲ್ಲಿ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಪರೀಕ್ಷಾ ಕೇಂದ್ರದ ನೋಂದಣಿ ಡೆಸ್ಕ್‌ನಲ್ಲಿ ಸಿಬ್ಬಂದಿ ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲಿಸುತ್ತಿದ್ದರು.

ಆರೋಪಿ ಯಜ್ಞೇಶ್ ರೈ CPC5225446 ಸಂಖ್ಯೆಯ ಪ್ರವೇಶ ಪತ್ರ ಹಾಜರುಪಡಿಸಿದ್ದನು. ಆದರೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಒದಗಿಸಿದ್ದ ತಂತ್ರಾಂಶದಲ್ಲಿ ವಿವರಗಳನ್ನು ಪರಿಶೀಲಿಸಿದಾಗ, 1:5 ಅರ್ಹತಾ ಪಟ್ಟಿಯಲ್ಲಿ ಯಜ್ಞೇಶ್ ಹೆಸರಾಗಲಿ ಅಥವಾ ಸಂಬಂಧಿತ ಅರ್ಜಿ ಸಂಖ್ಯೆಯಾಗಲಿ ಕಂಡುಬರಲಿಲ್ಲ. ಇದರಿಂದ ಅನುಮಾನಗೊಂಡ ಪರೀಕ್ಷಾ ಸಿಬ್ಬಂದಿ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಪ್ರವೇಶ ಪತ್ರದಲ್ಲಿ ವ್ಯತ್ಯಾಸಗಳು ಕಂಡುಬಂದಿದ್ದು, ಅದು ನಕಲಿ ದಾಖಲೆ ಎಂಬುದು ಬೆಳಕಿಗೆ ಬಂದಿದೆ. ಬಳಿಕ ಪ್ರಕರಣ ಸಿಬ್ಬಂದಿ ಗಮನಕ್ಕೆ ಬಂದಿದ್ದು,

### ಡಿಜಿಟಲ್ ಪುರಾವೆ ಪತ್ತೆ

**ಮೊಬೈಲ್‌ನಲ್ಲಿ ಡಿಜಿಟಲ್ ಪುರಾವೆ: ಆರೋಪಿಯ ಮೊಬೈಲ್ ಫೋನ್ ಪರಿಶೀಲನೆ ನಡೆಸಿದಾಗ ನಕಲಿ ಹಾಲ್‌ಟಿಕೆಟ್ ಸೃಷ್ಟಿಸಲು ಸಂಬಂಧಿಸಿದ ಡಿಜಿಟಲ್ ಪುರಾವೆಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಹಾಲ್‌ಟಿಕೆಟ್ ಅನ್ನು ಎಡಿಟ್ ಮಾಡಿರುವ ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿಯೂ ಮೊಬೈಲ್‌ನಲ್ಲಿ ಲಭ್ಯವಾಗಿದ್ದು, ತನಿಖೆಗೆ ಪ್ರಮುಖ ಸಾಕ್ಷ್ಯವಾಗಿದೆ ಎಂದು ಅವರು ತಿಳಿಸಿದ್ದಾರೆ.**

=====================================

### ಜೆರಾಕ್ಸ್ ಅಂಗಡಿಗೂ ಪೊಲೀಸರ ಭೇಟಿ

**ಪ್ರಕರಣಕ್ಕೆ ಸಂಬಂಧಿಸಿದಂತೆ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿಯ ಸಹಾಯಕ ಆಡಳಿತಾಧಿಕಾರಿ ಪ್ರಕಾಶ್ ರುದ್ರಪ್ಪ ಹೂವಿನ ಅವರು ನೀಡಿದ ದೂರಿನ ಆಧಾರದ ಮೇಲೆ ಬರ್ಕೆ ಪೊಲೀಸ್ ಠಾಣೆಯಲ್ಲಿ ಅ.ಕ್ರ. 87/2026 ದಾಖಲಿಸಲಾಗಿದೆ.**

ಆರೋಪಿ ಯಜ್ಞೇಶನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

**ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಪಡೆಯದಿದ್ದರೂ ದೈಹಿಕ ಪರೀಕ್ಷೆಗೆ ಯತ್ನ:** ಪೊಲೀಸರ ವಿಚಾರಣೆಯಲ್ಲಿ, ಯಜ್ಞೇಶ್ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿಯ ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಪಡೆದಿರಲಿಲ್ಲ ಎನ್ನುವುದು ಬೆಳಕಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆದರೂ, ದೈಹಿಕ ಪರೀಕ್ಷೆಗೆ ಹಾಜರಾಗುವ ಉದ್ದೇಶದಿಂದ ಅರ್ಹತೆ ಪಡೆದಿದ್ದ ಮತ್ತೊಬ್ಬ ಅಭ್ಯರ್ಥಿಯ ಅಸಲಿ ಹಾಲ್‌ಟಿಕೆಟ್ ಆತ ಪಡೆದುಕೊಂಡಿದ್ದ. ನಂತರ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಹಾಗೂ ಡಿಜಿಟಲ್ ಎಡಿಟಿಂಗ್ ವಿಧಾನ ಬಳಸಿ ಆ ಹಾಲ್‌ಟಿಕೆಟ್‌ನಲ್ಲಿದ್ದ ಹೆಸರು ಸೇರಿದಂತೆ ಅಗತ್ಯ ವಿವರಗಳನ್ನು ಬದಲಾಯಿಸಿ, ತನ್ನದೇ ಹೆಸರಿನ ನಕಲಿ ಹಾಲ್‌ಟಿಕೆಟ್ ಸಿದ್ಧಪಡಿಸಿಕೊಂಡು ಪರೀಕ್ಷಾ ಕೇಂದ್ರಕ್ಕೆ ಹಾಜರಾಗಲು ಯತ್ನಿಸಿದ್ದಾನೆ ಎನ್ನುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಕರಣದಲ್ಲಿ ಭಾರತೀಯ ನ್ಯಾಯ ಸಂಹಿತೆ 2023ರ ಕಲಂ 336(1), 336(3) ಹಾಗೂ 318(4)ರ ಅಡಿ ನಕಲಿ ದಾಖಲೆ ಸೃಷ್ಟಿ ಮತ್ತು ವಂಚನೆಗೆ ಸಂಬಂಧಿಸಿದ ಆರೋಪಗಳನ್ನು ದಾಖಲಿಸಲಾಗಿದೆ. ನಕಲಿ ಹಾಲ್‌ಟಿಕೆಟ್‌ನ ಪ್ರಿಂಟ್‌ಔಟ್‌ನ್ನು ಎಲ್ಲಿಂದ ಪಡೆದುಕೊಳ್ಳಲಾಗಿತ್ತು ಎಂಬುದನ್ನು ಪತ್ತೆಹಚ್ಚಲು ಬರ್ಕೆ ಠಾಣೆಯ ತನಿಖಾ ತಂಡವು ಕಡಬಕ್ಕೆ ಆಗಮಿಸಿದೆ. ಈ ವೇಳೆ, ಸ್ಥಳೀಯ ಜೆರಾಕ್ಸ್/ಸೈಬರ್ ಅಂಗಡಿಯೊಂದಕ್ಕೆ ಭೇಟಿ ನೀಡಿ ಪರಿಶೀಲನೆ ಹಾಗೂ ಮಹಜರು ನಡೆಸಲಾಗಿದೆ. ಹಾಲ್‌ಟಿಕೆಟ್ ಸಿದ್ಧಪಡಿಸುವುದು, ಎಡಿಟ್ ಮಾಡುವುದು ಮತ್ತು ಅದರ ಪ್ರಿಂಟ್ ಪಡೆಯುವ ಪ್ರಕ್ರಿಯೆಯಲ್ಲಿ ಇತರರ ಪಾತ್ರವಿದೆಯೇ ಎಂಬ ಬಗ್ಗೆಯೂ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಮಿನಿ ನ್ಯೂಸ್

### ಕೌಶಲ್ಯ ತರಬೇತಿಗೆ ಅರ್ಜಿ ಆಹ್ವಾನ

**ಉದಯವಾಹಿನಿ, ಹುಬ್ಬಳ್ಳಿ**

ಕರ್ನಾಟಕ ಸರ್ಕಾರವು ಯುವನಿಧಿ ಯೋಜನೆಯ ಫಲಾನುಭವಿ ಯುವಕ, ಯುವತಿಯರಿಗೆ ಕೌಶಲ್ಯ ತರಬೇತಿ ನೀಡಿ ಉದ್ಯೋಗ ಅವಕಾಶಗಳನ್ನು ಕಲ್ಪಿಸಲು 'ಯುವನಿಧಿ ಪ್ಲಸ್' ಕಾರ್ಯಕ್ರಮ ರೂಪಿಸಿದೆ. ಈ ಯೋಜನೆಯಡಿ ಹುಬ್ಬಳ್ಳಿಯ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿಟಿಟಿಸಿ) ಉಚಿತ ಉದ್ಯೋಗಾಧಾರಿತ ಕೌಶಲ್ಯ ತರಬೇತಿ ಪಡೆಯಲು ಯುವನಿಧಿ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಿದೆ. ಯುವನಿಧಿ ಪ್ಲಸ್ ಕಾರ್ಯಕ್ರಮದಡಿ ಅಕೌಂಟ್ಸ್ ಎಕ್ಸಿಕ್ಯೂಟಿವ್, ಡಿಜಿಟಲ್ ಮಾರ್ಕೆಟಿಂಗ್, ಸೇಲ್ಸ್ ಎಕ್ಸಿಕ್ಯೂಟಿವ್, ಸ್ಯಾಪ್, ಐಟಿ, ಪಿಎಲ್‌ಸಿ ಪ್ರೋಗ್ರಾಮಿಂಗ್, ಕ್ಯಾಡ್–ಕ್ಯಾಮ್ ಮತ್ತು ಸಿಎನ್‌ಸಿ ಮುಂತಾದ ವೃತ್ತಿಗಳಲ್ಲಿ ಉಚಿತ ಕೌಶಲ್ಯ ತರಬೇತಿ ನೀಡಲಾಗುತ್ತದೆ. ತರಬೇತಿಯ ನಂತರ ಸ್ಥಳೀಯವಾಗಿ ಉತ್ತಮ ವೇತನದೊಂದಿಗೆ ಉದ್ಯೋಗ ಅವಕಾಶ ಕಲ್ಪಿಸಲಾಗುವುದು. ತರಬೇತಿಗಳು ಅಕ್ಟೋಬರ್ 05 ರಿಂದ ಪ್ರಾರಂಭವಾಗಲಿವೆ. ಆಸಕ್ತ ಅಭ್ಯರ್ಥಿಗಳು ಅಕ್ಟೋಬರ್ 3ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ), ಇಂಡಸ್ಟ್ರಿಯಲ್ ಎಸ್ಟೇಟ್, ಗೋಕುಲ ರಸ್ತೆ. ಹುಬ್ಬಳ್ಳಿ ಅಥವಾ ದೂರವಾಣಿ ಸಂಖ್ಯೆ 0836–2333159 , 8123719773 ಸಂಪರ್ಕಿಸುವಂತೆ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಮಾರುತಿ ಭಜಂತ್ರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸಕ್ರೆಬೈಲು ಬಿಡಾರದ ಸಾಕಾನೆ ಶೌರ್ಯ ಸಾವು

**ಉದಯವಾಹಿನಿ, ಶಿವಮೊಗ್ಗ**

ಸಕ್ರೆಬೈಲು ಆನೆ ಬಿಡಾರದ 32 ವರ್ಷದ ಶೌರ್ಯ ಹೆಸರಿನ ಗಂಡಾನೆ ಅನಾರೋಗ್ಯದಿಂದ ಸಾವನ್ನಪ್ಪಿದೆ. ಆನೆಯನ್ನು ಫೆಬ್ರುವರಿ ತಿಂಗಳಲ್ಲಿ ಚಿಕ್ಕಮಗಳೂರು ಜಿಲ್ಲೆ ಬಾಳೆಹೊನ್ನೂರಿನಲ್ಲಿ ಹಿಡಿದು ತರಲಾಗಿತ್ತು. ಆ ಭಾಗದಲ್ಲಿ ಸ್ಥಳೀಯರ ಜನರಿಗೆ ಉಪಟಳ ನೀಡಲಾಗುತ್ತಿತ್ತು ಎಂಬ ಆರೋಪದ ಹಿನ್ನೆಲೆಯಲ್ಲಿ ಶೌರ್ಯ ಆನೆಯನ್ನು ಸೆರೆ ಹಿಡಿದು ಇಲ್ಲಿಗೆ ತರಲಾಗಿತ್ತು.


ಉದಯವಾಹಿನಿ ಚಿತ್ರ

**ಬಿಡಾರದ ಆನೆಗಳ ಸಂಖ್ಯೆ 23ಕ್ಕೆ ಇಳಿಕೆ:** ಆನೆಯು ಬಿಡಾರಕ್ಕೆ ಕರೆತಂದಾಗ ಆರೋಗ್ಯದಿಂದ ಗಟ್ಟಿಮುಟ್ಟಾಗಿತ್ತು. ಆದರೆ, ಪಳಗಿಸುವ ವೇಳೆ ಮಾಡಿದ ಸಣ್ಣ ಗಾಯದಿಂದ ಅನಾರೋಗ್ಯಕ್ಕೆ ತುತ್ತಾಗಿತ್ತು. ಫೆಬ್ರವರಿ ತಿಂಗಳಿನಲ್ಲಿಯೇ ಬಿಡಾರಕ್ಕೆ ಕರೆ ತರಲಾಗಿತ್ತು. ಇಲ್ಲಿನ ಮಾವುತರು ಕೇವಲ ಮೂರು ತಿಂಗಳಲ್ಲಿ ಪಳಗಿಸಿ ಕ್ರಾಲ್ ನಿಂದ (ಕಾಡಿನಿಂದ ಸೆರೆಹಿಡಿಯಲಾದ ಆನೆಗಳನ್ನು ಕಟ್ಟಿಹಾಕಲು, ಆರೈಕೆ ಮಾಡಲು ಮತ್ತು ತರಬೇತಿ ನೀಡಲು ನಿರ್ಮಿಸಲಾದ ವಿಶೇಷವಾದ ಸ್ಥಳ) ಹೊರ ತಂದು ಬಾಲಣ್ಣ ಹೆಸರಿನ ಆನೆಯ ಜೊತೆ ಬಿಟ್ಟಿದ್ದರು. ಆದರೆ, ಆನೆಯು ತೀವ್ರ ಅನಾರೋಗ್ಯದಿಂದ ಸಾವನ್ನಪ್ಪಿದೆ. ಶೌರ್ಯ ಆನೆ ಸಾವಿನಿಂದ ಬಿಡಾರದ ಆನೆಗಳ ಸಂಖ್ಯೆ 23ಕ್ಕೆ ಇಳಿದಿದೆ.

**ಅರಣ್ಯ ಅಧಿಕಾರಿಗಳ ಪ್ರತಿಕ್ರಿಯೆ:** ಶೌರ್ಯ ಆನೆ ಮೃತಪಟ್ಟಿರುವ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ವನ್ಯಜೀವಿ ವಿಭಾಗದ ಡಿಎಫ್ಒ ಪ್ರಸನ್ನ ಪಟಗಾರ್, ಕ್ರಾಲ್‌ನಲ್ಲಿದ್ದ ಆನೆ ಇಂದು ಬೆಳಿಗ್ಗೆ 8:00 ಗಂಟೆಗೆ ಸಾವನಪ್ಪಿದೆ. ನಿನ್ನೆ ರಾತ್ರಿ 11:00 ಗಂಟೆಗೆ ಇದ್ದಕ್ಕಿದ್ದಂತೆ ಕುಸಿದುಬಿದ್ದಿತ್ತು. ಗ್ಲುಕೋಸ್ ನೀಡಿ ಎಬ್ಬಿಸಲು ಯತ್ನಿಸಿದರೂ ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಕ್ರಾಲ್‌ನಲ್ಲಿ ಯಾವಾಗಲೂ ಅಗ್ರೆಸಿವ್ ಆಗಿರುತ್ತಿತ್ತು. ಹೊರಬರಲು ಯತ್ನಿಸಿ ಮರಗಳಿಗೆ ಡಿಕ್ಕಿ ಹೊಡೆದು ಕಾಲಿಗೆ ಗಾಯ ಮಾಡಿಕೊಂಡಿತ್ತು. ತೊಡೆಯ ಭಾಗದಲ್ಲಿ ತೀವ್ರ ಗಾಯ ಆಗಿತ್ತು. ನಿರಂತರವಾಗಿ ಚಿಕಿತ್ಸೆ ನೀಡಲಾಗಿತ್ತು. ಬ್ಯಾಕ್ಟೀರಿಯಾ ಸೋಂಕಿನಿಂದ ಟಾಕ್ಸೇಮಿಯಾ ಮತ್ತು ಸೆಪ್ಟಿಕ್ ಶಾಕ್ ಉಂಟಾಗಿ ಸಾವು ಸಂಭವಿಸಿರುವ ಶಂಕೆ ಇದೆ ಎಂದು ತಿಳಿಸಿದ್ದಾರೆ.

### 1.47 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು

**ಉದಯವಾಹಿನಿ, ಕಲಬುರಗಿ**

ಮನೆ ಬಾಗಿಲು ಕೊಂಡಿ ಮುರಿದು 1.47 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿರುವ ಘಟನೆ ನಗರದ ಎಸ್.ಎಂ.ಕೃಷ್ಣ ಕಾಲೋನಿಯಲ್ಲಿ ನಡೆದಿದೆ.

ಅಂಬಿಕಾ ಮೊಹ್ಮದ್ ಆಸೀಫ್ ಎಂಬುವವರ ಮನೆ ಬಾಗಿಲು ಕೊಂಡಿ ಮುರಿದು 40 ಸಾವಿರ ರೂ.ಮೌಲ್ಯದ 8 ಗ್ರಾಂ.ಬಂಗಾರದ ಲಾಕೆಟ್, 25 ಸಾವಿರ ರೂ.ಮೌಲ್ಯದ 5 ಗ್ರಾಂ.ಬಂಗಾರದ ಉಂಗುರ, 25 ಸಾವಿರ ರೂ.ಮೌಲ್ಯದ 5 ಗ್ರಾಂ.ಬಂಗಾರದ ಕಿವಿಯೋಲೆ, 10 ಸಾವಿರ ರೂ.ಮೌಲ್ಯದ 2 ಗ್ರಾಂ.ಬಂಗಾರದ ಉಂಗುರ, 7,500 ರೂ.ಮೌಲ್ಯದ ಬೆಳ್ಳಿಯ ಕಾಲುಚೈನ ಮತ್ತು ಮಕ್ಕಳ ಹಾಲಗಡಗ, 40 ಸಾವಿರ ರೂ.ನಗದು ಸೇರಿ 1,47,500 ರೂ.ಮೌಲ್ಯದ ನಗನಾಣ್ಯ ಕಳವು ಮಾಡಲಾಗಿದೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ. ಇವರು ಕುಟುಂಬದೊಂದಿಗೆ ತವರು ಮನೆಯಾದ ಬಿದನೂರ ಗ್ರಾಮಕ್ಕೆ ಹೋಗಿದ್ದಾಗ ಮನೆ ಕಳ್ಳತನವಾಗಿದೆ ಎಂದು ತಿಳಿದುಬಂದಿದೆ. ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ನಾಳೆ, ನಾಡಿದ್ದು ಕೊಟ್ಟೂರು ಶ್ರೀಗಳ ಜಯಂತ್ಯುತ್ಸವ

**ಉದಯವಾಹಿನಿ, ಬಳ್ಳಾರಿ**

ನಗರದ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದಲ್ಲಿ ಅ. 3 ಮತ್ತು 4 ರಂದು ಕಾರಣಿಕ ಯುಗಪುರುಷ ಹಾನಗಲ್ಲ ಕುಮಾರ ಶಿವಯೋಗಿಗಳ 159ನೇ, ಕಾಯಕಯೋಗಿ ಡಾ. ಸಂಗನಬಸವ ಮಹಾಸ್ವಾಮಿಗಳವರ 88ನೇ ಜಯಂತ್ಯೋತ್ಸವದ ಅಂಗವಾಗಿ ಕೊಟ್ಟೂರು ಸಂಸ್ಥಾನ ಮಠದ ಬಸವಲಿಂಗ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ನಡೆಯಿತ್ತಿರುವ ಪ್ರವಚನ ಮಂಗಲ ಮಹೋತ್ಸವ, ಸೋಮಸಮುದ್ರದಿಂದ ಶ್ರೀಧರಗಡ್ಡೆ ಮತ್ತು ಬಳ್ಳಾರಿಯ ಶ್ರೀಮಠದವರೆಗೆ ಪಾದಯಾತ್ರೆ, ಕೊಟ್ಟೂರೇಶ್ವರ ರಥೋತ್ಸವ, 1111 ಮುತ್ತೈದೆಯರಿಗೆ ಉಡಿ ತುಂಬುವ ಸಮಾರಂಭ ಹಾಗೂ ಪೂಜ್ಯದ್ವಯರ ಭಾವಚಿತ್ರದ ಉತ್ಸವದ ಕಾರ್ಯಕ್ರಮಗಳು ಅ.3 ಮತ್ತು 4 ರಂದು ಹಮ್ಮಿಕೊಳ್ಳಲಾಗಿದೆ. ಸೋಮಸಮುದ್ರ ಹಾಗೂ ಶ್ರೀಧರಗಡ್ಡೆ ಗ್ರಾಮದಿಂದ ಭಕ್ತ ಸಮೂಹ ಬಳ್ಳಾರಿಯ ಕೊಟ್ಟೂರುಸ್ವಾಮಿ ಮಠಕ್ಕೆ ಪಾದಯಾತ್ರೆಯಲ್ಲಿ ಆಗಮಿಸುವರು. ನಂತರ ಕೊಟ್ಟೂರೇಶ್ವರ ರಥೋತ್ಸವ ವಾದ್ಯ ವೈಭವಗಳೊಂದಿಗೆ ಜರುಗುವುದು. ಸಂಜೆ 7 ಗಂಟೆಗೆ 'ಜೀವನದರ್ಶನ' ಪ್ರವಚನ ಮಂಗಲೋತ್ಸವ ಶ್ರೀಗಳ ಸಾನಿಧ್ಯದಲ್ಲಿ ದರೂರು, ಸಂಗನಬಸವೇಶ್ವರಮಠ ದರೂರು, ಹಾಗು ಸೋಮಸಮುದ್ರ ಮಠದ ಶ್ರೀಗಳ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯ ಅಧ್ಯಕ್ಷ ಶಂಕರ ಮಹಾದೇವ ಬಿದರಿ, ಸಂಸದ ಈ. ತುಕಾರಾಂ, ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್, ಜಿಲ್ಲೆಯ ಶಾಸಕರಾದ ಬಿ.ನಾಗೇಂದ್ರ, ನಾರಾ ಭರತರೆಡ್ಡಿ, ಜೆ. ಎನ್. ಗಣೇಶ್, ಬಿ. ಎಂ. ನಾಗರಾಜ್, ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕೆ. ಮಹಾಂತೇಶ್ ಮೊಲಾದವರು ಆಗಮಿಸಲಿದ್ದಾರೆ.


ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ**: ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಮೌಲ್ಯ ಹೆಚ್ಚಾಗುವ ವಸ್ತುಗಳನ್ನು ಖರೀದಿಸಲು ಪರಿಪೂರ್ಣ

**ವೃಷಭ**: ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ.

**ಮಿಥುನ**: ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಇಂದು ನೀವು ಭೂಮಿ, ವಸತಿ, ಅಥವಾ ಸಾಂಸ್ಕೃತಿಕ ಯೋಜನೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಗಮನ ನಿಡಿ.

**ಕರ್ಕಾಟಕ**: ನಿಮ್ಮ ಮಾನಸಿಕ ಒತ್ತಡವನ್ನು ಹೊಡೆದೋಡಿಸಲು ಆಧ್ಯಾತ್ಮಿಕತೆ ಒಂದು ಅತ್ಯುತ್ತಮ ಆಯ್ಕೆಯಾಗಿರುವುದರಿಂದ ನೀವು ಅದರ ಸಹಾಯ ಪಡೆಯಲು ಈಗ ಒಳ್ಳೆಯ ಸಮಯ.ಧ್ಯಾನ ಮತ್ತು ಯೋಗದಿಂದ ಮಾನಸಿಕ ದೃಢತೆ ವರ್ಧಿಸುತ್ತವೆ.

**ಸಿಂಹ**: ಸ್ನೇಹಿತರ ಅಥವಾ ಒಬ್ಬ ಪರಿಚಯಸ್ಥರ ಸ್ವಾರ್ಥದ ವರ್ತನೆ ನಿಮ್ಮ ಮಾನಸಿಕ ಶಾಂತಿಗೆ ತೊಂದರೆ ತರಬಹುದು. ನೀವು ಅತ್ಯಂತ ಅನಿರೀಕ್ಷಿತ ಮೂಲಗಳಿಂದ ಗಳಿಕೆಯ ಸಾಧ್ಯತೆ ಹೊಂದಿದ್ದೀರಿ.

**ಕನ್ಯಾ**: ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ನೀವು ಇತರರ ಮೇಲೆ ಹೆಚ್ಚು ಖರ್ಚು ಮಾಡಬಯಸುತ್ತೀರಿ.

**ತುಲಾ**: ಜಗಳಗಂಟ ವ್ಯಕ್ತಿಯೊಂದಿಗಿನ ನಿಮ್ಮ ವಾದ ನಿಮ್ಮ ಮೂಡ್ ಅನ್ನು ಹಾಳು ಮಾಡಬಹುದು. ಬುದ್ಧಿವಂತಿಕೆ ತೋರಿಸಿ ಮತ್ತು ಸಾಧ್ಯವಾದರೆ ವೈಷಮ್ಯಗಳನ್ನು ತಪ್ಪಿಸಿ, ಜಗಳ, ವೈಷಮ್ಯ ಸಹಾಯ ಮಾಡುವುದಿಲ್ಲ.

**ವೃಶ್ಚಿಕ**: ನಿಮ್ಮ ಮನಸ್ಸಿನಲ್ಲಿ ಸಕಾರಾತ್ಮಕ ಆಲೋಚನೆಗಳನ್ನು ತನ್ನಿ. ನಿಮ್ಮ ಅವಾಸ್ತವಿಕ ಯೋಜನೆ ಹಣದ ಕೊರತೆಗೆ ಕಾರಣವಾಗುತ್ತದೆ. ನಿಮ್ಮ ಕೆಟ್ಟ ಅಭ್ಯಾಸಗಳು ನಿಮ್ಮ ಪ್ರೇಮಿಗೆ ಕೆಟ್ಟ ಭಾವನೆ ಉಂಟುಮಾಡಬಹುದು.

**ಧನಸ್ಸು**: ನಿಮ್ಮ ಹಠಾತ್ ಪ್ರವೃತ್ತಿ ನಿಮಗೆ ಗಂಭೀರವಾದ ಆರೋಗ್ಯದ ಸಮಸ್ಯೆಗಳನ್ನು ಉಂಟುಮಾಡಬಹುದು. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು

**ಮಕರ**: ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ಇಂದು ನೀವು ಸಾಲ ಪಡೆಯಬಹುದು.

**ಕುಂಭ**: ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ. ಮಕ್ಕಳು ಸ್ಕೂಲ್ ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಲು ನಿಮ್ಮ ಸಹಾಯ ಪಡೆಯಬಹುದು.

**ಮೀನ**: ನಿಮ್ಮ ಜೀವನ ಲಘುವಾಗಿ ತೆಗೆದುಕೊಳ್ಳಬೇಡಿ. ಬದುಕಿನ ರಕ್ಷಣೆ ನಿಜವಾದ ಆಣೆ. ಬುದ್ಧಿವಂತಿಕೆಯಿಂದ ಹೂಡಿಕೆ ಮಾಡಿ. ನಿಮ್ಮ ಹೃದಯಕ್ಕೆ ಪ್ರಿಯವಾಗುವ ಯಾರನ್ನಾದರೂ ಸಂಧಿಸುವ ಅವಕಾಶ ಬಲವಾಗಿವೆ.

## ಪೌರ ಕಾರ್ಮಿಕರ ಸೇವೆ ಶ್ಲಾಘನೀಯ

**ಉದಯವಾಹಿನಿ, ಶಿರಹಟ್ಟಿ**

ಪಟ್ಟಣದ ಸ್ವಚ್ಛತೆ, ನೈರ್ಮಲ್ಯ ಕಾಪಾಡುವ ಮೂಲಕ ಸಾರ್ವಜನಿಕರ ಆರೋಗ್ಯ ರಕ್ಷಣೆಯಲ್ಲಿ ಪೌರ ಕಾರ್ಮಿಕರ ಪಾತ್ರ ಮಹತ್ವದ್ದಾಗಿದೆ. ಬಿಸಿಲು, ಮಳೆ ಎನ್ನದೇ ನಿತ್ಯ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುವ ಪೌರ ಕಾರ್ಮಿಕರ ನಿಸ್ವಾರ್ಥ ಸೇವೆ ನಿಜಕ್ಕೂ ಶ್ಲಾಘನೀಯ' ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಿಲೇಶ ಹಾದಿಮನಿ ಹೇಳಿದರು.ಸ್ಥಳೀಯ ಡಿ.ದೇವರಾಜ ಅರಸು ಭವನದಲ್ಲಿ ಹಮ್ಮಿಕೊಳ್ಳಲಾದ


ಉದಯವಾಹಿನಿ ಚಿತ್ರ

15ನೇ ವರ್ಷದ ಪೌರ ಕಾರ್ಮಿಕ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ಸ್ವಚ್ಛ ಹಾಗೂ ಸುಂದರ ಪರಿಸರ ನಿರ್ಮಾಣದಲ್ಲಿ ಪೌರ ಕಾರ್ಮಿಕರ ಪರಿಶ್ರಮ ಅಪಾರ. ಜನರು ಸ್ವಚ್ಛ ಪರಿಸರದಲ್ಲಿ ನೆಮ್ಮದಿಯ ಜೀವನ ನಡೆಸಲು ಪೌರ ಕಾರ್ಮಿಕರು ಹಗಲಿರುಳು ಶ್ರಮಿಸುತ್ತಾರೆ. ಆದರೆ, ಅವರ ಸೇವೆ ಮತ್ತು ತ್ಯಾಗಕ್ಕೆ ತಕ್ಕ ಗೌರವ ನೀಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ' ಎಂದು ಹೇಳಿದರು. ಪೌರ ಕಾರ್ಮಿಕ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ ಹಲಗಿ ಮಾತನಾಡಿ, 'ಪೌರ ಕಾರ್ಮಿಕರ ಸೇವೆ ಕೇವಲ ಕಸ ಸಂಗ್ರಹಿಸುವ ಕಾರ್ಯಕ್ಕೆ ಸೀಮಿತವಾಗಿಲ್ಲ. ಸ್ವಚ್ಛತೆ, ನೈರ್ಮಲ್ಯ ಹಾಗೂ ಆರೋಗ್ಯಕರ ಪರಿಸರ ನಿರ್ಮಾಣದ ಮೂಲಕ ಇಡೀ ಸಮಾಜದ ಆರೋಗ್ಯವನ್ನು ಕಾಪಾಡುವ ಮಹತ್ತರ ಜವಾಬ್ದಾರಿಯನ್ನು ಅವರು ಹೊತ್ತಿದ್ದಾರೆ. ಇಂತಹ ಸೇವಾ ಮನೋಭಾವ ಹೊಂದಿರುವ ಕಾರ್ಮಿಕರನ್ನು ಸಮಾಜ ಗೌರವದಿಂದ ಕಾಣಬೇಕು. ಪೌರ ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆಗೆ ಅಗತ್ಯವಿರುವ ಸುರಕ್ಷತಾ ಪರಿಕರಗಳು ಹಾಗೂ ಮೂಲ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವುದು ಆಡಳಿತದ ಜವಾಬ್ದಾರಿಯಾಗಿದೆ. ಅಲ್ಲದೇ ಪೌರಕಾರ್ಮಿಕರ ವೇತನವನ್ನು ಸರಿಯಾಗಿ ವಿತರಣೆ ಮಾಡುವಂತೆ ಕ್ರಮ ವಹಿಸಬೇಕು' ಎಂದು ಹೇಳಿದರು.

## ಹೊಟೇಲ್ ಮಾಲೀಕನಿಗೆ ಜೈಲು, ದಂಡ

**ಉದಯವಾಹಿನಿ, ಕಲಬುರಗಿ**

ಚಿಂಚೋಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬೆನಕಪಳ್ಳಿ ಘತ್ತುನಾಯಕ ತಾಂಡಾದ ಚಿಕ್ಕ ಹೊಟೇಲ್ ಅಂಗಡಿಯಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟ ಪೆಟ್ರೋಲ್ ಕ್ಯಾನು ಸ್ಫೋಟಗೊಂಡು 4 ಮಕ್ಕಳ ಸಾವಿಗೆ ಕಾರಣನಾದ ಅಪರಾಧಿಗೆ 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸೇಡಂ ಪೀಠವು 3 ವರ್ಷ ಜೈಲು ಶಿಕ್ಷೆ ಮತ್ತು 1.10 ಲಕ್ಷ ರೂ ದಂಡ ವಿಧಿಸಿದೆ. ಹೊಟೇಲ್ ಅಂಗಡಿ ಮಾಲೀಕ ವೀರಶೆಟ್ಟಿ ಶಿಕ್ಷೆಗೊಳಗಾದ ವ್ಯಕ್ತಿ.2017 ರ ಸೆಪ್ಟೆಂಬರ್ 25 ರಂದು ಸಂಜೆ ಹೊತ್ತಿಗೆ ವೀರಶೆಟ್ಟಿ ತನ್ನ ಚಿಕ್ಕ ಹೊಟೇಲ್ ನಲ್ಲಿ ಸ್ಟೋ ಹೊತ್ತಿಸಿ ಭಜಿ ಕರಿಯುತ್ತಿದ್ದಾಗ ಸ್ಟೋ ಸ್ಫೋಟಗೊಂಡು ಪೆಟ್ರೋಲ್ ಕ್ಯಾನಿಗೆ ತಗುಲಿ ಉಂಟಾದ ಬೆಂಕಿಗೆ, ಅಂಗಡಿಗೆ ಬಂದಿದ್ದ ನಾಲ್ಕುಮಕ್ಕಳಾದ ಪ್ರೀತಂ ( 5 ವರ್ಷ),ಅಕ್ಷತಾ ( ರಕ್ಷಿತಾ ( 5 ವರ್ಷ) ,ರಿತೇಶ ( 5 ವರ್ಷ) ಮತ್ತು ರಿತಿಕಾ ( 3 ವರ್ಷ) ಸುಟ್ಟಗಾಯಗಳಿಂದ ಮೃತರಾಗಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಚಿಂಚೋಳಿ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿ ಪರಿಶೀಲಿಸಿದ 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸೇಡಂ ಪೀಠದ ನ್ಯಾಯಾಧೀಶ ಸಿರಾಜುದ್ದೀನ್ ಎ ಅವರು ಶಿಕ್ಷೆ ಮತ್ತು ದಂಡವನ್ನು ನೀಡಿ ಆದೇಶಿಸಿದ್ದಾರೆ.

### ಎಂಆರ್‌ಪಿಎಲ್ ಎಂಡಿ ಜೊತೆಗೆ ನೇರವಾಗಿ ಮಾತುಕತೆ ನಡೆಸಿ ಸಂಧಾನ ಸೂತ್ರ ಪ್ರಕಟಿಸಿದ ಶಾಸಕ ಉಮಾನಾಥ ಕೋಟ್ಯಾನ್

# ಪ್ರತಿಭಟನೆಗೆ ಮಣಿದ MRPL ಮೃತನ ಕುಟುಂಬಕ್ಕೆ 90 ಲಕ್ಷ ಪರಿಹಾರ

**ಉದಯವಾಹಿನಿ, ಮಂಗಳೂರು**

ಮಂಗಳೂರು ರಿಫೈನರಿ ಆಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ ಸಂಸ್ಥೆಯ ಕೋಕರ್ ಹೈಡ್ರೋಟ್ರೀಟರ್ ಘಟಕದಲ್ಲಿ ಬುಧವಾರ ಸಂಭವಿಸಿದ ಭೀಕರ ಸ್ಫೋಟದಲ್ಲಿ ಬಲಿಯಾದ ಮೂಲ್ಕಿ ಮೂಲದ ಯುವ ಗುತ್ತಿಗೆ ಕಾರ್ಮಿಕ ಮನೀಶ್ ಕರ್ಕಡ ಸಾವಿಗೆ ನ್ಯಾಯ ಮತ್ತು ಗರಿಷ್ಠ ಪರಿಹಾರಕ್ಕೆ ಆಗ್ರಹಿಸಿ ಎಂಆರ್‌ಪಿಎಲ್ ಮುಖ್ಯದ್ವಾರದ ಮುಂಭಾಗ ಕಾರ್ಮಿಕ ಸಂಘಟನೆಗಳು ಗುರುವಾರ ಬೆಳಗ್ಗೆಯಿಂದಲೇ ಬೃಹತ್ ಧರಣಿ ಸತ್ಯಾಗ್ರಹ ನಡೆಸಿದವು.ಎಂಆರ್‌ಪಿಎಲ್–ಒಎನ್‌ಜಿಸಿ ಕರ್ಮಚಾರಿ ಸಂಘ ಹಾಗೂ ಎಂಆರ್‌ಪಿಎಲ್ ಲೇಬರ್ ಯೂನಿಯನ್ ನೇತೃತ್ವದಲ್ಲಿ ನೂರಾರು ಕಾರ್ಮಿಕರು ಜಮಾಯಿಸಿ ಆಡಳಿತ ಮಂಡಳಿಯ ವಿರುದ್ಧ ತೀವ್ರ ಆಕ್ರೋಶ ಹೊರಹಾಕಿ, ಸ್ಥಳಕ್ಕೆ ಎಂಡಿ ಆಗಮಿಸುವಂತೆ ಪಟ್ಟುಹಿಡಿದರು. ಈ ವೇಳೆ ಮೂಡುಬಿದಿರೆ ಶಾಸಕ ಉಮಾನಾಥ ಕೋಟ್ಯಾನ್ ಅವರು ಆಡಳಿತ ಮಂಡಳಿ ಮತ್ತು ಕಾರ್ಮಿಕ ಸಂಘಟನೆಗಳ ನಡುವೆ ಸತತ ಸಂಧಾನ ನಡೆಸಿ, ಯೂನಿಯನ್‌ಗಳ ಪ್ರಮುಖ ಬೇಡಿಕೆಗಳನ್ನು ಈಡೇರಿಸುವಲ್ಲಿ ಯಶಸ್ವಿಯಾಗಿದ್ದಾರೆ.

1.ಗೊಂದಲವನ್ನು ಶಮನಗೊಳಿಸಿ
2.ಮುಖಾಮುಖಿ ಚರ್ಚೆ ನಡೆಸಿ
3.ಪರಿಹಾರ ನೀಡುವುದಾಗಿ ಸ್ಪಷ್ಟಪಡಿಸಿ

**ಎಂಆರ್‌ಪಿಎಲ್ ಮುಖ್ಯದ್ವಾರದ ಬಳಿ ಪ್ರತಿಭಟನೆ:** ಆಡಳಿತ ಮಂಡಳಿಯ



ಉದಯವಾಹಿನಿ ಚಿತ್ರ

ಎಂಡಿ ಜೊತೆಗೆ ನೇರವಾಗಿ ಮಾತುಕತೆ ನಡೆಸಿ ಸಂಧಾನ ಸೂತ್ರ ಪ್ರಕಟಿಸಿದ ಶಾಸಕ ಉಮಾನಾಥ ಕೋಟ್ಯಾನ್ ಅವರು ದೂರವಾಣಿ ಮೂಲಕ ಪ್ರಮುಖ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

**ಯೂನಿಯನ್‌ಗಳ ಪ್ರಮುಖ ಎರಡು ಡಿಮ್ಯಾಂಡ್‌ಗಳ ಈಡೇರಿಕೆ:** ಧರಣಿ ಸ್ಥಳದಲ್ಲಿದ್ದ ಗೊಂದಲವನ್ನು ಶಮನಗೊಳಿಸಿ ಕಾರ್ಮಿಕರ ಹಿತರಕ್ಷಣೆ ಮಾಡಿರುವ ಕುರಿತು ಮಾತನಾಡಿದ ಶಾಸಕ ಉಮಾನಾಥ ಕೋಟ್ಯಾನ್, ನಾನು ಕಾರ್ಮಿಕರಿಗೆ ನ್ಯಾಯ ಕೊಡಿಸಲು ಮಧ್ಯಸ್ಥಿಕೆ ವಹಿಸಿದೆ. ಎಂಆರ್‌ಪಿಎಲ್ ಎಂಡಿ ಜೊತೆ ಮುಖಾಮುಖಿ ಚರ್ಚೆ ನಡೆಸಿ ಕಾರ್ಮಿಕರ ಪರವಾಗಿ ನಿಂತೆ. ಎಂಆರ್‌ಪಿಎಲ್ ಎಂಡಿ ಅವರು ಮೃತನ ಕುಟುಂಬಕ್ಕೆ 90 ಲಕ್ಷ ರೂಪಾಯಿ ಪರಿಹಾರ ನೀಡುವುದಾಗಿ ಸ್ಪಷ್ಟಪಡಿಸಿದ್ದಾರೆ.

> ಮೃತ ಮನೀಶ್ ಕುಟುಂಬಕ್ಕೆ 90 ಲಕ್ಷ ರೂ. ಪರಿಹಾರ: ಸ್ಫೋಟದಲ್ಲಿ ಜೀವ ಕಳೆದುಕೊಂಡ ಗುತ್ತಿಗೆ ಕಾರ್ಮಿಕ ಮನೀಶ್ ಕರ್ಕಡ ಅವರ ಕುಟುಂಬಕ್ಕೆ ಎಂಆರ್‌ಪಿಎಲ್ ವತಿಯಿಂದ 90 ಲಕ್ಷ ರೂ. ನಷ್ಟಪರಿಹಾರ ನೀಡಲು ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಅಧಿಕೃತವಾಗಿ ಸಮ್ಮತಿಸಿದ್ದಾರೆ.
> – ಉಮಾನಾಥ ಕೋಟ್ಯಾನ್, ಶಾಸಕ.

### 10 ಲಕ್ಷ ರೂ. ಮೆಡಿಕಲ್ ಇನ್ಶೂರೆನ್ಸ್

ಎಂಆರ್‌ಪಿಎಲ್ ಆವರಣದಲ್ಲಿ ಕೆಲಸ ಮಾಡುತ್ತಿರುವ ಕಾಯಂ ಉದ್ಯೋಗಿಗಳಷ್ಟೇ ಅಲ್ಲದೆ, ಅಪಾಯದ ನಡುವೆ ದುಡಿಯುತ್ತಿರುವ ಎಲ್ಲಾ ಗುತ್ತಿಗೆ ಕಾರ್ಮಿಕರ ಕುಟುಂಬಗಳಿಗೂ ಅನ್ವಯವಾಗುವಂತೆ ತಲಾ 10 ಲಕ್ಷ ರೂ. ಮೊತ್ತದ ಆರೋಗ್ಯ ವಿಮಾ ಸೌಲಭ್ಯವನ್ನು ಮುಂದಿನ 15 ದಿನಗಳ ಒಳಗಾಗಿ ಜಾರಿಗೆ ತರಲು ಎಂಡಿ ಒಪ್ಪಿಗೆ ನೀಡಿದ್ದಾರೆ ಎಂದು ಶಾಸಕರು ಮಾಹಿತಿ ನೀಡಿದ್ದಾರೆ.

ಜೊತೆಗೆ, ಗುತ್ತಿಗೆ ನೌಕರರೂ ಒಳಗೊಂಡಂತೆ ಎಲ್ಲಾ ಸಿಬ್ಬಂದಿ ಕುಟುಂಬಗಳಿಗೆ 15 ದಿನಗಳ ಒಳಗಾಗಿ 10 ಲಕ್ಷ ರೂಪಾಯಿ ಮೊತ್ತದ ಮೆಡಿಕಲ್ ಕ್ಲೈಮ್ ಇನ್ಶೂರೆನ್ಸ್ ಒದಗಿಸುವುದಾಗಿ ಭರವಸೆ ನೀಡಿದ್ದಾರೆ. ಕಾರ್ಮಿಕ ಸಂಘಟನೆಗಳ ಈ ಎರಡೂ ಪ್ರಮುಖ ಬೇಡಿಕೆಗಳನ್ನು ಪಾಸ್ ಮಾಡಿಸಲಾಗಿದೆ. ಎಲ್ಲಾ ಮುಖಂಡರ ಸಮ್ಮುಖದಲ್ಲೇ ಈ ತೀರ್ಮಾನವಾಗಿದ್ದು, ಈ ಎರಡೂ ಬೇಡಿಕೆಗಳ ಒಪ್ಪಿಗೆ ವಿವರವನ್ನು ಅಧಿಕೃತವಾಗಿ ಕಳುಹಿಸಿಕೊಡಲಿದ್ದಾರೆ ಎಂದು ತಿಳಿಸಿದ್ದಾರೆ.

## ಹಿರಿಯರಿಗೆ ಗೌರವ ಕೊಡುವುದು ನಮ್ಮೆಲ್ಲರ ಜವಾಬ್ದಾರಿ

**ಉದಯವಾಹಿನಿ, ಯಲಬುರ್ಗಾ**

ಇಂದಿನ ದಿನಮಾನಗಳಲ್ಲಿ ಅವಿಭಕ್ತ ಕುಟುಂಬದಿಂದ ಮನ್ನಣೆ ಸಿಗದೇ ಹಿರಿಯರಿಗೆ ಗೌರವ ದೊರೆಯುತ್ತಿಲ್ಲ ಎಂದು ಪಿಡಿಒ ಅಬ್ದುಲ್ ಗಾಫರ್ ಹೇಳಿದರು.

ಇಂದು ಯಲಬುರ್ಗಾ ತಾಲ್ಲೂಕಿನ ಬೇವೂರು ಗ್ರಾಮದ ಮಹಾತ್ಮಾಗಾಂಧಿ ಗ್ರಾಮ ಪಂಚಾಯತ್ ಅರಿವು ಹಾಗೂ ಗ್ರಾಮ ಹಿರಿಯರ ಕೇಂದ್ರದಲ್ಲಿ ಟಾಟಾ ಕಲಿಕಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮಕ್ಕೆ ಕೇಕ್ ಕತ್ತರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ನಿವೃತ್ತ ಕೃಷಿ ಅಧಿಕಾರಿ ದ್ಯಾಮಣ್ಣ ಹಳ್ಳಿ ಮಾತನಾಡಿ, ಪ್ರತಿಯೊಬ್ಬರೂ ಹಿರಿಯರನ್ನು ಸಂತಸದಿಂದ ಕಾಣಬೇಕು. ಹಿರಿಯರನ್ನು ಹುಟ್ಟುಹಬ್ಬದ ಮೂಲಕ ಗೌರವಿಸುವ ಕಾರ್ಯ ಸ್ಮರಿಸೋಣ ಎಂದರು. ಹಿರಿಯ ನಾಗರಿಕ ಮಂಜುನಾಥ್ ಭಟ್ಟಿ ಮಾತನಾಡಿದರು.



ಉದಯವಾಹಿನಿ ಚಿತ್ರ

ಗ್ರಂಥಾಲಯ ಅರಿವು ಕೇಂದ್ರದ ಮೇಲ್ವಿಚಾರಕರಾದ ಬಸವಂತೆವ್ವ ಆರ್. ಕಮ್ಮಾರ್, ದೇವರಾಜ್ ಮ್ಯಾದನೇರಿ, ಟಾಟಾ ಕಲಿಕಾ ಟ್ರಸ್ಟ್ ಪ್ರೇರಕಿ ನಿರ್ಮಲಾ ಜಾಲಿಹಾಳ್, ಹಿರಿಯರಾದ ರುದ್ರಪ್ಪ ಕೊಳಜಿ, ಸಂಗಪ್ಪ ಗೋಂದಿ, ಡಾ. ಶೇಖರ್ ಭಜಂತ್ರಿ, ಅಹ್ಮಸಾಬ್ ದೊಡ್ಮನಿ, ಗ್ರಾ. ಪಂ. ಕವಸೂಲಿಗಾರ ಬಸವರಾಜ್ ಕೊಳಜಿ, ಕಂಪ್ಯೂಟರ್ ಆಪೇಟರ್ ನಾಗರತ್ನ ಹೊಸೂರು, ಹಿರಿಯರಾದ ದೇವಪ್ಪ ಸಂಗಟಿ, ಬಸಪ್ಪ ಹಳ್ಳಿ, ಅಕ್ಕಮ್ಮ ಮದ್ದೂರು, ಮಹಾದೇವಿ ಮ್ಯಾಗಡೆ, ಅಕ್ಕಮಹಾದೇವಿ ಉಪಸ್ಥಿತರಿದ್ದರು.

## ಬಿಸಿಎಂ ಹಾಸ್ಟೆಲ್ ಅವ್ಯವಸ್ಥೆ: ತಾಪಂ ಇಒ ಭೇಟಿ, ನೋಟೀಸ್ ಜಾರಿಗೆ ಸೂಚನೆ

**ಉದಯವಾಹಿನಿ, ಚಿಂಚೋಳಿ**

ಪಟ್ಟಣದ ಚಂದಾಪೂರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಬೆಳ್ಳಂಬೆಳಿಗ್ಗೆ ತಾಲ್ಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷಕುಮಾರ ಚವ್ಹಾಣ ಭೇಟಿನೀಡಿ ವಸತಿ ನಿಲಯಗಳಲ್ಲಿ ವಾಸವಾಗಿದ್ದ ವಿಧ್ಯಾರ್ಥಿಗಳಿಂದ ವಸತಿನಿಲಯದ ಊಟ,ಉಪಹಾರ ಅವ್ಯವಸ್ಥೆ ಕಂಡು ತಕ್ಷಣವೇ ನೋಟಿಸ್ ಜಾರಿ ಮಾಡಲಾಗುವುದು ಎಂದು ತಾಪಂ.ಇಓ ಸಂತೋಷಕುಮಾರ ಚವ್ಹಾಣ ತಿಳಿಸಿದ್ದಾರೆ.

ಗುರುವಾರ ಬೆಳ್ಳಂಬೆಳಿಗ್ಗೆ 7ಗಂಟೆಗೆ ಬಿಸಿಎಂ ಇಲಾಖೆಯ ಬಾಲಕರ ಮೆಟ್ರಿಕ್ ಪೂರ್ವ ವಸತಿನಿಲಯಕ್ಕೆ ಭೇಟಿ ನೀಡಿ ವಸತಿನಿಲಯದಲ್ಲಿನ ಕುಡಿಯುವ ನೀರಿನ ಸಮಸ್ಯೆ,ಮೆನು ಪ್ರಕಾರ ಊಟ ವ್ಯವಸ್ಥೆ ಇಲ್ಲದೆ ಇರುವುದರಿಂದ ಮತ್ತು ಮೇಲ್ವಾಚಾರಕ ಇಲ್ಲದಿರುವುದು ಮತ್ತು ಅಡುಗೆ ಮಾಡುವವರು ಸಹಾಯಕರು ಇಲ್ಲದೆ ಇರುವುದರಿಂದ ಮಕ್ಕಳಿಗೆ ಹೊದಿಕೆ ಬೇಡ್ ಶೀಟ್ ಇಲ್ಲದೆ ಗುಣಮಟ್ಟದ ಆಹಾರ ,ಮೂಲಭೂತ ಸೌಕರ್ಯ ಇಲ್ಲದೆ


ಉದಯವಾಹಿನಿ ಚಿತ್ರ

ಇರುವುದರಿಂದ ಬಿಸಿಎಂ ಕಲ್ಯಾಣಾಧಿಕಾರಿ ರಾಹುಲ್ ಪಂಚಶೀಲ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿ ನೋಟಿಸ್ ಜಾರಿ ಮಾಡಲಾಗುವುದು ಉತ್ತರಿಸುವಂತೆ ಸಿಡಿಮಿಡಿಗೊಂಡರು.

ಮತ್ತೆ ಬಿಸಿಎಂ ಮೆಟ್ರಿಕ್ ನಂತರ ಬಾಲಕರ ವಸತಿಕ್ಕೆ ಭೇಟಿ ನೀಡಿದ ಅವರು,ಅಲ್ಲಿನ ಮೂಲಭೂತ ಸೌಕರ್ಯ ಮತ್ತು ಗುಣಮಟ್ಟದ ಆಹಾರ,ಪರಿಶೀಲಿಸಿ ವಸತಿನಿಲಯ ಮಕ್ಕಳೊಂದಿಗೆ ವಸತಿನಿಲಯ ಕುಂದುಕೊರತೆಗಳ ಮಾಹಿತಿ ಪಡೆದು ಮಕ್ಕಳೊಂದಿಗೆ ಉಪಹಾರ ಸೇವಿಸಿ ವಸತಿನಿಲಯದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದರು.

## ಬಸ್ ನಿಲುಗಡೆಗೆ ಮನವಿ ಸಲ್ಲಿಸಿದ ವಿದ್ಯಾರ್ಥಿಗಳು


ಉದಯವಾಹಿನಿ ಚಿತ್ರ

**ಉದಯವಾಹಿನಿ, ನರೇಗಲ್**

ಪಟ್ಟಣದ ಅನ್ನದಾನೇಶ್ವರ ಹಾಗೂ ಸರ್ಕಾರಿ ಶಾಲಾ–ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ, ಗಜೇಂದ್ರಗಡ–ನರೇಗಲ್ ಮಾರ್ಗದ ಸಿರಗುಂಪಿ ಕ್ರಾಸ್‌ನಲ್ಲಿ ಸರ್ಕಾರಿ ಬಸ್‌ಗಳನ್ನು ನಿಲ್ಲಿಸಬೇಕೆಂದು ಒತ್ತಾಯಿಸಿ ವಿದ್ಯಾರ್ಥಿಗಳು ಗಜೇಂದ್ರಗಡ ಸಾರಿಗೆ ಘಟಕದ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದರು.ಅನ್ನದಾನೇಶ್ವರ ಪಿಯು ಕಾಲೇಜು ಬೆಳಗ್ಗೆ 8:30ಕ್ಕೆ ಆರಂಭವಾಗಲಿದ್ದು, ಸಿರಗುಂಪಿ ಗ್ರಾಮದಿಂದ ಸುಮಾರು 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಿತ್ಯ ವ್ಯಾಸಂಗಕ್ಕೆ ತೆರಳುತ್ತಾರೆ. ಗ್ರಾಮದಿಂದ ಮುಖ್ಯರಸ್ತೆಯ ಸಿರಗುಂಪಿ ಕ್ರಾಸ್‌ಗೆ ಬರಲು ವಿದ್ಯಾರ್ಥಿಗಳು ಸುಮಾರು 2 ಕಿ.ಮೀ. ಕಾಲ್ನಡಿಗೆಯಲ್ಲೇ ಕ್ರಮಿಸಬೇಕಾದ ಅನಿವಾರ್ಯತೆಯಿದೆ. ಬೆಳಗ್ಗೆ 7 ಗಂಟೆಯಿಂದಲೇ ಕ್ರಾಸ್‌ನಲ್ಲಿ ಕಾದು ನಿಂತರೂ, ಚಾಲಕರು ಬಸ್‌ಗಳನ್ನು ನಿಲ್ಲಿಸದೇ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಕೈ ಮುಗಿದು ಬೇಡಿದರೂ, ಕೈ ತೋರಿಸಿದರೂ ನಿಲ್ಲಿಸದೇ ವೇಗವಾಗಿ ಹೋಗುತ್ತಿದ್ದಾರೆ. ಹೀಗಾಗಿ ನಿತ್ಯ ಸಕಾಲಕ್ಕೆ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸಿರಗುಂಪಿ ಕ್ರಾಸ್‌ನಲ್ಲಿ ಎಲ್ಲಾ ಬಸ್‌ಗಳ ನಿಲುಗಡೆಗೆ ಕಟ್ಟುನಿಟ್ಟಿನ ಆದೇಶ ನೀಡಬೇಕು. ಶಾಲಾ–ಕಾಲೇಜು ಆರಂಭ ಮತ್ತು ಮುಕ್ತಾಯದ ವೇಳೆಗೆ ಪೂರಕವಾಗಿ ಹೆಚ್ಚುವರಿ ಬಸ್‌ಗಳನ್ನು ಓಡಿಸಬೇಕು ಎಂದು ಆಗ್ರಹಿಸಿದರು. ವಿದ್ಯಾರ್ಥಿಗಳಾದ ವೀರನಗೌಡ, ಬಸವರಾಜ, ಹೊನಕೇರಪ್ಪ, ರವಿ, ರೇಣುಕಯ್ಯ, ಈರಣ್ಣ, ನೇತ್ರಾವತಿ, ಮೇಘಾ ಗಾಣಗೇರ, ಕಾವೇರಿ, ಅಶ್ವಿನಿ, ಕಾವ್ಯ, ಅನು, ಯಲ್ಲಮ್ಮ, ಮಂಜುನಾಥ, ಅರ್ಜುನ ಇದ್ದರು.

## ಔಷಧಗಳ ಗುಣಮಟ್ಟ: ಜಾಗರೂಕತೆ ವಹಿಸಿ

**ಉದಯವಾಹಿನಿ, ಬೀದರ್**

ರೋಗಿಗಳಿಗೆ ಔಷಧ ನೀಡುವಾಗ ಔಷಧ ತಜ್ಞರು ಔಷಧಗಳ ಗುಣಮಟ್ಟದ ಕುರಿತು ಜಾಗರೂಕತೆ ವಹಿಸಬೇಕು ಎಂದು ಸಹಾಯಕ ಔಷಧ ನಿಯಂತ್ರಣಾಧಿಕಾರಿ ಧನಂಜಯ್ ಹತ್‌ಪಾಕಿ ಸಲಹೆ ಮಾಡಿದರು. ಆಹಾರ ಸರ್ವಕತೆ ಮತ್ತು ಔಷಧ ಮಂಡಳಿ ಹಾಗೂ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ವತಿಯಿಂದ ನಗರದ ಜನವಾಡ ರಸ್ತೆಯಲ್ಲಿನ ಬಸವೇಶ್ವರ ಲೇಔಟ್‌ನಲ್ಲಿ ಇರುವ ಫಾರ್ಮಾ ಭವನದಲ್ಲಿ ನಡೆದ ವಿಶ್ವ ಔಷಧ ತಜ್ಞರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ರೋಗಿಗಳು ಹಾಗೂ ಸಾರ್ವಜನಿಕರ ಸುರಕ್ಷತೆಯೇ ಔಷಧ ತಜ್ಞರ ಪ್ರಥಮ ಆದ್ಯತೆಯಾಗಬೇಕು ಎಂದರು. ವೈದ್ಯರ ಚೀಟಿ ಇಲ್ಲದೆ ರೋಗಿಗಳಿಗೆ ಔಷಧಗಳನ್ನು ಕೊಡಬಾರದು ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷ ಬಸವರಾಜ ಪಾಟೀಲ ಹಾರೂರಗೇರಿ ಮಾತನಾಡಿ, ಔಷಧ ತಜ್ಞರ ಪಾತ್ರವೂ ವೈದ್ಯರಷ್ಟೇ ಪ್ರಮುಖವಾಗಿದೆ. ವೈದ್ಯರು ರೋಗಿಗಳ ತಪಾಸಣೆ ನಡೆಸಿ ಔಷಧ ಬರೆದುಕೊಟ್ಟರೆ, ಅದನ್ನು ಹೇಗೆ ತೆಗೆದುಕೊಳ್ಳಬೇಕು ಎನ್ನುವ ಕುರಿತು ಮಾರ್ಗದರ್ಶನ ನೀಡುವವರು ಔಷಧ ತಜ್ಞರು ಎಂದು ತಿಳಿಸಿದರು. ಸಂಘವು ಜಿಲ್ಲೆಯ ಔಷಧ ವ್ಯಾಪಾರಿಗಳ ಹಿತ ರಕ್ಷಣೆಗೆ ಸದಾ ಸಿದ್ಧವಿದೆ ಎಂದು ಹೇಳಿದರು. ಕರ್ನಾಟಕ ರಾಜ್ಯ ಔಷಧ ವ್ಯಾಪಾರಿಗಳ ಸಂಘದ ಉಪಾಧ್ಯಕ್ಷ ಶಿವರಾಜ ಪಾಟೀಲ ಮಾತನಾಡಿ, ಔಷಧ ತಜ್ಞರ ಮಾನ್ಯತೆ ನವೀಕರಣ ಅವಧಿಯನ್ನು ಒಂದು ವರ್ಷದಿಂದ ಐದು ವರ್ಷಕ್ಕೆ ವಿಸ್ತರಿಸಬೇಕು ಎಂದು ಒತ್ತಾಯಿಸಿದರು.

## ವಿದ್ಯಾರ್ಥಿಯ ಅಗತ್ಯಕ್ಕೆ ತಕ್ಕಂತೆ ಬಾಗುವವನೇ ನಿಜವಾದ ಗುರು: ವೆಂಕಟಗಿರಿ ದಳವಾಯಿ

**ಉದಯವಾಹಿನಿ, ಬಳ್ಳಾರಿ**

ವಿದ್ಯಾರ್ಥಿಯ ಅಗತ್ಯಕ್ಕೆ ತಕ್ಕಂತೆ ತನ್ನನ್ನು ಬದಲಿಸಿಕೊಂಡು, ಅವರಲ್ಲಿ ಚಿಂತನೆ, ಸೃಜನಶೀಲತೆ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವವನೇ ನಿಜವಾದ ಗುರು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ. ವೆಂಕಟಗಿರಿ ದಳವಾಯಿ ಹೇಳಿದರು. ವೀರಶೈವ ವಿದ್ಯಾವರ್ಧಕ ಸಂಘದ ವತಿಯಿಂದ ಶಿಕ್ಷಕರ ದಿನಾಚರಣೆ ಅಂಗವಾಗಿ ಸಂಘದ ಶಾಲಾ–ಕಾಲೇಜುಗಳ ನಿವೃತ್ತ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಶಿಕ್ಷಕರಿಗೆ ಸನ್ಮಾನ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ನಗರದ ಶ್ರೀಮತಿ ಅಲ್ಲಂ ಸುಮಂಗಳಮ್ಮ ಮಹಿಳಾ ಮಹಾವಿದ್ಯಾಲಯದ ಸಭಾಂಗಣದಲ್ಲಿ ಬುಧವಾರ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀಮತಿ ಅಲ್ಲಂ ಸುಮಂಗಳಮ್ಮ ಮಹಿಳಾ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲರಾದ ಡಾ. ಎ.ಎಂ. ಕಾಳಮ್ಮ ಉದ್ಘಾಟಿಸಿದರು. ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಸಲ್ಲಿಸಿದರು. ವೀ.ವಿ. ಸಂಘದ ಗಂಧರ್ವ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳ ನಾಡಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ಉದ್ಘಾಟನಾ ನುಡಿಯಲ್ಲಿ ಡಾ. ಎ.ಎಂ. ಕಾಳಮ್ಮ ಮಾತನಾಡಿ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶಿಕ್ಷಕರನ್ನು ಗೌರವಿಸುವುದು ಸಮಾಜದ ಮಹತ್ವದ ಜವಾಬ್ದಾರಿಯಾಗಿದೆ. ಒಬ್ಬ ಶಿಕ್ಷಕ ಸಾವಿರಾರು ವಿದ್ಯಾರ್ಥಿಗಳ ಬದುಕನ್ನು ರೂಪಿಸಬಲ್ಲ. ಅವರಿಂದ ರೂಪುಗೊಂಡ ವಿದ್ಯಾರ್ಥಿಗಳೇ ಮುಂದೆ ಸಮಾಜದ ನಿರ್ಮಾತೃಗಳಾಗುತ್ತಾರೆ. ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆ ವೇಗವಾಗಿ ಬೆಳೆಯುತ್ತಿದ್ದರೂ ಗುರು–ಶಿಷ್ಯರ ನಡುವಿನ ಭಾವನಾತ್ಮಕ ಸಂಬಂಧವನ್ನು ಅವುಗಳಿಂದ ನಿರ್ಮಿಸಲು ಸಾಧ್ಯವಿಲ್ಲ ಎಂದರು. ನಿವೃತ್ತ ಶಿಕ್ಷಕರು ಸಂಸ್ಥೆಯ ಆವರಣದಿಂದ ದೂರವಾಗಿದ್ದರೂ, ಅವರು ಬಿತ್ತಿದ ಜ್ಞಾನ ಮತ್ತು ಮೌಲ್ಯಗಳ ಬೀಜಗಳು ವಿದ್ಯಾರ್ಥಿಗಳ ಬದುಕಿನಲ್ಲಿ ನಿರಂತರವಾಗಿ ಫಲ ನೀಡುತ್ತಲೇ ಇರುತ್ತವೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

### ಗ್ಯಾರಂಟಿ ಯೋಜನೆಗಳ ಸೌಲಭ್ಯಗಳು ಮಹಿಳೆಯರು, ಹಿಂದುಳಿದವರು ಸೇರಿದಂತೆ ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ತಲುಪಬೇಕು

# ಫಲಾನುಭವಿಗಳಿಗೆ ಸೌಲಭ್ಯ ತಲುಪಿಸಲು ವಾರ್ಡ್ ಮಟ್ಟದಲ್ಲಿ ಸಮಿತಿ ರಚನೆ

**ಉದಯವಾಹಿನಿ, ವಿಜಯಪುರ**

ರಾಜ್ಯ ಸರ್ಕಾರ ನುಡಿದಂತೆ ನಡೆದುಕೊಂಡಿದ್ದು, ಪಂಚ ಗ್ಯಾರಂಟಿ ಯೋಜನೆಗಳು ವಿಜಯಪುರ ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿವೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್. ಪಾಟೀಲ ಬ್ಯಾಡಗಿ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆದ 2026–27ನೇ ಸಾಲಿನ ಆಗಸ್ಟ್ ಅಂತ್ಯದವರೆಗಿನ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಮಿತಿ ರಚನೆ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳ ಸೌಲಭ್ಯಗಳು ಮಹಿಳೆಯರು, ಹಿಂದುಳಿದವರು ಸೇರಿದಂತೆ ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ತಲುಪಬೇಕು. ಫಲಾನುಭವಿಗಳ ಸಮಸ್ಯೆಗಳನ್ನು ಆಲಿಸಿ ತ್ವರಿತವಾಗಿ ಪರಿಹರಿಸುವಂತೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಗ್ರಾಮೀಣ ಭಾಗದಲ್ಲಿ ಯೋಜನೆಗಳ ಅನುಷ್ಠಾನ ಮತ್ತಷ್ಟು ಪರಿಣಾಮಕಾರಿಯಾಗಲು ವಾರ್ಡ್ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗುವುದು ಎಂದರು.

1.ಶಕ್ತಿ ಯೋಜನೆಯಡಿ 22.47 ಕೋಟಿ
2.ಸರ್ಕಾರ 772.07 ಕೋಟಿ ವೆಚ್ಚ
3.ಸ್ವಚ್ಛತೆ ಅಗತ್ಯ ಮೂಲಸೌಕರ್ಯ

**ಶಕ್ತಿ ಯೋಜನೆಯಡಿ 22.47 ಕೋಟಿ ಪ್ರಯಾಣ:** ಜಿಲ್ಲೆಯಲ್ಲಿ ಶಕ್ತಿ ಯೋಜನೆಯಡಿ ಮಹಿಳೆಯರು 22,47,20,733 ಬಾರಿ ಉಚಿತವಾಗಿ ಪ್ರಯಾಣಿಸಿದ್ದು, ಸರ್ಕಾರ 772.07 ಕೋಟಿ ವೆಚ್ಚ ಮಾಡಿದೆ. ಎಲ್ಲಾ ತಾಲ್ಲೂಕು ಕೇಂದ್ರಗಳ ಬಸ್ ನಿಲ್ದಾಣಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿದ್ದು, ಸ್ವಚ್ಛತೆ ಹಾಗೂ ಅಗತ್ಯ ಮೂಲಸೌಕರ್ಯ


ಉದಯವಾಹಿನಿ ಚಿತ್ರ

ಕಲ್ಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಣೆಯಲ್ಲಿ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

**ಗೃಹಜ್ಯೋತಿ:** ಉಚಿತ ವಿದ್ಯುತ್ ನೀಡುವ ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ 4,50,372 ಗ್ರಾಹಕರು ನೋಂದಾಯಿಸಿಕೊಂಡಿದ್ದು, 667.03 ಕೋಟಿ ವೆಚ್ಚವಾಗಿದೆ. ಬಡ ಕುಟುಂಬಗಳು ಯೋಜನೆಯಿಂದ ಹೊರಗುಳಿಯದಂತೆ ಅಧಿಕಾರಿಗಳು ವಿಶೇಷ ಗಮನಹರಿಸಬೇಕು ಎಂದು ಸೂಚಿಸಿದರು.

**ಅನ್ನಭಾಗ್ಯ:** ಅನ್ನಭಾಗ್ಯ ಯೋಜನೆಯಡಿ 16,55,941 ಫಲಾನುಭವಿಗಳು ಸೌಲಭ್ಯ ಪಡೆಯುತ್ತಿದ್ದು, 457.03 ಕೋಟಿ ಬಿಡುಗಡೆಯಾಗಿದೆ.

**ಯುವನಿಧಿ:** ನಿರುದ್ಯೋಗಿ ಯುವಜನತೆಗೆ ನೆರವಾಗುವ ಯುವನಿಧಿ ಯೋಜನೆಯಡಿ 28,070 ಫಲಾನುಭವಿಗಳು ನೋಂದಾಯಿಸಿಕೊಂಡಿದ್ದು, 80.24 ಕೋಟಿ ಧನಸಹಾಯ ನೀಡಲಾಗಿದೆ. ಕಾಲೇಜುಗಳಲ್ಲಿ ಯುವನಿಧಿ ಸೇರಿದಂತೆ ಗ್ಯಾರಂಟಿ ಯೋಜನೆಗಳ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಆಹಾರ ಇಲಾಖೆಯ ಉಪನಿರ್ದೇಶಕ ವಿನಯಕುಮಾರ ಪಾಟೀಲ ಮಾತನಾಡಿ, ಜಿಲ್ಲೆಯಲ್ಲಿ ಇ–ಕೆವೈಸಿ ಪ್ರಕ್ರಿಯೆ ನಡೆಯುತ್ತಿದ್ದು, ಶೇ.78ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ತಿಳಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ್ ದೈವಾಡಿ ಮಾತನಾಡಿ, ಭಾರತ ಜೋಡೋ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ 320 ಸಂಘಗಳನ್ನು ರಚಿಸಲಾಗಿದ್ದು, ಮೆಂಟರ್‌ಗಳನ್ನು ನೇಮಕ ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಸಂತ ಹೊನಮೋಡೆ, ಮಹಾನಗರ ಪಾಲಿಕೆ ಗ್ಯಾರಂಟಿ ಯೋಜನೆ ಅಧ್ಯಕ್ಷ ಶಬ್ಬೀರ ಜಾಗೀರದಾರ, ವಿಭಾಗೀಯ ನಿಯಂತ್ರಣಾಧಿಕಾರಿ ಪ್ರೇಮಾನಂದ ಬಿರಾದಾರ, ಮುಖ್ಯ ಯೋಜನಾಧಿಕಾರಿ ಸಿ.ಬಿ. ಕುಂಬಾರ ಸೇರಿದಂತೆ ವಿವಿಧ ತಾಲ್ಲೂಕುಗಳ ಸಮಿತಿ ಅಧ್ಯಕ್ಷರು, ಸದಸ್ಯರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

> ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಯಶೋಗಾಥೆಗಳ ಕೈಪಿಡಿ ಸಿದ್ಧಪಡಿಸುವಂತೆ ಸಲಹೆ ನೀಡಿದ ಅವರು, ಗ್ಯಾರಂಟಿ ಯೋಜನೆಗಳ ಲಾಭ ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ತಲುಪುವಂತೆ ನಿರಂತರ ಪರಿಶೀಲನೆ ನಡೆಸಬೇಕು.
> –ಎಸ್.ಆರ್. ಪಾಟೀಲ, ಬ್ಯಾಡಗಿ

### ಫಲಾನುಭವಿಗಳಿಗೆ ಧನಸಹಾಯ

ಗೃಹಲಕ್ಷ್ಮಿ ಯೋಜನೆಯಡಿ ಜಿಲ್ಲೆಯಲ್ಲಿ 5,03,829 ಮಹಿಳಾ ಫಲಾನುಭವಿಗಳಿಗೆ ಒಟ್ಟು 3,092.06 ಕೋಟಿ ಧನಸಹಾಯ ತಲುಪಿದೆ. ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಯೋಜನೆಯಡಿ ಅತ್ಯಧಿಕ ಮೊತ್ತದ ವೆಚ್ಚವಾಗಿದೆ ಎಂದು ಎಸ್.ಆರ್. ಪಾಟೀಲ ತಿಳಿಸಿದರು.

ಉದಯ ವಾಹಿನಿ



### 174 ಜನರ ಪ್ರಾಣ ಉಳಿಸಿದ ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಸಾಹಸಕ್ಕೆ ಪ್ರಧಾನಿ ಮೋದಿ ಮೆಚ್ಚುಗೆ..!

# ವಿಮಾನ ಹೈಜಾಕ್‌ಗೆ ಯತ್ನ; ಕಾಕ್‌ಪಿಟ್‌ನಲ್ಲೇ ಡೆಡ್ಲಿ ಫೈಟ್

**ನವದೆಹಲಿ:** ಫ್ಲೈದುಬೈ ವಿಮಾನವನ್ನು ಪತನಗೊಳಿಸಲು ಸಹ ಪೈಲಟ್ ನಡೆಸಿದ ಎನ್ನಲಾದ ಯತ್ನವನ್ನು ವಿಫಲಗೊಳಿಸುವಲ್ಲಿ ಧೈರ್ಯ ಪ್ರದರ್ಶಿಸಿದ ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಗುರುವಾರ 'ಹೀರೋ' ಎಂದು ಶ್ಲಾಘಿಸಿದ್ದಾರೆ.

ಗಂಭೀರವಾಗಿ ಗಾಯಗೊಂಡಿದ್ದರೂ ನೂರಾರು ಪ್ರಯಾಣಿಕರ ಜೀವ ಉಳಿಸಲು ಅವರು ತೋರಿದ ಧೈರ್ಯದಿಂದ ಭಾರೀ ದುರಂತವೊಂದು ತಪ್ಪಿದೆ ಎಂದು ಮೋದಿ ಹೇಳಿದ್ದಾರೆ.

1.ಫ್ಲೈದುಬೈ ವಿಮಾನ ಪತನಗೊಳಿಸಲುಯತ್ನ
2.ಧೈರ್ಯ ಪ್ರದರ್ಶಿಸಿದ ಭಾರತೀಯ ಪೈಲಟ್
3.ಕ್ಯಾಪ್ಟನ್ ಸ್ಮಿತ್ ಮಚ್ಚರ್‌ಗೆ ಪ್ರಶಂಸೆ

ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, "ಕ್ಯಾಪ್ಟನ್ ಸ್ಮಿತ್ ಮಚ್ಚರ್ ಒಬ್ಬ ಹೀರೋ. ಅತ್ಯಂತ ಅಪಾಯಕಾರಿ ಪರಿಸ್ಥಿತಿಯಲ್ಲೂ, ಗಂಭೀರವಾಗಿ ಗಾಯಗೊಂಡಿದ್ದರೂ ಅಪಾರ ಧೈರ್ಯ ಹಾಗೂ ಇತರರ ಜೀವ ರಕ್ಷಿಸುವ ಅಚಲ ಸಂಕಲ್ಪವನ್ನು ಅವರು ಪ್ರದರ್ಶಿಸಿದ್ದಾರೆ. ಅವರ ಶೌರ್ಯ ನೂರಾರು ಜೀವಗಳನ್ನು ಉಳಿಸಿ, ಭಾರೀ ದುರಂತವನ್ನು ತಪ್ಪಿಸಲು ನೆರವಾಗಿದೆ. ಭಾರತ ಅವರಿಗೆ ಹೆಮ್ಮೆಪಡುತ್ತದೆ. ಅವರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ" ಎಂದು ಹೇಳಿದ್ದಾರೆ.

ಬುಧವಾರ ದುಬೈಯಿಂದ ಟೆಲ್ ಅವೀವ್‌ಗೆ ತೆರಳುತ್ತಿದ್ದ ಫ್ಲೈದುಬೈಯ FZ1073 ವಿಮಾನದಲ್ಲಿ 27 ಮಕ್ಕಳು ಸೇರಿದಂತೆ ಒಟ್ಟು 174 ಪ್ರಯಾಣಿಕರಿದ್ದರು. ವಿಮಾನ ಹಾರಾಟದಲ್ಲಿದ್ದ ವೇಳೆ ಕಾಕ್‌ಪಿಟ್‌ನಲ್ಲಿ ಪೈಲಟ್ ಮತ್ತು ಸಹ ಪೈಲಟ್ ನಡುವೆ ತೀವ್ರ ಘರ್ಷಣೆ ನಡೆದಿದೆ ಎಂದು ವರದಿಯಾಗಿದೆ.

ಇಸ್ರೇಲಿ ಅಧಿಕಾರಿಗಳು ಹಾಗೂ ಪ್ರಯಾಣಿಕರ ಹೇಳಿಕೆಗಳ ಪ್ರಕಾರ, ಸಹ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರಿಗೆ ಚೂರಿಯಿಂದ ಇರಿದು, ವಿಮಾನದ ನಿಯಂತ್ರಣವನ್ನು ತನ್ನ ಕೈಗೆ ಪಡೆಯಲು ಯತ್ನಿಸಿದ್ದಾನೆ ಎನ್ನಲಾಗಿದೆ. ಬಳಿಕ ಬೋಯಿಂಗ್ 737 ವಿಮಾನ ತೀವ್ರವಾಗಿ ಕೆಳಮುಖವಾಗಿ ಇಳಿಯಲು ಆರಂಭಿಸಿದ್ದು, ಒಂದು ನಿಮಿಷಕ್ಕಿಂತ ಕಡಿಮೆ ಅವಧಿಯಲ್ಲಿ ಸುಮಾರು 14,000 ಅಡಿ ಎತ್ತರ ಕಳೆದುಕೊಂಡಿದೆ. ನಂತರ ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ.





ಗಾಯಗೊಂಡಿದ್ದರೂ ಮಚ್ಚರ್ ಕಾಕ್‌ಪಿಟ್ ಬಾಗಿಲು ತೆರೆದಿದ್ದು, ಪ್ರಯಾಣಿಕರು ಮತ್ತು ಸಿಬ್ಬಂದಿ ಒಳಗೆ ಪ್ರವೇಶಿಸಿ ಸಹ ಪೈಲಟ್‌ನನ್ನು ಹಿಡಿದು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸಾಧ್ಯವಾಯಿತು ಎಂದು ವರದಿಯಾಗಿದೆ.

ಪ್ರಯಾಣಿಕರಾಗಿ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಫ್ಲೈದುಬೈನ ಕರ್ತವ್ಯದಲ್ಲಿರದ ಇಬ್ಬರು ಪೈಲಟ್‌ಗಳು ಕೂಡ ವಿಮಾನದ ನಿಯಂತ್ರಣವನ್ನು ಮರಳಿ ಪಡೆಯಲು ನೆರವಾದರು ಎನ್ನಲಾಗಿದೆ.

ನಂತರ ವಿಮಾನವನ್ನು ಸೌದಿ ಅರೇಬಿಯಾದ ತಬೂಕ್‌ನಲ್ಲಿರುವ ಪ್ರಿನ್ಸ್ ಸುಲ್ತಾನ್ ಬಿನ್ ಅಬ್ದುಲಅಜೀಜ್ ವಿಮಾನ ನಿಲ್ದಾಣಕ್ಕೆ ತಿರುಗಿಸಲಾಗಿದ್ದು, ಅಲ್ಲಿ ಸುರಕ್ಷಿತವಾಗಿ ಇಳಿಸಲಾಯಿತು. ಪ್ರಯಾಣಿಕರು ಮತ್ತು ಸಿಬ್ಬಂದಿಯನ್ನು ಸುರಕ್ಷಿತವಾಗಿ ವಿಮಾನದಿಂದ ಹೊರಗೆ ಕರೆತರಲಾಯಿತು. ಬಳಿಕ ಪ್ರಯಾಣಿಕರು ಮತ್ತೊಂದು ವಿಮಾನದ ಮೂಲಕ ಇಸ್ರೇಲ್‌ಗೆ ತಮ್ಮ ಪ್ರಯಾಣ ಮುಂದುವರಿಸಿದರು.

**ಗುಣಮುಖವಾಗಲು ಪ್ರಾರ್ಥನೆ**

ಕ್ಯಾಪ್ಟನ್ ಸ್ಮಿತ್ ಮಚ್ಚರ್ ಒಬ್ಬ ಹೀರೋ. ಅತ್ಯಂತ ಅಪಾಯಕಾರಿ ಪರಿಸ್ಥಿತಿಯಲ್ಲೂ, ಗಂಭೀರವಾಗಿ ಗಾಯಗೊಂಡಿದ್ದರೂ ಅಪಾರ ಧೈರ್ಯ ಹಾಗೂ ಇತರರ ಜೀವ ರಕ್ಷಿಸುವ ಅಚಲ ಸಂಕಲ್ಪವನ್ನು ಅವರು ಪ್ರದರ್ಶಿಸಿದ್ದಾರೆ. ಅವರ ಶೌರ್ಯ ನೂರಾರು ಜೀವಗಳನ್ನು ಉಳಿಸಿ, ಭಾರೀ ದುರಂತವನ್ನು ತಪ್ಪಿಸಲು ನೆರವಾಗಿದೆ. ಭಾರತ ಅವರಿಗೆ ಹೆಮ್ಮೆಪಡುತ್ತದೆ. ಅವರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕೂಡ ಸ್ಮಿತ್ ಮಚ್ಚರ್ ಅವರನ್ನು 'ರಿಯಲ್ ಹೀರೋ' ಎಂದು ಬಣ್ಣಿಸಿದ್ದಾರೆ. ಭಾರತೀಯ ಪೈಲಟ್, ಪ್ರಯಾಣಿಕರು ಮತ್ತು ಸಿಬ್ಬಂದಿಯ ಧೈರ್ಯದಿಂದ ಭೀಕರ ವೈಮಾನಿಕ ದುರಂತವೊಂದು ತಪ್ಪಿದೆ ಎಂದು ಅವರು ಹೇಳಿದ್ದಾರೆ.

"ಅಸಾಧಾರಣ ಧೈರ್ಯ ಪ್ರದರ್ಶಿಸಿದ ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರಿಗೆ ನನ್ನ ವಂದನೆಗಳು. ಅವರು ಶೀಘ್ರ ಮತ್ತು ಸಂಪೂರ್ಣವಾಗಿ ಗುಣಮುಖರಾಗಲಿ" ಎಂದು ನೆತನ್ಯಾಹು ತಿಳಿಸಿದ್ದಾರೆ.

ದಾಳಿಕೋರನನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಮುಂದಾದ ಪ್ರಯಾಣಿಕರು ಮತ್ತು ಸಿಬ್ಬಂದಿಯ ಧೈರ್ಯ ಹಾಗೂ ಸಮಯಪ್ರಜ್ಞೆಯನ್ನೂ ಅವರು ಶ್ಲಾಘಿಸಿದ್ದಾರೆ.

ಸಹ ಪೈಲಟ್ ಒಮನ್ ದೇಶದ ಪ್ರಜೆಯಾಗಿದ್ದು, ಆತನನ್ನು ಸೌದಿ ಅಧಿಕಾರಿಗಳು ಬಂಧಿಸಿದ್ದಾರೆ ಎಂದು ಇಸ್ರೇಲಿ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಘಟನೆಗೆ ಕಾರಣವಾದ ಉದ್ದೇಶ ಇನ್ನೂ ಸ್ಪಷ್ಟವಾಗಿಲ್ಲ. ಈ ಬಗ್ಗೆ ತನಿಖೆ ನಡೆಯುತ್ತಿದ್ದು, ವಾಸ್ತವಾಂಶಗಳು ಸಂಪೂರ್ಣವಾಗಿ ಹೊರಬರುವ ಮುನ್ನ ಊಹಾಪೋಹಗಳಿಗೆ ಅವಕಾಶ ನೀಡಬಾರದು ಎಂದು ಫ್ಲೈದುಬೈ ಮನವಿ ಮಾಡಿದೆ.

## ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರದಲ್ಲಿ ಆಗಿದೆ ಏರಿಕೆ: ವಿಮಾನ ಇಂಧನ ದರದಲ್ಲೂ ಹೆಚ್ಚಳ

**ನವದೆಹಲಿ:** ಅಂತಾರಾಷ್ಟ್ರೀಯ ಮಾನದಂಡದ ಬೆಲೆಗಳಲ್ಲಿನ ಏರಿಕೆಗೆ ಅನುಗುಣವಾಗಿ ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳು (ಒಎಂಸಿ) ಇಂದಿನಿಂದ ಅನ್ವಯವಾಗುವಂತೆ ವಾಣಿಜ್ಯ ಬಳಕೆಯ ಎಲ್‌ಪಿಜಿ ದರವನ್ನು ಪ್ರತಿ 19 ಕೆಜಿ ಸಿಲಿಂಡರ್‌ಗೆ 62.50 ರೂ.ಗಳಷ್ಟು ಹೆಚ್ಚಿಸಿವೆ. ಹಾಗೇ ವಿಮಾನಯಾನ ಇಂಧನ (ಎಟಿಎಫ್) ದರವನ್ನು ಪ್ರತಿ ಲೀಟರ್‌ಗೆ 16 ರೂಪಾಯಿಗಳಷ್ಟು ಹೆಚ್ಚಿಸಲಾಗಿದೆ.

ಕಳೆದ ತಿಂಗಳು ಏರಿಕೆ ಕಂಡಿದ್ದ ವಾಣಿಜ್ಯ ಸಿಲಿಂಡರ್ ಬೆಲೆಯಲ್ಲಿ ಮತ್ತೆ ಏರಿಕೆಯಾಗಿದೆ. ಜಾಗತಿಕ ಇಂಧನ ಪೂರೈಕೆಯಲ್ಲಿನ ವ್ಯತ್ಯಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಏರಿಕೆ ಪರಿಣಾಮವಾಗಿ ಜೂನ್‌ನಲ್ಲಿ ವಾಣಿಜ್ಯ ಎಲ್‌ಪಿಜಿ ಬೆಲೆಗಳು ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದ್ದವು. ಇದಾದ ಬಳಿಕ ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಕ್ರಮವಾಗಿ 183.50 ರೂಪಾಯಿ ಮತ್ತು 192 ರೂಪಾಯಿಗಳಷ್ಟು ಬೆಲೆ ಇಳಿಕೆ ಮಾಡಲಾಗಿತ್ತು. ಸೆಪ್ಟೆಂಬರ್‌ನಲ್ಲಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಒಂದರ ಬೆಲೆಯನ್ನು 9.50 ರೂಪಾಯಿಗಳಷ್ಟು ಹೆಚ್ಚಿಸಲಾಗಿತ್ತು.

ಫೆಬ್ರವರಿ ಮತ್ತು ಜೂನ್ ನಡುವೆ ವಾಣಿಜ್ಯ ಎಲ್‌ಪಿಜಿ ದರಗಳು ಪ್ರತಿ 19 ಕೆಜಿ ಸಿಲಿಂಡರ್‌ಗೆ 1,740.50 ರೂ.ನಿಂದ 3,113.50 ರೂ.ಗೆ, ಅಂದರೆ ಈ ಅವಧಿಯಲ್ಲಿ ಒಟ್ಟಾರೆ 1,373 ರೂ.ಗಳಷ್ಟು ಏರಿಕೆ ಮಾಡಲಾಗಿತ್ತು.




ವಿಮಾನ ಇಂಧನ ದರ ಏರಿಕೆ: ತೈಲ ಕಂಪನಿಗಳ ಪ್ರಕಾರ, ದೇಶೀಯ ವಿಮಾನಯಾನ ಸಂಸ್ಥೆಗಳಿಗೆ ಎಟಿಎಫ್ ದರವನ್ನು ಪ್ರತಿ ಲೀಟರ್‌ಗೆ 121ರೂ.ನಿಂದ 137ರೂ.ಗೆ ಹೆಚ್ಚಿಸಲಾಗಿದೆ.

ಕಳೆದೆರಡು ತಿಂಗಳಿನಿಂದ ಎಟಿಎಫ್ ದರದಲ್ಲಿ ಏರಿಕೆ ಕಂಡಿದ್ದು, ಆಗಸ್ಟ್‌ನಲ್ಲಿ ಪ್ರತಿ ಲೀಟರ್‌ಗೆ 5 ರೂ ನಂತರ, ಸೆಪ್ಟೆಂಬರ್‌ನಲ್ಲಿ ಪ್ರತಿ ಲೀಟರ್‌ಗೆ 6.28 ರೂ ಹೆಚ್ಚಿಸಲಾಗಿತ್ತು. ಇದೀಗ ಮತ್ತೊಮ್ಮೆ ಪರಿಷ್ಕರಣೆ ಮಾಡಲಾಗಿದೆ. ವಿಮಾನಯಾನ ಸಂಸ್ಥೆಗಳ ಕಾರ್ಯಾಚರಣಾ ವೆಚ್ಚದಲ್ಲಿ ಎಟಿಎಫ್ ಪಾಲು ಶೇ 40 ರಷ್ಟರವರೆಗೂ ಇರುತ್ತದೆ. ಹೀಗಾಗಿ ಇಂಧನ ದರಗಳು ವಿಮಾನಯಾನ ಸಂಸ್ಥೆಗಳಿಗೆ ವೆಚ್ಚದ ಪ್ರಮುಖ ಅಂಶವಾಗಿವೆ.

ಇತ್ತೀಚಿನ ಬದಲಾವಣೆಗಳು ಅಂತಾರಾಷ್ಟ್ರೀಯ ಮಾನದಂಡದ ಬೆಲೆಗಳು ಮತ್ತು ರೂಪಾಯಿ ಡಾಲರ್ ವಿನಿಮಯ ದರದ ಏರಿಳಿತಗಳನ್ನು ಆಧರಿಸಿವೆ. ಎಟಿಎಫ್ ಮತ್ತು ಎಲ್‌ಪಿಜಿ ಬೆಲೆಗಳನ್ನು ಪ್ರತಿ ತಿಂಗಳ ಮೊದಲ ದಿನದಂದು ಪರಿಷ್ಕರಿಸಲಾಗುತ್ತದೆ. ವ್ಯಾಟ್ ನಂತಹ ಸ್ಥಳೀಯ ತೆರಿಗೆಗಳ ಕಾರಣದಿಂದಾಗಿ ಈ ಬೆಲೆಗಳು ವಿವಿಧ ರಾಜ್ಯಗಳಲ್ಲಿ ಭಿನ್ನವಾಗಿರಬಹುದು. ಗೃಹ ಬಳಕೆಯ ಎಲ್‌ಪಿಜಿ ದರಗಳಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ. ಪ್ರತಿ 14.2 ಕೆಜಿ ಸಿಲಿಂಡರ್‌ಗೆ ದರ 942 ರೂಪಾಯಿಯಲ್ಲೇ ಮುಂದುವರಿದಿದೆ. ಪಶ್ಚಿಮ ಏಷ್ಯಾದ ಬಿಕ್ಕಟ್ಟಿನಿಂದಾಗಿ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಂಧನ ಬೆಲೆಗಳು ಏರಿಕೆಯಾದ ಪರಿಣಾಮವಾಗಿ, ಮಾರ್ಚ್ ಮತ್ತು ಜೂನ್ ನಡುವಿನ ಅವಧಿಯಲ್ಲಿ ಗೃಹಬಳಕೆಯ ಅಡುಗೆ ಅನಿಲದ ದರವನ್ನು ಪ್ರತಿ ಸಿಲಿಂಡರ್‌ಗೆ 89 ರೂಗಳಷ್ಟು ಹೆಚ್ಚಿಸಲಾಗಿತ್ತು.

ಮೇ ತಿಂಗಳಲ್ಲಿ ಪ್ರತಿ ಲೀಟರ್‌ಗೆ ಸುಮಾರು 7.50 ರೂಪಾಯಿಯಷ್ಟು ಏರಿಕೆ ಕಂಡಿದ್ದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಲ್ಲೂ ಯಾವುದೇ ಬದಲಾವಣೆಯಾಗಿಲ್ಲ.

## ಚುನಾವಣಾ ಆಯೋಗದ ವಿರುದ್ಧ ಹೈಕೋರ್ಟ್ ಕೆಂಡ!

**ಮುಂಬೈ:** ಶಾಸನಬದ್ಧ ಕಾರ್ಯವಿಧಾನ ಅನುಸರಿಸದೆ ಕೇವಲ ವಿಶೇಷ ತೀವ್ರ ಪರಿಷ್ಕರಣೆ ಕರಡು ಪಟ್ಟಿಯ ಆಧಾರದ ಮೇಲೆ ಮತದಾರರ ಪಟ್ಟಿಯಿಂದ ಹೆಸರುಗಳನ್ನು ಕೈಬಿಡುವ ಕ್ರಮದ ವಿರುದ್ಧ ಬಾಂಬೆ ಹೈಕೋರ್ಟ್‌ನ ಗೋವಾ ಪೀಠ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಮತದಾರರ ಅರ್ಜಿಗಳನ್ನು ತಿರಸ್ಕರಿಸಲು ಚುನಾವಣಾ ಸಾಫ್ಟ್‌ವೇರ್ ಅನ್ನು ಅವಲಂಬಿಸಿರುವ ಚುನಾವಣಾ ಆಯೋಗದ ಕ್ರಮದ ಬಗ್ಗೆಯೂ ನ್ಯಾಯಾಲಯ ಪ್ರಶ್ನೆಗಳನ್ನು ಎತ್ತಿದೆ.

ನ್ಯಾಯಮೂರ್ತಿಗಳಾದ ಅಮಿತ್ ಎಸ್. ಜಾಮ್ಸಂದೇಕರ್ ಮತ್ತು ವಾಲ್ಮೀಕಿ ಮೆನೆಜಸ್ ಅವರ ವಿಭಾಗೀಯ ಪೀಠವು, ಸಾಫ್ಟ್‌ವೇರ್ ವ್ಯವಸ್ಥೆ ಅಧಿಕಾರಿಗಳಿಗೆ ಅರ್ಜಿಯನ್ನು ತಿರಸ್ಕರಿಸುವುದನ್ನು ಹೊರತುಪಡಿಸಿ ಬೇರೆ ಆಯ್ಕೆ ನೀಡಲಿಲ್ಲ ಎಂಬ ಚುನಾವಣಾ ಆಯೋಗದ ಹೇಳಿಕೆಗೆ "ತೀವ್ರ ಕಳವಳಗೊಂಡಿದ್ದೇವೆ" ಎಂದು ಹೇಳಿದೆ.

ಸಾಂತಾ ಕ್ರೂಜ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಹೊಸ ಮನೆಗೆ ಸ್ಥಳಾಂತರಗೊಂಡ ಬಳಿಕ ಮತದಾರರ ಪಟ್ಟಿಯಿಂದ ತಮ್ಮ ಹೆಸರುಗಳನ್ನು ಅಳಿಸಲಾಗಿದೆ ಎಂದು ಆರೋಪಿಸಿ, ಒಂದೇ ಕುಟುಂಬದ ಆರು ಮಂದಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ನಡೆಸಿತು. ಅರ್ಜಿದಾರರಾದ ಪರೇಶ್ ಸಾಲ್ಗಾಂವ್ಕರ್ ನೇತೃತ್ವದ ಕುಟುಂಬ, ವಿಳಾಸ ಬದಲಾವಣೆಗಾಗಿ ಬೂತ್ ಮಟ್ಟದ ಅಧಿಕಾರಿಯ ಸೂಚನೆಯಂತೆ ನಮೂನೆ 8 ಸಲ್ಲಿಸಿದ್ದಾಗಿ ತಿಳಿಸಿತು. ಆದರೆ, ಅರ್ಜಿಗಳನ್ನು ಪರಿಶೀಲಿಸುವ ವೇಳೆ ಅವರ ಮತದಾರರ ಗುರುತಿನ ಚೀಟಿ (ಇಪಿಐಸಿ) ವಿವರಗಳು ಚುನಾವಣಾ ನೋಂದಣಿ ಅಧಿಕಾರಿಗಳ ಜಾಲ (ಇರೋನೆಟ್) ವ್ಯವಸ್ಥೆಯಲ್ಲಿ ಲಭ್ಯವಿಲ್ಲ ಎಂದು ಅಧಿಕಾರಿಗಳು ಕಂಡುಕೊಂಡಿದ್ದರು.

ಇರೋನೆಟ್ ಎಂದರೆ ಚುನಾವಣಾ ನೋಂದಣಿ ಅಧಿಕಾರಿಗಳ ಜಾಲ. ಇದು ಚುನಾವಣಾ ಆಯೋಗದ ಅಂತರ್ಜಾಲ ಆಧಾರಿತ ವ್ಯವಸ್ಥೆಯಾಗಿದ್ದು, ಮತದಾರರ ಅರ್ಜಿಗಳ ಪ್ರಕ್ರಿಯೆ ಮತ್ತು ಮತದಾರರ ಪಟ್ಟಿಗಳ ನಿರ್ವಹಣೆಗೆ ಬಳಸಲಾಗುತ್ತದೆ.

ವ್ಯವಸ್ಥೆಯಲ್ಲಿ ಇಪಿಐಸಿ ದಾಖಲೆ ಕಾಣಿಸದ ಕಾರಣ ಅಧಿಕಾರಿಗಳಿಗೆ "ತಿರಸ್ಕರಿಸಿ" ಎಂಬ ಆಯ್ಕೆಯನ್ನು ಮಾತ್ರ ಬಳಸಲು ಸಾಧ್ಯವಾಗಿತ್ತು ಎಂದು ಅರ್ಜಿದಾರರು ತಿಳಿಸಿದರು. ಬಳಿಕ ತಮ್ಮ ಇಪಿಐಸಿ ವಿವರಗಳನ್ನು ಮತದಾರರ ಪಟ್ಟಿಯಿಂದ ಅಳಿಸಲಾಗಿದೆ ಮತ್ತು ನಮೂನೆ 8ರ ಅರ್ಜಿಯನ್ನು ಪ್ರಕ್ರಿಯೆಗೊಳಿಸಲು ಸಾಧ್ಯವಿಲ್ಲ ಎಂದು ಕುಟುಂಬಕ್ಕೆ ತಿಳಿಸಲಾಯಿತು. ನಂತರ ಕುಟುಂಬದ ಸದಸ್ಯರಿಗೆ ನಮೂನೆ 6 ಸಲ್ಲಿಸುವಂತೆ ಸೂಚಿಸಲಾಯಿತು. ನಮೂನೆ 6 ಹೊಸದಾಗಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಲು ಬಳಸಲಾಗುತ್ತದೆ. ಆದರೆ, ತಾವು ಈಗಾಗಲೇ ಮತದಾರರಾಗಿದ್ದು, ಅದೇ ಕ್ಷೇತ್ರದೊಳಗೆ ಕೇವಲ ವಿಳಾಸ ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ್ದೇವೆ. ಹೀಗಾಗಿ ನಮೂನೆ 6 ಸಲ್ಲಿಸುವಂತೆ ಸೂಚಿಸಿರುವುದು ಸೂಕ್ತವಲ್ಲ ಎಂದು ಅರ್ಜಿದಾರರು ವಾದಿಸಿದರು.

## ದೇಶದಲ್ಲೇ ಮೊದಲ ಬಾರಿಗೆ 3D ಕಾಂಕ್ರಿಟ್ ಪ್ರಿಂಟಿಂಗ್ ತಂತ್ರಜ್ಞಾನ!

**ಅಮರಾವತಿ:** ನಿರ್ಮಾಣ ಕ್ಷೇತ್ರದಲ್ಲಿನ ಅಭಿವೃದ್ಧಿಗೆ ಒತ್ತು ನೀಡಲು ಮುಂದಾಗಿರುವ ಆಂಧ್ರಪ್ರದೇಶ ಸರ್ಕಾರ ದೇಶ ದಲ್ಲೇ ಮೊದಲ ಬಾರಿಗೆ ಮನೆ ನಿರ್ಮಾಣದಲ್ಲಿ 3D ಕಾಂಕ್ರಿಟ್ ಪ್ರಿಂಟಿಂಗ್ ತಂತ್ರಜ್ಞಾನವನ್ನು ಪರಿಚಯಿಸುತ್ತಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆ ಗ್ರಾಮೀಣ 2.0ರ ಅಡಿ ಕೇಂದ್ರ ಕಟ್ಟಡ ಸಂಶೋಧನಾ ಸಂಸ್ಥೆಯು ಗುಂಟೂರು ಜಿಲ್ಲೆಯ ತೆನಾಲಿ ಕ್ಷೇತ್ರದ ಬುರಿಪಾಲೆಮ್‌ನಲ್ಲಿ ಪ್ರಾಯೋಗಿಕವಾಗಿ ಈ ವಿಧಾನವನ್ನು ಬಳಸಿ 100 ಮನೆಗಳನ್ನು ನಿರ್ಮಿಸಲಿದೆ. ಈ ಸಂಬಂಧ ಅಕ್ಟೋಬರ್ 4 ರಂದು ಮುಖ್ಯಮಂತ್ರಿ ಚಂದ್ರಬಾಬು ಅವರ ಸಮ್ಮುಖದಲ್ಲಿ ರಾಜ್ಯ ವಸತಿ ಇಲಾಖೆ, ಕೇಂದ್ರ ಸರ್ಕಾರ ಮತ್ತು ಸಿಬಿಆರ್‌ಐ ನಡುವೆ ಒಪ್ಪಂದಕ್ಕೆ ಸಹಿ ಹಾಕಲಿದೆ.




**325 ಚದರ ಅಡಿಯಲ್ಲಿ ಮನೆ ನಿರ್ಮಾಣ:** ಇತರ ದೇಶಗಳು ಮತ್ತು ಖಾಸಗಿ ವಲಯದಲ್ಲಿ ಈ ವಿಧಾನವು ಅಸ್ತಿತ್ವದಲ್ಲಿದ್ದರೂ, ದೇಶದ ಪರಿಸ್ಥಿತಿಗೆ ಅನುಗುಣವಾಗಿ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಲು ಸಿಬಿಆರ್‌ಐ ಮನೆ ನಿರ್ಮಾಣದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದೆ. ಇದಕ್ಕಾಗಿ ವಿಶೇಷ ನಿರ್ಮಾಣ ವಿನ್ಯಾಸವನ್ನೂ ರೂಪಿಸಲಾಗಿದೆ.

ಕೇಂದ್ರ ಸರ್ಕಾರದ ನಿಯಮಗಳ ಪ್ರಕಾರ, ಪ್ರತಿಯೊಂದು ಮನೆಯನ್ನು 325 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಿಸಲಾಗುವುದು.

ಪಿಎಂಎವೈ – ಗ್ರಾಮೀಣ 2.0 ಅಡಿಯಲ್ಲಿ, ಮನೆ ನಿರ್ಮಾಣಕ್ಕೆ ಪ್ರಸ್ತುತ ನೀಡಲಾಗುವ ಆರ್ಥಿಕ ನೆರವಿನ ಜೊತೆಗೆ, 3ಆ ಕಾಂಕ್ರೀಟ್ ಪ್ರಿಂಟಿಂಗ್ ವಿಧಾನವನ್ನು ಬಳಸಿಕೊಂಡು ನಿರ್ಮಿಸುವ ಮನೆಗಳಿಗೆ ಹೆಚ್ಚುವರಿ ಆರ್ಥಿಕ ನೆರವನ್ನು ನೀಡಲಾಗುವುದು. ಹೊಸ ತಂತ್ರಜ್ಞಾನವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಹೆಚ್ಚುವರಿ ವೆಚ್ಚವನ್ನು ಭರಿಸಲಿವೆ.

## ರಷ್ಯಾ, ಇರಾನ್ ನಿರ್ಬಂಧ ಕಾನೂನು ಜಾರಿ ನಂತರ ಮೋದಿ–ಟ್ರಂಪ್ ಮಹತ್ವದ ಮಾತುಕತೆ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದರು. ದ್ವಿಪಕ್ಷೀಯ ಸಂಬಂಧಗಳಲ್ಲಿನ ಪ್ರಗತಿಯನ್ನು ಮೌಲ್ಯ ಮಾಪನ ಮಾಡುವ ಸಲುವಾಗಿ ಈ ಮಾತುಕತೆ ನಡೆದಿದೆ.

ಈ ಸಂದರ್ಭದಲ್ಲಿ ವ್ಯಾಪಾರ, ರಕ್ಷಣೆ ಮತ್ತು ಇಂಧನ ಸೇರಿದಂತೆ ಪರಸ್ಪರ ಆಸಕ್ತಿ ಮತ್ತು ಕಾರ್ಯತಂತ್ರದ ಸಹಕಾರದ ಪ್ರಮುಖ ಕ್ಷೇತ್ರಗಳ ಕುರಿತು ಉಭಯ ನಾಯಕರು ಸಮಾಲೋಚನೆ ನಡೆಸಿದರು. ಭಾರತ ಮತ್ತು ಚೀನಾ ಸೇರಿದಂತೆ ರಷ್ಯಾದ ತೈಲ ಮತ್ತು ಅನಿಲವನ್ನು ಖರೀದಿಸುವ ರಾಷ್ಟ್ರಗಳ ಮೇಲೆ ಶೇಕಡಾ 100 ರಷ್ಟು ಸುಂಕವನ್ನು ವಿಧಿಸುವ 'ಲಿಂಡ್ಸೆ ಒ. ಗ್ರಹಾಂ – ರಷ್ಯಾ ಮತ್ತು ಇರಾನ್ 2026 ರ ನಿರ್ಬಂಧ ಕಾಯ್ದೆ' ಜಾರಿಗೆ ಬಂದ ನಂತರ ಭಾರತ ಅಮೆರಿಕ ನಡುವೆ ವ್ಯಾಪಾರ ಸಂಘರ್ಷ ಮತ್ತಷ್ಟು ತಾರಕಕ್ಕೇರಿರುವ ಬೆನ್ನಲ್ಲೇ ಈ ಮಾತುಕತೆ ನಡೆದಿರುವುದು ಕುತೂಹಲಕ್ಕೆ ಕಾರಣವಾಗಿದೆ. ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಸೆಪ್ಟೆಂಬರ್ 23 ರಿಂದ 25 ರವರೆಗೆ ಅಮೆರಿಕ ಪ್ರವಾಸ ಕೈಗೊಂಡಿದ್ದರು. ಈ ವೇಳೆ ಟ್ರಂಪ್ ಅವರೊಂದಿಗೆ ಕ್ಸಿ ದ್ವಿಪಕ್ಷೀಯ ಮಾತುಕತೆ ನಡೆಸಿದ್ದರು. ಈ ಭೇಟಿ ಬಳಿಕ ಭಾರತದ ಪ್ರಧಾನಿ ಅಮೆರಿಕ ಅಧ್ಯಕ್ಷರೊಂದಿಗೆ ದೂರವಾಣಿ ಕರೆ ಮೂಲಕ ದ್ವಿಪಕ್ಷೀಯ ಮಾತುಕತೆ ನಡೆಸಿರುವುದು ಭಾರಿ ಮಹತ್ವ ಪಡೆದುಕೊಂಡಿದೆ.



### ಖಾಲಿ ಇರೋ 2 ಸಚಿವ ಸ್ಥಾನ ಭರ್ತಿಗೆ ಪಟ್ಟು..!– ದೆಹಲಿಯಲ್ಲಿ ವೇಣುಗೋಪಾಲ್ ಭೇಟಿಯಾದ ಮಾಜಿ ಸಿಎಂ ಸಿದ್ದರಾಮಯ್ಯ

# ಕಾಂಗ್ರೆಸ್‌ನಲ್ಲಿ ಸಚಿವ ಸಂಪುಟ ವಿಸ್ತರಣೆಯ ಕಸರತ್ತು ಮತ್ತೊಮ್ಮೆ ಮುಂಚೂಣಿಗೆ

**ನವದೆಹಲಿ:** ಕಾಂಗ್ರೆಸ್‌ನಲ್ಲಿ ಸಚಿವ ಸಂಪುಟ ವಿಸ್ತರಣೆಯ ಕಸರತ್ತು ಮತ್ತೊಮ್ಮೆ ಮುಂಚೂಣಿಗೆ ಬಂದಿದೆ. ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ದರಾಮಯ್ಯ ಅವರು ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿಯಾಗಿ ಮಹತ್ವದ ಚರ್ಚೆ ನಡೆಸಿದ್ದಾರೆ.

ವೇಣುಗೋಪಾಲ್ ಅವರ ನಿವಾಸದಲ್ಲಿ ನಡೆದ ಉಪಾಹಾರ ಸಭೆಯಲ್ಲಿ, ರಾಜ್ಯ ಸಚಿವ ಸಂಪುಟದಲ್ಲಿ ಖಾಲಿ ಇರುವ ಎರಡು ಸ್ಥಾನಗಳನ್ನು ತಕ್ಷಣವೇ ಭರ್ತಿ ಮಾಡುವಂತೆ ಸಿದ್ದರಾಮಯ್ಯ ಅವರು ಒತ್ತಡ ಹೇರಿದ್ದಾರೆಂದು ಮೂಲಗಳು ತಿಳಿಸಿವೆ. ತಮ್ಮ ಆಪ್ತ ಹಾಗೂ ಬಾದಾಮಿ ಶಾಸಕ ಬಸವರಾಜ ಶಿವಣ್ಣನವರ್ ಅವರನ್ನು ಸಚಿವ ಸಂಪುಟಕ್ಕೆ ಸೇರ್ಪಡೆಗೊಳಿಸುವಂತೆ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ ಎನ್ನಲಾಗಿದೆ.

ಕುರುಬ ಸಮುದಾಯದ ನಾಯಕರಾಗಿರುವ ಶಿವಣ್ಣನವರ್ ಅವರನ್ನು ಸಚಿವರನ್ನಾಗಿ ಮಾಡುವಂತೆ ಸಿದ್ದರಾಮಯ್ಯ ಈ ಹಿಂದೆ ಹೈಕಮಾಂಡ್‌ಗೆ ಶಿಫಾರಸು ಮಾಡಿದ್ದರು. ಆದರೆ, ಅವರ ಶಿಫಾರಸನ್ನು ಹೈಕಮಾಂಡ್ ಒಪ್ಪದೆ, ಇದೇ ಸಮುದಾಯದ ಚಿಕ್ಕಮಗಳೂರು ವಿಧಾನ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡ ಅವರನ್ನು ಸಚಿವರನ್ನಾಗಿ ಮಾಡಲು ಮುಂದಾಗಿತ್ತು. ಆದರೆ, ಕೊನೆಯ ಕ್ಷಣದಲ್ಲಿ ಅವರ ಸೇರ್ಪಡೆ ಕೈಬಿಡಲಾಗಿತ್ತು.

ಮೂಲಗಳ ಪ್ರಕಾರ, ಶಿವಣ್ಣನವರ್ ಅವರ ಹೆಸರನ್ನು ಹೈಕಮಾಂಡ್ ಈಗಾಗಲೇ ಅಂತಿಮಗೊಳಿಸಿದೆ ಎನ್ನಲಾಗಿದ್ದು, ಮಹಿಳಾ ಕೋಟಾದಡಿ ಯಾರನ್ನು ಸಚಿವರನ್ನಾಗಿ ಮಾಡಬೇಕು ಎಂಬುದರ ಬಗ್ಗೆ ಇನ್ನೂ ಸ್ಪಷ್ಟತೆ ಮೂಡಿಲ್ಲ. ಬಳ್ಳಾರಿ ಸಂಸದ ಈ. ತುಕಾರಾಂ ಅವರ ಪತ್ನಿ, ಪರಿಶಿಷ್ಟ ಪಂಗಡದ ನಾಯಕಿ ಹಾಗೂ ಮೊದಲ ಬಾರಿಗೆ ಶಾಸಕರಾಗಿರುವ ಅನ್ನಪೂರ್ಣ ಮತ್ತು ಮಾಜಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಹೆಸರುಗಳು ಚರ್ಚೆಯಲ್ಲಿವೆ. ಈ ಹಿಂದೆ ಪರಿಶಿಷ್ಟ ಪಂಗಡದ ನಾಯಕರಾಗಿದ್ದ ಬಿ. ನಾಗೇಂದ್ರ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ತೆರವಾಗಿರುವ ಸ್ಥಾನವೂ ಇದೀಗ ಸಚಿವರ ಆಯ್ಕೆಗೆ ಮತ್ತೊಂದು ಆಯಾಮ ನೀಡಿದೆ.



1.ವೇಣುಗೋಪಾ ಭೇಟಿಯಾಗಿ ಮಹತ್ವದ ಚರ್ಚೆ
2.ವೇಣುಗೋಪಾಲ್ ನಿವಾಸದಲ್ಲಿ ಉಪಾಹಾರ ಸಭೆ
3. ಖಾಲಿ ಇರುವ ಎರಡು ಸ್ಥಾನ ಭರ್ತಿಗೆ ಒತ್ತಡ

**ಬಹುತೇಕ ಶಿವಣ್ಣನವರ ಫಿಕ್ಸ್**

ಮೂಲಗಳ ಪ್ರಕಾರ, ಶಿವಣ್ಣನವರ್ ಅವರ ಹೆಸರನ್ನು ಹೈಕಮಾಂಡ್ ಈಗಾಗಲೇ ಅಂತಿಮಗೊಳಿಸಿದೆ ಎನ್ನಲಾಗಿದ್ದು, ಮಹಿಳಾ ಕೋಟಾದಡಿ ಯಾರನ್ನು ಸಚಿವರನ್ನಾಗಿ ಮಾಡಬೇಕು ಎಂಬುದರ ಬಗ್ಗೆ ಇನ್ನೂ ಸ್ಪಷ್ಟತೆ ಮೂಡಿಲ್ಲ.

ಸಿದ್ದರಾಮಯ್ಯ ಅವರು ನಿಗಮ–ಮಂಡಳಿಗಳ ನೇಮಕಾತಿ ಬಗ್ಗೆಯೂ ವೇಣುಗೋಪಾಲ್ ಅವರೊಂದಿಗೆ ಚರ್ಚಿಸಿದ್ದಾರೆ ಎನ್ನಲಾಗಿದೆ. ತಮ್ಮ ಅಭಿಪ್ರಾಯಗಳನ್ನು ಪರಿಗಣಿಸುವುದಾಗಿ ವೇಣುಗೋಪಾಲ್ ಭರವಸೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರು ಶೀಘ್ರದಲ್ಲೇ ಬೆಂಗಳೂರಿಗೆ ಭೇಟಿ ನೀಡುವ ನಿರೀಕ್ಷೆಯಿದ್ದು, ನಿಗಮ–ಮಂಡಳಿಗಳ ನೇಮಕಾತಿ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ ಎನ್ನಲಾಗಿದೆ. ಸಚಿವ ಸಂಪುಟದ ಎರಡು ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು ಹಾಗೂ ನಿಗಮ–ಮಂಡಳಿಗಳಿಗೆ ನೇಮಕಾತಿ ಮಾಡುವುದು ಹೈಕಮಾಂಡ್‌ನ ತಕ್ಷಣದ ಆದ್ಯತೆಗಳಾಗಿವೆ ಎಂದು ಮೂಲಗಳು ತಿಳಿಸಿವೆ. ಆದರೆ, ಐವರು ವಿಧಾನ ಪರಿಷತ್ ಸದಸ್ಯರ ನಾಮನಿರ್ದೇಶನವನ್ನು ನವೆಂಬರ್‌ವರೆಗೆ ಮುಂದೂಡುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

## ಮಿನಿ ನ್ಯೂಸ್

### ನೈರುತ್ಯ ಮುಂಗಾರು ಅಂತ್ಯ, ಶೇ 13ರಷ್ಟು ಮಳೆ ಕೊರತೆ

**ನವದೆಹಲಿ:** ನೈಋತ್ಯ ಮುಂಗಾರು ಹಂಗಾಮು ಅಧಿಕೃತವಾಗಿ ಕೊನೆಗೊಂಡಿದೆ, ಜೂನ್‌ನಿಂದ ಸೆಪ್ಟೆಂಬರ್ ವರೆಗಿನ ನಾಲ್ಕು ತಿಂಗಳ ಅವಧಿಯಲ್ಲಿ ಭಾರತದಲ್ಲಿ ವಾಡಿಕೆಗಿಂತ ಸುಮಾರು ಶೇ. 13 ರಷ್ಟು ಕಡಿಮೆ ಮಳೆಯಾಗಿದೆ. ಅಂಕಿ – ಅಂಶಗಳ ಪ್ರಕಾರ, ಇದು 2026ರ ಹಂಗಾಮನ್ನು ಅಲ್ಪ ಬರದ ವರ್ಗಕ್ಕೆ ಸೇರಿಸಿದೆ. ಇಂದಿನಿಂದ ಭಾರತೀಯ ಹವಾಮಾನ ಇಲಾಖೆಯು ಈಶಾನ್ಯ ಮುಂಗಾರಿನತ್ತ ತನ್ನ ಗಮನಹರಿಸಲಿದೆ. ಈಶಾನ್ಯ ಮುಂಗಾರು ಅಕ್ಟೋಬರ್‌ನಿಂದ ಡಿಸೆಂಬರ್ ಅವಧಿಯಲ್ಲಿ ದಕ್ಷಿಣ ಭಾರತದ ಕೆಲವು ಭಾಗಗಳಿಗೆ ಮಳೆಯನ್ನು ತರಲಿದೆ. ಈ ಹಂಗಾಮಿನಲ್ಲಿ ಮಳೆಯ ಹಂಚಿಕೆ ಏಕರೂಪವಾಗಿರಲಿಲ್ಲ. ಜೂನ್ ತಿಂಗಳಲ್ಲಿ ಮಳೆ ಸಾಮಾನ್ಯ ಪ್ರಮಾಣದ ಸುಮಾರು 65ರಷ್ಟು ಮಾತ್ರವಿದ್ದು, ಆರಂಭವು ಮಂದವಾಗಿತ್ತು. ಜುಲೈನಲ್ಲಿ ಮಳೆಯ ಪ್ರಮಾಣವು ಚೇತರಿಕೆ ಕಂಡು 101ರಷ್ಟು ತಲುಪಿತಾದರೂ, ಆಗಸ್ಟ್‌ನಲ್ಲಿ ಅದು ಸುಮಾರು 84% ಕ್ಕೆ ಕುಸಿಯಿತು. ಬಂಗಾಳ ಕೊಲ್ಲಿಯಲ್ಲಿ ಉಂಟಾದ ಹವಾಮಾನ ವ್ಯವಸ್ಥೆಗಳ ನೆರವಿನಿಂದ ಸೆಪ್ಟೆಂಬರ್‌ನಲ್ಲಿ ಪರಿಸ್ಥಿತಿ ಸ್ವಲ್ಪ ಸುಧಾರಿಸಿತು. ಭೌಗೋಳಿಕ ಸ್ಥಾನವೂ ಮುಖ್ಯ; ದಕ್ಷಿಣ ಭಾರತದಲ್ಲಿ ವಾಡಿಕೆಗಿಂತ ಸುಮಾರು 24ರಷ್ಟು ಮತ್ತು ಈಶಾನ್ಯ ಭಾಗದಲ್ಲಿ ಸುಮಾರು 26 ರಷ್ಟು ಕಡಿಮೆ ಮಳೆಯಾಗಿದ್ದು, ಈ ಪ್ರದೇಶಗಳು ಅತಿ ಹೆಚ್ಚು ಬಾಧಿತವಾಗಿವೆ. ಬಿಹಾರ, ಪಶ್ಚಿಮ ರಾಜಸ್ಥಾನ ಮತ್ತು ಸೌರಾಷ್ಟ್ರ– ಕಚ್ ಪ್ರದೇಶಗಳಲ್ಲೂ ಮಳೆ ಕೊರತೆ ಕಂಡುಬಂದಿದೆ.

### ಭುಗಿಲೆದ್ದ ಹಿಂಸಾಚಾರ: 200 ಮಂದಿ ವಿರುದ್ಧ ಪ್ರಕರಣ

**ತಿರುವನಂತಪುರಂ:** ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ತಿರುವನಂತಪುರಂನಲ್ಲಿ ಯುವ ಕಾಂಗ್ರೆಸ್ ಆಯೋಜಿಸಿದ್ದ ಮೆರವಣಿಗೆ ತೀವ್ರ ಘರ್ಷಣೆಗೆ ತಿರುಗಿದೆ. ಪ್ರತಿಭಟನಾನಿರತರು ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ ಕಾರ್ಯಕರ್ತರೊಂದಿಗೆ ಹಿಂಸಾತ್ಮಕ ಸಂಘರ್ಷ ನಡೆದಿದ್ದು, ಇದಾದ ಬಳಿಕ 200ಕ್ಕೂ ಹೆಚ್ಚು ವ್ಯಕ್ತಿಗಳ ವಿರುದ್ಧ ಮ್ಯೂಸಿಯಂ ಪೊಲೀಸರು ಜಾಮೀನು ರಹಿತ ಪ್ರಕರಣಗಳನ್ನು ದಾಖಲಿಸಿದ್ದಾರೆ. ಈ ಸಂಘರ್ಷ ಮತ್ತು ನಂತರದ ಪೊಲೀಸ್ ಕ್ರಮವನ್ನು ವಿರೋಧಿಸಿ, ಎಸ್‌ಎಫ್‌ಐ ರಾಜ್ಯವ್ಯಾಪಿ ಶಿಕ್ಷಣ ಬಂದ್‌ಗೆ ಕರೆ ನೀಡಿದೆ.

**ಸಿಇಸಿ ವಿರುದ್ಧ ಪ್ರತಿಭಟನೆ**

ಬುಧವಾರ ರಾತ್ರಿ ಸುಮಾರು 8 ಗಂಟೆಗೆ ಪ್ರತಿಭಟನಾನಿರತ ಯೂತ್ ಕಾಂಗ್ರೆಸ್ ಮತ್ತು ಕೇರಳ ಸ್ಟೂಡೆಂಟ್ಸ್ ಯೂನಿಯನ್ ಕಾರ್ಯಕರ್ತರು ಪಾಲಯಂನಲ್ಲಿರುವ ವಿಶ್ವವಿದ್ಯಾಲಯದ ಹಾಸ್ಟೆಲ್ ಬಳಿ ಜಮಾಯಿಸಿ, ಜ್ಞಾನೇಶ್ ಕುಮಾರ್ ಅವರ ಪ್ರತಿಕೃತಿ ದಹಿಸಿದರು. ರಸ್ತೆಯ ಅಡ್ಡಲಾಗಿ ಟೈರ್‌ಗಳಿಗೆ ಬೆಂಕಿ ಹಚ್ಚಿ ಪ್ರತಿಭಟನೆ ನಡೆಸಿದರು. ಈ ವೇಳೆ, ವಿಶ್ವವಿದ್ಯಾಲಯದ ಹಾಸ್ಟೆಲ್‌ನ ಒಳಗಿನಿಂದ ತಮ್ಮತ್ತ ಬಿಯರ್ ಬಾಟಲಿಗಳು ಮತ್ತು ಕಲ್ಲುಗಳನ್ನು ಎಸೆಯಲಾಗಿದೆ ಎಂದು ಯೂತ್ ಕಾಂಗ್ರೆಸ್ ಕಾರ್ಯಕರ್ತರು ಆರೋಪಿಸಿದರು. ಇದರಿಂದ ಆಕ್ರೋಶಗೊಂಡ ಪ್ರತಿಭಟನಾಕಾರರು, ಉರಿಯುತ್ತಿದ್ದ ಪ್ರತಿಕೃತಿ ಮತ್ತು ಮರದ ತುಂಡುಗಳನ್ನು ಹಾಸ್ಟೆಲ್ ಆವರಣದೊಳಗೆ ಎಸೆದರು.

### ಕೈಗೊಂಡ ನಿರ್ಧಾರ ಪರಾಮರ್ಶಿಸಿದ ಚುನಾವಣಾ ಆಯೋಗ

**ನವದೆಹಲಿ:** ಚುನಾವಣಾ ಆಯೋಗವು ಕಳೆದ ವಾರ ಕೈಗೊಂಡ ಹಲವಾರು ನಿರ್ಧಾರಗಳನ್ನು ಪರಾಮರ್ಶಿಸಿತು ಎಂದು ತಿಳಿದುಬಂದಿದ್ದು, ಇವುಗಳಲ್ಲಿ ಹೆಚ್ಚಿನವು ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಗೆ ಸಂಬಂಧಿಸಿವೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹಾಗೂ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು ಪರಿಶೀಲನಾ ಸಭೆಗಾಗಿ ಭೇಟಿಯಾದರು ಎಂದು ಮೂಲಗಳು ತಿಳಿಸಿವೆ. SIR ನಮೂನೆಗಳ ವ್ಯತ್ಯಾಸದ ಹಿನ್ನೆಲೆ ವಿಚಾರಣೆಗೆ ಹಾಜರಾಗುವ ಅವಶ್ಯಕತೆ ಇಲ್ಲ, ಎಸ್‌ಐಆರ್ ಪ್ರಕ್ರಿಯೆ ನಿರ್ವಹಿಸಿದ ರೀತಿಯ ಬಗ್ಗೆ ಪ್ರಶ್ನೆಗಳು ಏಳುತ್ತಿರುವ ನಡುವೆಯೇ ತಮ್ಮ ಎಸ್‌ಐಆರ್ ನಮೂನೆಗಳಲ್ಲಿನ ವ್ಯತ್ಯಾಸಗಳ ಕುರಿತು ಚುನಾವಣಾ ಅಧಿಕಾರಿಗಳ ಮುಂದೆ ವಿಚಾರಣೆಗೆ ಹಾಜರಾಗುವ ಅಗತ್ಯವಿರುವುದಿಲ್ಲ ಎಂದು ಚುನಾವಣಾ ಆಯೋಗ ತಿಳಿಸಿದೆ. ಅಲ್ಲದೇ, ಎಸ್‌ಐಆರ್ ಪ್ರಕ್ರಿಯೆ ಈಗಾಗಲೇ ಪೂರ್ಣಗೊಂಡಿರುವ ರಾಜ್ಯಗಳಲ್ಲಿ, ಹೊಸ ಮತದಾರರಿಗೆ ಇರುವ ನಮೂನೆ 6ರ ಆನ್‌ಲೈನ್ ಆವೃತ್ತಿಯಲ್ಲಿ, ಹಿಂದಿನ ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭ ಪೋಷಕರ ವಿವರಗಳನ್ನು ಕೋರುವ ಘೋಷಣೆ ಇರುವುದಿಲ್ಲ ಈಗಾಗಲೇ ಆಯೋಗ ಸ್ಪಷ್ಟಪಡಿಸಿದೆ.

### ರಷ್ಯಾದ ಸೇನೆಗೆ ಸೇರದಂತೆ ಭಾರತೀಯರಿಗೆ ಎಚ್ಚರಿಕೆ

**ನವದೆಹಲಿ:** ರಷ್ಯಾಕ್ಕೆ ಪ್ರಯಾಣಿಸುವ ಭಾರತೀಯರಿಗಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸಲಹಾ ಸೂಚನೆಯೊಂದನ್ನು ಹೊರಡಿಸಿದೆ. ರಷ್ಯಾದ ಸಶಸ್ತ್ರ ಪಡೆಗಳಲ್ಲಿ ನೇಮಕಾತಿ ಪಡೆಯದಂತೆ ಎಚ್ಚರಿಸಿರುವ ಸಚಿವಾಲಯವು, ಇಂತಹ ಕ್ರಮಗಳ ಗಂಭೀರತೆಯನ್ನು ಪರಿಗಣಿಸುವಂತೆಯೂ ಮತ್ತು ಇದರಿಂದ ಎದುರಾಗಬಹುದಾದ ಪ್ರಾಣಾಪಾಯಗಳನ್ನು ಅರ್ಥಮಾಡಿಕೊಳ್ಳುವಂತೆಯೂ ವ್ಯಕ್ತಿಗಳಿಗೆ ಸಲಹೆ ನೀಡಿದೆ. ರಷ್ಯಾದ ಸಶಸ್ತ್ರ ಪಡೆಗಳಿಗೆ ಸೇರುವುದರಿಂದ ಸಿಗುವ ಆರ್ಥಿಕ ಲಾಭಗಳನ್ನು ಪಡೆಯಬಹುದು ಮತ್ತು ನಂತರ ಭಾರತೀಯ ಸರ್ಕಾರವನ್ನು ಸಂಪರ್ಕಿಸಿ ಸೇವೆಯಿಂದ ಬಿಡುಗಡೆ ಪಡೆಯಬಹುದು ಎಂಬ ತಿಳುವಳಿಕೆಯೊಂದಿಗೆ, ಸ್ವಯಂಪ್ರೇರಣೆಯಿಂದ ಅಲ್ಲಿ ಸೇರಲು ಮುಂದಾಗುವ ಅನೇಕ ಪ್ರಕರಣಗಳು ತಮ್ಮ ಗಮನಕ್ಕೆ ಬಂದಿವೆ ಎಂದು ಸಚಿವಾಲಯವು ತನ್ನ ಸಲಹಾ ಸೂಚನೆಯಲ್ಲಿ ತಿಳಿಸಿದೆ. "ಇದು ಅಪಾಯಕಾರಿ ಹಾದಿಯಾಗಿದೆ ಮತ್ತು ಸರ್ಕಾರ ಇದನ್ನು ಬಲವಾಗಿ ವಿರೋಧಿಸುತ್ತದೆ ಎಂಬುದನ್ನು ಪುನರುಚ್ಚರಿಸಲಾಗಿದೆ" ಎಂದು ಸಲಹಾ ಸೂಚನೆಯಲ್ಲಿ ಹೇಳಲಾಗಿದೆ.

### ಅತ್ಯಂತ ದೊಡ್ಡ ವಂಚಕ' ರಾಹುಲ್ ಗಾಂಧಿ

**ನವದೆಹಲಿ:** ಎಸ್‌ಐಆರ್ ವಿಷಯದಲ್ಲಿ ಚುನಾವಣಾ ಆಯೋಗ ಮತ್ತು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಕ್ಕಾಗಿ ಬಿಜೆಪಿ ಗುರುವಾರ ರಾಹುಲ್ ಗಾಂಧಿ ಅವರನ್ನು ತೀವ್ರವಾಗಿ ಟೀಕಿಸಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸುಳ್ಳು ಮತ್ತು ತಪ್ಪು ಮಾಹಿತಿಯನ್ನು ಅವಲಂಬಿಸಿ ರಾಜಕೀಯ ನಡೆಸುವ 'ಅತ್ಯಂತ ದೊಡ್ಡ ವಂಚಕ' ಮತ್ತು 'ಅವಿಶ್ವಸಾರ್ಹ ರಾಜಕಾರಣಿ' ಎಂದು ಪಕ್ಷವು ಬಣ್ಣಿಸಿದೆ.



ಇಲ್ಲಿನ ಬಿಜೆಪಿ ಪ್ರಧಾನ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಪಕ್ಷದ ಹಿರಿಯ ನಾಯಕ ರಾಜೀವ್ ಚಂದ್ರಶೇಖರ್, 'ರಾಹುಲ್ ಗಾಂಧಿ ಅವರು ಜಾತ್ಯತೀತತೆಯ ರಕ್ಷಕರೂ ಅಲ್ಲ, ಸಂವಿಧಾನದ ರಕ್ಷಕರೂ ಅಲ್ಲ. ಅವರು ತಮ್ಮ ಸ್ವಂತ ಕುಟುಂಬದ ಹಿತಾಸಕ್ತಿಯ ರಕ್ಷಕರು' ಎಂದು ಹೇಳಿದರು.

ರಾಹುಲ್ ಗಾಂಧಿಯವರು ಪ್ರಧಾನಿ ನರೇಂದ್ರ ಮೋದಿ ಅವರನ್ನು 'ದೇಶದ್ರೋಹಿ' ಎಂದು ಕರೆದಿರುವುದು, ಜನರನ್ನು ದಾರಿ ತಪ್ಪಿಸುವ ಉದ್ದೇಶದಿಂದ ಕೂಡಿದ ಅವರ 'ನಕಲಿ ಮತ್ತು ಅಸಲಿ–ಅಲ್ಲದ ರಾಜಕೀಯ'ದ ಪರಮ ನಿದರ್ಶನವಾಗಿದೆ ಎಂದು ಕೇರಳ ಬಿಜೆಪಿ ಅಧ್ಯಕ್ಷರು ಆರೋಪಿಸಿದರು.

ಹೊಸ ಮತದಾರರ ನೋಂದಣಿಗೆ ಬಳಸಲಾಗುವ ಆನ್‌ಲೈನ್ 'ಫಾರ್ಮ್ 6' ಅನ್ನು ಅಕ್ರಮವಾಗಿ ಬದಲಾಯಿಸಲಾಗಿದೆ ಎಂದು ಗುರುವಾರ ಹೇಳಿದ ರಾಹುಲ್ ಗಾಂಧಿ, ಈ ಬದಲಾವಣೆಯನ್ನು ಮಾಡುವಂತೆ ಚುನಾವಣಾ ಆಯೋಗದ ಯಾವ ಅಧಿಕಾರಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ಗೆ ಆದೇಶ ನೀಡಿದ್ದರು ಮತ್ತು ಕಂಪನಿಯ ಯಾವ ಅಧಿಕಾರಿ ಅದಕ್ಕೆ ಅನುಮೋದನೆ ನೀಡಿದ್ದರು ಎಂದು ಪ್ರಶ್ನಿಸಿದ್ದಾರೆ.

'ಫಾರ್ಮ್ 6'ನಲ್ಲಿ ಮಾಡಲಾದ ಬದಲಾವಣೆಯು 'ಪ್ರಧಾನಿ ಮತ್ತು ಗೃಹ ಸಚಿವರ ಜೋಡಿ'ಯಿಂದಲೇ ನಡೆಸಲ್ಪಟ್ಟ ಸಂಚು ಎಂದು ಕಾಂಗ್ರೆಸ್‌ನ ಸಂವಹನ ವಿಭಾಗದ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆರೋಪಿಸಿದ್ದಾರೆ.

# ಇದು ಕ್ರಿಕೆಟ್ ಅಲ್ಲ ಬರಿ ಬ್ಯಾಟಿಂಗ್; ಗೌತಮ್ ಗಂಭೀರ್ ಅಸಮಾಧಾನ



ವೆಸ್ಟ್ ಇಂಡೀಸ್ ವಿರುದ್ಧ 400ಕ್ಕೂ ಹೆಚ್ಚು ರನ್‌ಗಳ ಗುರಿಯನ್ನು ಯಶಸ್ವಿಯಾಗಿ ಬೆನ್ನಟ್ಟಿದ ಭಾರತೀಯ ತಂಡವು ವ್ಯಾಪಕ ಪ್ರಶಂಸೆಗೆ ಪಾತ್ರವಾಗಿದೆ. ನಾಯಕ ಶುಭಮನ್ ಗಿಲ್ ಅವರ ದ್ವಿಶತಕ ಮತ್ತು ರೋಹಿತ್ ಶರ್ಮಾ ಅವರ ಶತಕದ ನೆರವಿನಿಂದ ತಂಡವು ಸುಲಭ ಜಯ ಸಾಧಿಸಿತು. ಆದಾಗ್ಯೂ, ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಪಂದ್ಯಕ್ಕೆ ಬಳಸಲಾದ ಪಿಚ್‌ನ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

"ಈ ಪಂದ್ಯದ ಫಲಿತಾಂಶವನ್ನು ನೋಡಿದ ನಂತರ, ಬ್ಯಾಟಿಂಗ್ ಮತ್ತು ಬೌಲಿಂಗ್ ನಡುವೆ ಉತ್ತಮ ಸಮತೋಲನವಿರಬೇಕು ಎಂದು ನನಗೆ ಅನ್ನಿಸುತ್ತಿದೆ. ನಾವು ಕ್ರಿಕೆಟ್ ಬಗ್ಗೆ ಮಾತನಾಡುತ್ತಿದ್ದೇವೆ, ಆದರೆ ಇದು ಸರಿಯಾದ ಕ್ರಿಕೆಟ್ ಪಂದ್ಯವಾಗಿರಲಿಲ್ಲ. ಇದು ಸಂಪೂರ್ಣವಾಗಿ ಬ್ಯಾಟಿಂಗ್‌ಗೆ ಮಾತ್ರ ಸೀಮಿತವಾಗಿತ್ತು. ಎದುರಾಳಿ ತಂಡ 400ಕ್ಕೂ ಹೆಚ್ಚು ರನ್ ಗಳಿಸುವುದು ಮತ್ತು ನಮ್ಮ ತಂಡ ಅದನ್ನು ಬೆನ್ನಟ್ಟಿ ಗೆಲ್ಲುವುದು ದಾಖಲೆಗಳ ದೃಷ್ಟಿಯಿಂದ ಅಥವಾ ಪ್ರೇಕ್ಷಕರು ಹಾಗೂ ಪ್ರಸಾರಕರಿಗೆ ಅದ್ಭುತವೆನಿಸಬಹುದು, ಆದರೆ ಒಬ್ಬ ನಿಜವಾದ ಕ್ರಿಕೆಟ್ ಅಭಿಮಾನಿಯಾಗಿ ಮತ್ತು ಕೋಚ್ ಆಗಿ ನನಗೆ ಇದರಲ್ಲಿ ತೃಪ್ತಿಯಿಲ್ಲ. ಬೌಲರ್‌ಗಳಿಗೂ ಅವಕಾಶ ಸಿಗಬೇಕು ಎಂದು ನಾನು ನಂಬುತ್ತೇನೆ. ಇಂತಹ ಪಿಚ್‌ನಲ್ಲಿ ಬೌಲಿಂಗ್ ಮಾಡಲು ಹೇಳಿದಾಗ ಯುವ ಬೌಲರ್‌ನ ಮನಸ್ಥಿತಿ ಹೇಗಿರುತ್ತದೆ ಎಂಬುದನ್ನು ಪರಿಗಣಿಸಬೇಕು," ಎಂದು ಗಂಭೀರ್ ಹೇಳಿದರು.

**ಬೌಲರ್‌ಗಳ ಬಗ್ಗೆಯೂ ಸ್ವಲ್ಪ ಗಮನಹರಿಸಿ.!** "ಕೇವಲ ಬ್ಯಾಟಿಂಗ್‌ಗೆ ಮಾತ್ರವೇ ಅನುಕೂಲಕರವಾದ ಪಿಚ್‌ಗಳನ್ನು ಸಿದ್ಧಪಡಿಸುವುದು ಸರಿಯಲ್ಲ ಬೌಲರ್‌ಗಳ ಬಗ್ಗೆಯೂ ಸ್ವಲ್ಪ ಗಮನಹರಿಸಬೇಕು. ಆದಾಗ್ಯೂ, ಇಂತಹ ಪಿಚ್‌ಗಳಲ್ಲಿ ಬೌಲಿಂಗ್ ಮಾಡುವಾಗ ಬೌಲರ್‌ಗಳು ತಮ್ಮ ಅಂಕಿಅಂಶಗಳ ಬಗ್ಗೆ ಚಿಂತಿಸಬಾರದು. ಆಕಿಬ್ ನಬಿ ತಮ್ಮ ಮೊದಲ ಪಂದ್ಯವನ್ನು ಆಡಿದರು ಈ ಪಂದ್ಯದಲ್ಲಿನ ಪರಿಸ್ಥಿತಿಗಳು ಅವರಿಗೆ ಅಥವಾ ಇತರ ಬೌಲರ್‌ಗಳಿಗೆ ಅನುಕೂಲಕರವಾಗಿರಲಿಲ್ಲ. ಮುಂದಿನ ಪಂದ್ಯದಲ್ಲಿ ನಾವು ಖಂಡಿತವಾಗಿಯೂ ಆಕಿಬ್‌ಗೆ ಅವಕಾಶ ನೀಡುತ್ತೇವೆ ಅದರಲ್ಲಿ ಯಾವುದೇ ಸಂಶಯವಿಲ್ಲ. ಈ ಸರಣಿಗಳಲ್ಲಿನ ಗೆಲುವು-ಸೋಲುಗಳ ಬಗ್ಗೆ ನಮಗೆ ಯಾವುದೇ ಒತ್ತಡವಿಲ್ಲ. ನಿಜವಾದ ಒತ್ತಡವು ವಿಶ್ವಕಪ್ ಸಮಯದಲ್ಲಿ ಬರುತ್ತದೆ ಎಂಬುದು ನಮಗೆ ತಿಳಿದಿದೆ. ಆ ಪಂದ್ಯಾವಳಿಯು ನಾಲ್ಕು ವರ್ಷಗಳಿಗೊಮ್ಮೆ ಮಾತ್ರ ನಡೆಯುತ್ತದೆ, ಅದಕ್ಕಾಗಿಯೇ ಅಲ್ಲಿ ಒತ್ತಡ ಹೆಚ್ಚಿರುತ್ತದೆ. ಇಲ್ಲದಿದ್ದರೆ, ಆಟದ ಸ್ವರೂಪವು ಒಂದೇ ಆಗಿರುತ್ತದೆ. ಉದಾಹರಣೆಗೆ ಗುರ್ನೂರ್ ಬ್ರಾರ್ ಅವರನ್ನೇ ತೆಗೆದುಕೊಳ್ಳಿ ಅವರು ಮೊದಲ ಹತ್ತು ಓವರ್‌ಗಳಲ್ಲಿ ಹಾಗೂ 'ಡೆತ್ ಓವರ್'ಗಳಲ್ಲೂ (ಅಂತಿಮ ಹಂತದ ಓವರ್‌ಗಳಲ್ಲಿ) ಬೌಲಿಂಗ್ ಮಾಡಿದರು. ಅವರು ಅತ್ಯಂತ ಸವಾಲಿನ ಪರಿಸ್ಥಿತಿಯಲ್ಲಿ ಬೌಲಿಂಗ್ ಮಾಡಿದರು ಎಂಬುದನ್ನು ನೆನಪಿಟ್ಟುಕೊಳ್ಳುವುದು ಮುಖ್ಯ," ಎಂದು ಗಂಭೀರ್ ಹೇಳಿದರು.

**ಏಕದಿನ ವಿಶ್ವಕಪ್ ಕುರಿತು ಪ್ರತಿಕ್ರಿಯಿಸಿದ ಅವರು,** "ಏಕದಿನ ವಿಶ್ವಕಪ್‌ಗೆ (2027) ಇನ್ನು ಒಂದು ವರ್ಷ ಮಾತ್ರ ಬಾಕಿ ಇದೆ. ಅದರಲ್ಲಿ ಮೂರು ತಿಂಗಳು ಐಪಿಎಲ್ ಮತ್ತು ಇನ್ನೊಂದು ಮೂರು ತಿಂಗಳು ಭಾರತ-ಆಸ್ಟ್ರೇಲಿಯಾ ಸರಣಿಗಾಗಿ ಮೀಸಲಾಗಿರುತ್ತದೆ. ಗರಿಷ್ಠವೆಂದರೆ ನಾವು ಕೇವಲ 20 ಏಕದಿನ ಪಂದ್ಯಗಳನ್ನು ಆಡುತ್ತೇವೆ. ಆ ಸೀಮಿತ ಅವಧಿಯಲ್ಲೇ ನಾವು ನಮ್ಮ ಬ್ಯಾಟರ್‌ಗಳು ಮತ್ತು ಬೌಲರ್‌ಗಳನ್ನು ಪರೀಕ್ಷಿಸಬೇಕಿದೆ. ಸದ್ಯಕ್ಕೆ ನಮಗೆ ಲಭ್ಯವಿರುವ ಆಯ್ಕೆಗಳನ್ನು ಬಳಸಿಕೊಂಡು ನಾವು ಸಿದ್ಧತೆ ನಡೆಸುತ್ತೇವೆ. ಐಪಿಎಲ್ ಮುಗಿದ ನಂತರವಷ್ಟೇ ನಾವು ನಮ್ಮ ಪ್ರಮುಖ ಸಂಭಾವ್ಯ ತಂಡವನ್ನು ಹೆಚ್ಚು ಬಾರಿ ಕಣಕ್ಕಿಳಿಸುತ್ತೇವೆ. ಅಲ್ಲಿಯವರೆಗೆ ನಾವು ವಿವಿಧ ಕಾಂಬಿನೇಷನ್ ಪ್ರಯತ್ನಿಸುತ್ತಲೇ ಇರುತ್ತೇವೆ. ಈ ಬಾರಿ ಆಕಿಬ್‌ಗೆ ಅವಕಾಶ ಸಿಕ್ಕಿತು. ಮುಂದೆ ಇನ್ನೊಬ್ಬರಿಗೆ ಅವಕಾಶ ಸಿಗಬಹುದು," ಎಂದು ಗಂಭೀರ್ ಹೇಳಿದರು.

# ಲಂಕಾ ಮಣಿಸಿ ಫೈನಲ್ ತಲುಪಿದ ಭಾರತ

ಏಷ್ಯನ್ ಗೇಮ್ಸ್ ಪುರುಷರ ಕ್ರಿಕೆಟ್‌ನಲ್ಲಿ ಟೀಮ್ ಇಂಡಿಯಾ ಫೈನಲ್ ತಲುಪಿದೆ. ಇಂದು ನಡೆದಿದ್ದ ಸೆಮಿಫೈನಲ್ ಪಂದ್ಯದಲ್ಲಿ ಶ್ರೀಲಂಕಾವನ್ನು 124 ರನ್‌ಗಳಿಂದ ಮಣಿಸುವ ಮೂಲಕ ಚಿನ್ನದ ಪದಕ ಸುತ್ತಿಗೆ ಮುನ್ನಡೆಯಿತು. ಇದೀಗ ಅಂತಿಮ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ಸೆಣಸಲಿದೆ.

## ಪಾಕ್ ವಿರುದ್ಧ ಚಿನ್ನಕ್ಕಾಗಿ ಫೈಟ್

ಕೊರೋಗಿ ಕ್ರೀಡಾ ಮೈದಾನದಲ್ಲಿ ನಡೆದಿದ್ದ ಎರಡನೇ ಸೆಮಿಫೈನಲ್‌ನಲ್ಲಿ ಭಾರತ ನೀಡಿದ್ದ 170 ರನ್‌ಗಳ ಬೃಹತ್ ಗುರಿಯನ್ನು ಬೆನ್ನತ್ತಿದ ಶ್ರೀಲಂಕಾ ಅತ್ಯಂತ ಕಳಪೆ ಪ್ರದರ್ಶನ ನೀಡಿ 45 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಹೀನಾಯ ಸೋಲನ್ನು ಕಂಡಿತು.

ಚೇಸಿಂಗ್ ಆರಂಭಿಸಿದ ಲಂಕಾ ಪರ ನುವಾನಿಂದು ಫೆರ್ನಾಂಡು 15 ರನ್‌ಗಳಿಸಿ ಹೈಸ್ಕೋರರ್ ಎನಿಸಿಕೊಂಡರು. ಇವರನ್ನು ಹೊರತು ಪಡಿಸಿ ಯಾವುದೇ ಬ್ಯಾಟರ್ ಕನಿಷ್ಠ ಎರಡಂಕಿ ಸ್ಕೋರ್ ತಲುಪಲು ಸಾಧ್ಯವಾಗಲಿಲ್ಲ. ಇನ್ನು ಒಟ್ಟು ಐವರು ಡಕೌಟ್ ಆದರು. ಚೇಸಿಂಗ್ ಆರಂಭಿಸಿದ ಲಂಕಾಗೆ ಬುಮ್ರಾ ಆರಂಭಿಕ ಆಘಾತ ನೀಡಿದರು. ಅವರು ಮೊದಲ ಓವರ್‌ನಲ್ಲಿ ಕೇವಲ 1 ರನ್ ಬಿಟ್ಟುಕೊಟ್ಟು 2 ವಿಕೆಟ್ ಕಿತ್ತರು. ಇದಾದ ಬೆನ್ನಲ್ಲೆ ಅಕ್ಷರ್ ಪಟೇಲ್ ಮತ್ತೊಂದು ವಿಕೆಟ್ ಪಡೆದರು. ಇಲ್ಲಿಂದ ಲಂಕಾ ಸರಣಿ ವಿಕೆಟ್ ಕಳೆದುಕೊಳ್ಳುತ್ತ ಸಾಗಿತು.

4ನೇ ಓವರ್‌ನಲ್ಲಿ ಅಕ್ಷರ್ ಮತ್ತೆರಡು ವಿಕೆಟ್ ಪಡೆದರೆ, 5 ಮತ್ತು 7ನೇ ಓವರ್‌ನಲ್ಲಿ ವಾಷಿಂಗ್ಟನ್ ಸುಂದರ್ 2 ವಿಕೆಟ್ ಉರುಳಿಸಿದರು. 10ನೇ ಓವರ್‌ನಲ್ಲಿ ಅಭಿಷೇಕ್ 2 ವಿಕೆಟ್ ಪಡೆದುಕೊಂಡರು ಇದರೊಂದಿಗೆ ಲಂಕಾ ಇನ್ನಿಂಗ್ಸ್ ಕೊನೆಗೊಂಡಿತು.

**ಕಿಶನ್ ವೈಭವ್ ಸ್ಫೋಟಕ ಬ್ಯಾಟಿಂಗ್:** ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ್ದ ಭಾರತ ತಂಡ ಇಶಾನ್ ಕಿಶನ್ ಮತ್ತು ವೈಭವ್ ಸೂರ್ಯವಂಶಿ ಅವರ ಸಿಡಿಲಬ್ಬರದ ಬ್ಯಾಟಿಂಗ್ ಮೂಲಕ ಬೃಹತ್ ಮೊತ್ತ ಕಲೆಹಾಕಿತು. ಭಾರತ ಸಹ ಕಳಪೆ ಆರಂಭ ಪಡೆದುಕೊಂಡಿತು. 12 ರನ್‌ಗಳಿಗೆ ಮೊದಲ ವಿಕೆಟ್ ಕಳೆದುಕೊಂಡಿತು. ಅಭಿಷೇಕ್ ಶರ್ಮಾ 7 ರನ್ ಗಳಿಸಿ ನಿರ್ಗಮಿಸಿದರು. ಬಳಿಕ ಬಂದ ಸಂಜು ಸ್ಯಾಮ್ಸನ್ ಸಹ ಇಷ್ಟೆ ಮೊತ್ತ ಕಲೆಹಾಕಿ ಪೆವಿಲಿಯನ್ ಸೇರಿದರು. ಆದರೆ ವಿಕೆಟ್ ಬೀಳುತ್ತಿದ್ದರು ಲೆಕ್ಕಿಸದೆ ವೈಭವ್ ಸೂರ್ಯವಂಶಿ ಸಿಡಿಲಬ್ಬರದ ಬ್ಯಾಟಿಂಗ್ ಮುಂದುವರಿಸಿದರು. ಅವರು 21 ಎಸೆತಗಳಲ್ಲಿ 6 ಬೌಂಡರಿ ಮತ್ತು 2 ಸಿಕ್ಸರ್ ಸಿಡಿಸಿ 38 ರನ್‌ಗಳಿಸಿದರು. ಅರ್ಧಶತಕ ಸಮಿಪಿಸುತ್ತಿದ್ದ ವೇಳೆ ದೊಡ್ಡ ಹೊಡೆತಕ್ಕೆ ಕೈಹಾಕಿ ವಿಕೆಟ್ ಕಳೆದುಕೊಂಡರು. ಬಳಿಕ ಬಂದ ನಾಯಕ ಅಯ್ಯರ್ (13 ರನ್) ಸಹ ಸಾಮಾನ್ಯ ಮೊತ್ತ ಕಲೆಹಾಕಿದರು. ಈ ವೇಳೆ ಭಾರತ 87 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತ್ತು. ಇದೇ ವೇಳೆ ಐದನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಬಂದ ಕಿಶನ್ ಲಂಕಾ ಬೌಲರ್‌ಗಳನ್ನು ಚೆಂಡಾಡಿದರು. ಆರಂಭದಿಂದಲೆ ಬೌಲರ್‌ಗಳ ಮೇಲೆ ಒತ್ತಡ ಹೇರಿದ ಅವರು ಸಿಡಿಲಬ್ಬರದ ಬ್ಯಾಟಿಂಗ್ ಮೂಲಕ ತಂಡದ ಸ್ಕೋರ್ ಅನ್ನು ಗಮನಾರ್ಹವಾಗಿ ಹೆಚ್ಚಿಸಿದರು. ಏಕಾಂಗಿಯಾಗಿ ಹೋರಾಡಿದ ಅವರು ಕೊನೆಯವ ರೆಗೂ ಕ್ರೀಸ್‌ನಲ್ಲಿ ಉಳಿದು ಅಜೇಯವಾಗಿ 80 ರನ್ ಕಲೆಹಾಕಿದರು. ಅವರ ಈ ಇನ್ನಿಂಗ್ಸ್‌ನಲ್ಲಿ 4 ಬೌಂಡರಿ ಮತ್ತು 5 ಸಿಕ್ಸರ್ ಸೇರಿದ್ದವು. ಇವರ ಬ್ಯಾಟಿಂಗ್ ಬಲದಿಂದ ಭಾರತ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 169 ರನ್ ಕಲೆಹಾಕಿತು. ಉಳಿದಂತೆ ಅಕ್ಷರ್ ಪಟೇಲ್ (8), ಶಿವಂ ದುಬೆ (3), ತಿಲಕ್ ವರ್ಮಾ (2), ವಾಷಿಂಗ್ಟನ್ ಸುಂದರ್ ಅಜೇಯ 8 ರನ್‌ಗಳ ಕೊಡುಗೆ ನೀಡಿದರು. ಶ್ರೀಲಂಕಾ ಪರ ತಾರಿಂದು ರತ್ನಾಯಕೆ, ಸಹನ್ ಆರಾಚ್ಚಿಗೆ ತಲಾ 2 ವಿಕೆಟ್ ಪಡೆದುಕೊಂಡರು.

**ಚಿನ್ನಕ್ಕಾಗಿ ಭಾರತ ಪಾಕಿಸ್ತಾನ ಫೈಟ್**

ಈ ಗೆಲುವಿನೊಂದಿಗೆ ಭಾರತ ತಂಡ ಏಷ್ಯನ್ ಗೇಮ್ಸ್ 2026 ಕ್ರಿಕೆಟ್‌ನಲ್ಲಿ ಫೈನಲ್‌ಗೆ ತನ್ನ ಸ್ಥಾನವನ್ನು ಖಚಿತ ಪಡಿಸಿಕೊಂಡಿತು. ಮತ್ತೊಂದು ಸೆಮಿಫೈನಲ್‌ನಲ್ಲಿ ಬಾಂಗ್ಲಾದೇಶವನ್ನು ಮಣಿಸಿದ ಪಾಕಿಸ್ತಾನ ಸಹ ಫೈನಲ್‌ಗೆ ಮುನ್ನಡೆದಿದೆ. ಇದೀಗ ಇದೇ ಮೈದಾನದಲ್ಲಿ ಉಭಯ ತಂಡಗಳು ಅ.3 ರಂದು ಚಿನ್ನದ ಪದಕಕ್ಕಾಗಿ ಫೈನಲ್ ಪಂದ್ಯದಲ್ಲಿ ಸೆಣಸ ಲಿವೆ. ಈ ಎರಡೂ ತಂಡಗಳು ಕನಿಷ್ಠ ಬೆಳ್ಳಿ ಪದಕವನ್ನು ಖಚಿತ ಪಡಿಸಿಕೊಂಡಿವೆ ಎಂಬು ದು ಗಮನಾರ್ಹ.

# ಪಾಕಿಸ್ತಾನ ಮಣಿಸಿ ಫೈನಲ್ ತಲುಪಿದ ಭಾರತ




ಏಷ್ಯನ್ ಗೇಮ್ಸ್‌ನಲ್ಲಿ ಪಾಕಿಸ್ತಾನ ವಿರುದ್ಧ ನಡೆದಿದ್ದ ಪುರುಷರ ಹಾಕಿ ಸೆಮಿಫೈನಲ್ ಪಂದ್ಯದಲ್ಲಿ ಭಾರತ ತಂಡ 4-3 ಅಂತರದಿಂದ ಭರ್ಜರಿ ಗೆಲುವು ಸಾಧಿಸುವ ಮೂಲಕ ಫೈನಲ್‌ಗೆ ಪ್ರವೇಶ ಪಡೆದುಕೊಂಡಿದೆ. ಇದರೊಂದಿಗೆ ಏಷ್ಯನ್ ಗೇಮ್ಸ್‌ನಲ್ಲಿ ಕನಿಷ್ಠ ಬೆಳ್ಳಿ ಪದಕ ಖಚಿತಗೊಂಡಿದೆ. ಮಲೇಷ್ಯಾ ಮತ್ತು ದಕ್ಷಿಣ ಕೊರಿಯಾ ನಡುವಿನ ವಿಜೇತರನ್ನು ಭಾರತ ಫೈನಲ್‌ನಲ್ಲಿ ಎದುರಿಸಲಿದೆ. 58ನೇ ನಿಮಿಷದವರೆಗೆ ಸ್ಕೋರ್ 3-3 ರಿಂದ ಸಮಬಲದಲ್ಲಿತ್ತು. ಆದಾಗ್ಯೂ ಭಾರತಕ್ಕೆ ಕೊನೆಯ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಸಿಕ್ಕಿತು, ಮತ್ತು ಅಭಿಷೇಕ್ ಯಾವುದೇ ತಪ್ಪು ಮಾಡದೆ ಚೆಂಡನ್ನು ನೆಟ್‌ಗೆ ಕಳುಹಿಸಿ 4ನೇ ಗೋಲು ಗಳಿಸಿದರು. ಆಟದ ಮೊದಲ 29 ನಿಮಿಷಗಳ ನಂತರ ಭಾರತ 3-0 ಮುನ್ನಡೆಯಲ್ಲಿತ್ತು. ಆದಾಗ್ಯೂ, ಕೊನೆಯ 31 ನಿಮಿಷಗಳಲ್ಲಿ ಮೂರು ಗೋಲುಗಳನ್ನು ಗಳಿಸುವ ಮೂಲಕ ಪಾಕಿಸ್ತಾನ ಸ್ಕೋರ್ ಅನ್ನು ಸಮಗೊಳಿಸಿತು.

# ದಕ್ಷಿಣ ಕೊರಿಯಾ ಮಣಿಸಿ ಮಹಿಳಾ ಹಾಕಿ ಫೈನಲ್ ತಲುಪಿದ ಭಾರತ



ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾವನ್ನು 2-0 ಅಂತರದಿಂದ ಸೋಲಿಸುವ ಮೂಲಕ ಭಾರತೀಯ ಮಹಿಳಾ ಹಾಕಿ ತಂಡ ಏಷ್ಯನ್ ಕ್ರೀಡಾಕೂಟದಲ್ಲಿ ಫೈನಲ್‌ಗೆ ತಲುಪಿದೆ. ಇದೀಗ ಚಿನ್ನ ಗೆಲ್ಲಲು ಒಂದು ಹೆಜ್ಜೆ ದೂರದಲ್ಲಿದೆ. ಅಕ್ಟೋಬರ್ 2 ರಂದು ನಡೆಯಲಿರುವ ಪ್ರಶಸ್ತಿ ಪಂದ್ಯದಲ್ಲಿ ಭಾರತ ಚೀನಾವನ್ನು ಎದುರಿಸಲಿದೆ. ಈ ಪಂದ್ಯದಲ್ಲಿ ಚಿನ್ನ ಗೆಲ್ಲುವ ಮೂಲಕ 44 ವರ್ಷ ಕಾಯುವಿಕೆಯನ್ನು ಕೊನೆಗೊಳಿಸಲು ಭಾರತೀಯ ಮಹಿಳಾ ತಂಡವು ಎದುರು ನೋಡುತ್ತಿದೆ. ಭಾರತೀಯ ಮಹಿಳಾ ತಂಡ ಇಲ್ಲಿಯ ವರೆಗೆ ಉತ್ತಮ ಪ್ರದರ್ಶನ ನೀಡಿದ್ದು, ಅಜೇಯವಾಗಿ ಫೈನಲ್‌ಗೆ ತಲುಪಿದೆ. ಸೆಮಿಫೈನಲ್‌ನಲ್ಲಿ, ಮೊದಲ ಎರಡು ಕ್ವಾರ್ಟರ್‌ಗಳಲ್ಲಿ ಯಾವು ದೇ ತಂಡವು ಒಂದೇ ಒಂದು ಗೋಲು ಗಳಿಸಲಿಲ್ಲ. ಆದಾಗ್ಯೂ, ಎರಡ ನೇ ಕ್ವಾರ್ಟರ್‌ನಲ್ಲಿ ಇಶಿಕಾ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಅವರು ಪೆನಾಲ್ಟಿ ಕಾರ್ನರ್ ಅನ್ನು ಗೋಲಾಗಿ ಪರಿವರ್ತಿಸಿದರು. ನಾಲ್ಕು ನಿಮಿಷ ಗಳ ನಂತರ, ಸುನೆಲಿಟಾ ಟೊಪ್ಪೊ ಫೀಲ್ಡ್ ಗೋಲ್ ಮೂಲಕ ಮುನ್ನಡೆ ಯನ್ನು ದ್ವಿಗುಣಗೊಳಿಸಿದರು. ಕೊರಿಯಾ ಕೊನೆಯವರೆಗೂ ಗೋಲು ಗಳಿಸದೆ ಉಳಿದಿತ್ತು ಮತ್ತು ಭಾರತ ಸುಲಭವಾಗಿ ಪಂದ್ಯವನ್ನು ಗೆದ್ದಿತು. ಆರಂಭ ದಲ್ಲಿ ಭಾರತ ಮತ್ತು ಕೊರಿಯಾ ನಡುವೆ ಕಠಿಣ ಹೋರಾಟ ಕಂಡುಬಂ ದಿತು. ಮೊದಲ ಕೆಲವು ನಿಮಿಷಗಳಲ್ಲಿ ಭಾರತಕ್ಕೆ ಪೆನಾಲ್ಟಿ ಕಾರ್ನರ್‌ಗಳು ಸಿಕ್ಕವು ಆದರೆ ಅವುಗಳನ್ನು ಗೋಲುಗಳಾಗಿ ಪರಿವರ್ತಿ ಸಲು ಸಾಧ್ಯವಾ ಗಲಿಲ್ಲ. ಈ ಅವಧಿಯಲ್ಲಿ ಕೊರಿಯಾದ ಉತ್ತಮ ರಕ್ಷಣಾ ಸಾಮರ್ಥ್ಯ ಕಂಡುಬಂದಿತು. ಕೊರಿಯಾದ ರಕ್ಷಣೆಯನ್ನು ಭೇದಿಸುವ ಮೂಲಕ ಭಾರತ ಗೋಲು ಗಳಿಸಲು ಪ್ರಯತ್ನಿಸಿತು ಆದರೆ ಅದು ವಿಫಲ ವಾಯಿತು. ಮೊದಲ ಕ್ವಾರ್ಟರ್‌ನಲ್ಲಿ ಭಾರತ ಒಟ್ಟು ಒಂಬತ್ತು ಪೆನಾಲ್ಟಿ ಕಾರ್ನರ್‌ಗಳನ್ನು ಪಡೆಯಿತು ಆದರೆ ಒಂದನ್ನು ಸಹ ಗೋಲಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ. ಮೊದಲ ಕ್ವಾರ್ಟರ್ ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತು. ಎರಡನೇ ಕ್ವಾರ್ಟರ್‌ನಲ್ಲಿಯೂ ಇದೇ ಪರಿಸ್ಥಿತಿ ಕಂಡುಬಂತು. ಮೊದಲಾರ್ಧದವರೆಗೂ ಸಮಬಲದಲ್ಲಿತ್ತು.

# 5 ಮಿಲಿಯನ್ ಜನರನ್ನು ತಲುಪಿದ ಪುಟ್ಟಮಲ್ಲಿ

ಡಾಲಿ ಧನಂಜಯ್ ಅಭಿನಯದ ಬಹುನಿರೀಕ್ಷಿತ ಚಿತ್ರ ಅಣ್ಣ ಫ್ರಮ್ ಮೆಕ್ಸಿಕೋ ಬಿಡುಗಡೆಗೂ ಮುನ್ನವೇ ಹಾಡುಗಳ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಭಾರಿ ಸಂಚಲನ ಸೃಷ್ಟಿಸಿದೆ.

ಚಿತ್ರದ ಓ ಪುಟ್ಟಮಲ್ಲಿ ನೀ ಕೇಳು ಇಲ್ಲಿ ಎಂಬ ಮಾಸ್ ಡ್ಯಾನ್ಸ್ ನಂಬರ್ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಯೂಟ್ಯೂಬ್‌ನಲ್ಲಿ ಬರೋಬ್ಬರಿ 5 ಮಿಲಿಯನ್ (50 ಲಕ್ಷ) ವೀಕ್ಷಣೆಗಳ ಗಡಿ ತಲುಪುವ ಮೂಲಕ ಧೂಳೆಬ್ಬಿಸುತ್ತಿದೆ. ಕೇವಲ ಯೂಟ್ಯೂಬ್ ಅಷ್ಟೇ ಅಲ್ಲದೆ, ಸೋಶಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್ ಇನ್‌ಸ್ಟಾಗ್ರಾಮ್‌ನಲ್ಲೂ ಈ ಹಾಡು ಹೊಸ ದಾಖಲೆ ಬರೆದಿದ್ದು, ಈಗಾಗಲೇ 50 ಸಾವಿರಕ್ಕೂ ಅಧಿಕ ರೀಲ್ಸ್‌ಗಳು ಈ ಟ್ಯೂನ್‌ಗೆ ಹರಿದುಬಂದಿವೆ.

## ಇದು ಧನಂಜಯ್ ಅಭಿನಯದ 'ಅಣ್ಣ ಫ್ರಮ್ ಮೆಕ್ಸಿಕೋ' ಚಿತ್ರದ ಕ್ರೇಜ್





ಎಕ್ಕ ಚಿತ್ರದ ಬ್ಯಾಂಗಲ್ ಬಂಗಾರಿ ಹಾಡಿನ ಯಶಸ್ಸಿನ ಬಳಿಕ, ಮತ್ತೊಂದು ಬಿಗ್ಗೆಸ್ಟ್ ಚಾರ್ಟ್‌ಬಸ್ಟರ್ ಸಾಂಗ್ ಆಗಿ 'ಓ ಪುಟ್ಟಮಲ್ಲಿ' ಹೊರಹೊಮ್ಮಿದೆ. ವಾಸುಕಿ ವೈಭವ್ ಅವರ ಮಾಸ್ ಬೀಟ್ಸ್‌ಗೆ ನಿರ್ದೇಶಕ ಚೇತನ್ ಕುಮಾರ್ ಲೇಖನಿಯಿಂದ ಸಾಹಿತ್ಯ ಮೂಡಿಬಂದಿದ್ದು, ಖ್ಯಾತ ಗಾಯಕ ಸಂಜಿತ್ ಹೆಗ್ಡೆ ತಮ್ಮ ವಿಶಿಷ್ಟ ಕಂಠದಲ್ಲಿ ಈ ಹಾಡನ್ನು ಅದ್ಭುತವಾಗಿ ಹಾಡಿದ್ದಾರೆ.

ಧನಂಜಯ್ ಅವರ ಇತ್ತೀಚಿನ ಕರಿಯರ್‌ನಲ್ಲೇ ಒಂದು ಪಕ್ಕಾ ಕಮರ್ಷಿಯಲ್ ಡ್ಯಾನ್ಸ್ ನಂಬರ್ ಇದಾಗಿದ್ದು, ನಾಯಕಿ ರೀಷ್ಮಾ ನಾಣಯ್ಯ ಜೊತೆಗೂಡಿ ಡಾಲಿ ಹೆಜ್ಜೆ ಹಾಕಿರುವ ರೀತಿ ಅಭಿಮಾನಿಗಳಿಗೆ ಸಖತ್ ಕಿಕ್ ಕೊಟ್ಟಿದೆ. ಭೂಷಣ್ ಮಾಸ್ಟರ್ ಕೋರಿಯೋಗ್ರಫಿ ಮಾಡಿರೋ ಈ ಹಾಡು ರಿಯಾಲಿಟಿ ಶೋ ಗಳಲ್ಲಿ ಫೇವರೇಟ್ ಆಗಿದೆ. ಇವರಿಬ್ಬರ ಸ್ಟೆಪ್ಸ್ ಹಾಗೂ ಎನರ್ಜಿ ಈ ಹಾಡನ್ನು ಸಿನಿಮಾಗೆ ದೊಡ್ಡ ಮಟ್ಟದ ಮೈಲೇಜ್ ತಂದುಕೊಡುವಂತೆ ಮಾಡಿದೆ.

ಈ ಚಿತ್ರದಲ್ಲಿ ಡಾಲಿ ಧನಂಜಯ್ ಹಾಗೂ ರೀಷ್ಮಾ ನಾಣಯ್ಯ ಜೊತೆಗೆ ಹಿರಿಯ ನಟಿ ಉಮಾಶ್ರೀ, ರಂಗಾಯಣ ರಘು, ಹಾಸ್ಯ ನಟ ಸಾಧು ಕೋಕಿಲ, ನಾಗಭೂಷಣ, ಪೂರ್ಣಚಂದ್ರ ಮೈಸೂರು, ಹುಲಿ ಕಾರ್ತಿಕ್ ಸೇರಿದಂತೆ ಪ್ರತಿಭಾವಂತ ಕಲಾವಿದರ ಬಹುದೊಡ್ಡ ತಾರಾಗಣವಿದೆ.

'ಬಡವ ರಾಸ್ಕಲ್' ಎಂಬ ಹಿಟ್ ಸಿನಿಮಾ ನೀಡಿದ್ದ ಶಂಕರ್ ಗುರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದು, ಚಿತ್ರದ ಮೇಲಿನ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿದ್ದಾರೆ. ಐರಾ ಫಿಲಂಸ್ ಬ್ಯಾನರ್ ಅಡಿಯಲ್ಲಿ ಚನ್ನರಾಜ್ ಬಿ. ಹಟ್ಟಿಹೊಳಿ ಹಾಗೂ ಮೃಣಾಲ್ ಮತ್ತು ರಾಯಲಾ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಸತ್ಯ ರಾಯಲ ಹಾಗೂ ಜಾನ್ವಿ ರಾಯಲ ಈ ಚಿತ್ರವನ್ನು ಜಂಟಿಯಾಗಿ ನಿರ್ಮಿಸಿದ್ದಾರೆ. ಚಿತ್ರಕ್ಕೆ ಎ. ಜೆ. ಶೆಟ್ಟಿ ಮತ್ತು ಎಸ್.ಕೆ. ರಾವ್ ಛಾಯಾಗ್ರಹಣ ಮಾಡಿದ್ದಾರೆ. ಸದ್ಯ ಹಾಡಿನ ಮೂಲಕವೇ ಹೊಸ ಹವಾ ಸೃಷ್ಟಿಸಿರುವ 'ಅಣ್ಣ ಫ್ರಮ್ ಮೆಕ್ಸಿಕೋ' ಸಿನಿಮಾ ಇದೇ ಡಿಸೆಂಬರ್ 24ರಂದು ಗ್ರ್ಯಾಂಡ್ ಆಗಿ ರಾಜ್ಯಾದ್ಯಂತ ತೆರೆಗೆ ಬರಲಿದೆ.

# ಕನ್ನಡದ ವಿನೂತನ ಚಿತ್ರ ರಾವೆನ್‌ನ ಟ್ರೈಲರ್ ಅನಾವರಣ

## ಕಾಗೆಯೇ ನಾಯಕ

ಭಾರತೀಯ ಚಿತ್ರರಂಗದಲ್ಲಿ ಧೈರ್ಯಶಾಲಿ ನಾಯಿಗಳು, ಕುದುರೆಗಳು ಮತ್ತು ಆನೆಗಳ ಕಥೆಗಳನ್ನು ನಾವು ನೋಡಿದ್ದೇವೆ; ಆದರೆ ಈಗ ಒಂದು ಕನ್ನಡ ಚಲನಚಿತ್ರ ಸಾಮಾನ್ಯ ಕಾಗೆಯೊಂದನ್ನು ಅನಿರೀಕ್ಷಿತ ಚಲನಚಿತ್ರ ನಾಯಕನನ್ನಾಗಿ ಪರಿವರ್ತಿಸುತ್ತಿದೆ. 'ರಾವೆನ್' ಎಂಬ ಶೀರ್ಷಿಕೆಯ ಈ ಮುಂಬರುವ ನಿಗೂಢ ಅಪರಾಧ-ರೋಚಕ (ಮಿಸ್ಟಿಕಲ್ ಕ್ರೈಮ್ ಥ್ರಿಲ್ಲರ್) ಚಿತ್ರದಲ್ಲಿ, ಅಪರಾಧಿಗಳನ್ನು ಪತ್ತೆಹಚ್ಚಿ ನ್ಯಾಯ ಒದಗಿಸುವ ಪ್ರಮುಖ ಪಾತ್ರದಲ್ಲಿ ಕಾಗೆಯೊಂದು ಕಾಣಿಸಿಕೊಳ್ಳಲಿದೆ. ಆಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಅವರು ಈ ಚಿತ್ರಕ್ಕೆ ಬೆಂಬಲ ಸೂಚಿಸಿದ್ದು, ಭವ್ಯ ಸಮಾರಂಭವೊಂದರಲ್ಲಿ ಇದರ ಅಧಿಕೃತ ಟ್ರೈಲರ್ ಅನ್ನು ಬಿಡುಗಡೆ ಮಾಡಿದ್ದಾರೆ. ಪಿತೃಪಕ್ಷದ ಸಂದರ್ಭದಲ್ಲಿ (ಪೂರ್ವಜರ ನೆನಪಿಗಾಗಿ ಕಾಗೆಗಳಿಗೆ ಆಹಾರ ನೀಡುವ ಸಾಂಪ್ರದಾಯಿಕ ಅವಧಿ) ಈ ಟ್ರೈಲರ್ ಬಿಡುಗಡೆಯಾಗಿರುವುದು ವಿಶೇಷವಾಗಿತ್ತು. ಡಿ.ಎಸ್. ಮ್ಯಾಕ್ಸ್ ದಯಾನಂದ್, ಕೆಎಫ್‌ಸಿಸಿ ಮಾಜಿ ಅಧ್ಯಕ್ಷ ಬಿ.ಎಂ. ಹರೀಶ್ ಮತ್ತು ರಶ್ಮಿ ಸೇರಿದಂತೆ ಹಲವು ಗಣ್ಯರು ಚಿತ್ರದ ಶೀರ್ಷಿಕೆ ಗೀತೆಯನ್ನು ಬಿಡುಗಡೆ ಮಾಡುವಲ್ಲಿ ಭಾಗವಹಿಸಿದ್ದರು. ವಿಶಿಷ್ಟವಾದ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದಕ್ಕಾಗಿ ಚಿತ್ರತಂಡವನ್ನು ಶ್ಲಾಘಿಸಿದ ಧ್ರುವ ಸರ್ಜಾ, ಚಿತ್ರ ಭಾರಿ ಯಶಸ್ಸನ್ನು ಕಾಣಲಿ ಎಂದು ಹಾರೈಸಿದರು. ವೇದಾ ನಿರ್ದೇಶನದಲ್ಲಿ ಮತ್ತು ವಿಶ್ವ ಪ್ರೊಡಕ್ಷನ್ಸ್ ಅಡಿಯಲ್ಲಿ ವಿಶ್ವನಾಥ್ ಜಿ.ಪಿ. ನಿರ್ಮಿಸಿರುವ ಈ ಚಿತ್ರ, ಕಾಗೆಗಳ ಬಗ್ಗೆ ಜನರಿಗಿರುವ ದೃಷ್ಟಿಕೋನವನ್ನು ಬದಲಾಯಿಸುವ ಗುರಿಯನ್ನು ಹೊಂದಿದೆ. ಸಾಮಾನ್ಯವಾಗಿ, ಅನೇಕರು ಕಾಗೆಯನ್ನು ಅಪಶಕುನವೆಂದು ಪರಿಗಣಿಸುತ್ತಾರೆ, ಅದು ಮೈಗೆ ತಾಗಿದರೆ ಬಟ್ಟೆಗಳನ್ನು ಒಗೆಯುತ್ತಾರೆ ಅಥವಾ ಅದನ್ನು ಕೇವಲ ಸಾವಿನೊಂದಿಗೆ ಸಂಬಂಧಿಸುತ್ತಾರೆ. ಆದರೆ, ಮನುಷ್ಯರು ಕಲಿಯಬಹುದಾದ ಉತ್ತಮ ಗುಣಗಳು ಕಾಗೆಗಳಲ್ಲಿವೆ ಎಂದು ನಿರ್ದೇಶಕ ವೇದಾ ತಿಳಿಸಿದರು. ಕಾಗೆ ಎಂದಿಗೂ ಒಂಟಿಯಾಗಿ ತಿನ್ನುವುದಿಲ್ಲ ಮತ್ತು ಆಹಾರ ಸಿಕ್ಕಾಗಲೆಲ್ಲಾ ಅದನ್ನು ಹಂಚಿಕೊಳ್ಳಲು ತನ್ನ ಇಡೀ ಗುಂಪನ್ನೇ ಕರೆಯುತ್ತದೆ.

ಅಧಿಕೃತ ಟ್ರೈಲರ್‌ನ ಪ್ರಕಾರ, ಇದು ಯಾವುದೇ ಕಾರ್ಟೂನ್ ಅಥವಾ ಮುದ್ದಾದ ಪಕ್ಷಿಯ ಕಥೆಯಲ್ಲ, ಬದಲಾಗಿ, ಕರ್ಮದ ದೇವತೆಯಾದ ಶನಿ ದೇವನ ವಾಹನವೆಂಬ ಪೌರಾಣಿಕ ನಂಬಿಕೆಯೊಂದಿಗೆ ಬೆರೆತ ತೀವ್ರ ಸ್ವರೂಪದ ಅಪರಾಧ-ನಿಗೂಢ ಕಥೆಯಾಗಿದೆ. ಪೊಲೀಸರು ವಿಚಿತ್ರ ಕೊಲೆ ಪ್ರಕರಣಗಳನ್ನು ತನಿಖೆ ಮಾಡುತ್ತಿರುವಾಗ, ಕಾಗೆಯು ಕಾರಿನ ಮೇಲ್ಛಾವಣಿ, ಬೀದಿ ಮೂಲೆಗಳು ಮತ್ತು ಅಪರಾಧ ನಡೆದ ಸ್ಥಳಗಳಿಂದ ಮೌನವಾಗಿ ಎಲ್ಲವನ್ನೂ ಗಮನಿಸುತ್ತಿರುತ್ತದೆ ಮತ್ತು ಮಾನವ ಕಾನೂನುಗಳು ವಿಫಲವಾದಾಗ ಕರ್ಮದ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ಈ ಚಿತ್ರದಲ್ಲಿ ಪಕ್ಷಿಯೊಂದು ಪ್ರಮುಖ ಪಾತ್ರ ವಹಿಸುವುದನ್ನು ಮಾನವ ನಟರು ಸಂತೋಷದಿಂದ ಒಪ್ಪಿಕೊಂಡಿದ್ದಾರೆ. ಚಿತ್ರದ ನಾಯಕ ನಟ ದಿಲೀಪ್ ಪೈ, ಕಾಗೆಯೇ ಈ ಚಿತ್ರದ ನಿಜವಾದ ನಾಯಕ ಎಂದು ಹೇಳಿಕೊಂಡರೆ, ತಾವು ಮತ್ತು ಸಹನಟ ದೇವ್ ದೇವಯ್ಯ ಕೇವಲ ಪೋಷಕ ಪಾತ್ರಗಳಲ್ಲಿರುವುದಾಗಿ ತಿಳಿಸಿದರು. ಈ ಚಿತ್ರದ ತಾರಾಗಣದಲ್ಲಿ ಸ್ವಪ್ನ ಶೆಟ್ಟಿಗಾರ್, ಸುಚೇಂದ್ರ ಪ್ರಸಾದ್, ಲೀಲಾ ಮೋಹನ್, ದಿನೇಶ್ ಮಂಗಳೂರು ಮತ್ತು ನಿರ್ಮಾಪಕ ವಿಶ್ವನಾಥ್ ಕೂಡ ಇದ್ದಾರೆ. ಅತ್ಯಧಿಕ ಕಂಪ್ಯೂಟರ್ ಗ್ರಾಫಿಕ್ಸ್, ರಾಕೇಶ್ ಸಿ. ತಿಲಕ್ ಅವರ ಛಾಯಾಗ್ರಹಣ ಮತ್ತು ಒಂಆ ಆ ಅವರ ಸಂಗೀತದೊಂದಿಗೆ 'ರಾವೆನ್' ಸಂಪೂರ್ಣವಾಗಿ ಸಿದ್ಧಗೊಂಡಿದೆ. ಈ ನವೆಂಬರ್‌ನಲ್ಲಿ ಕನ್ನಡ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಚಿತ್ರಮಂದಿರಗಳನ್ನು ತಲುಪಲು ಸಜ್ಜಾಗಿರುವ ಈ ಚಿತ್ರವನ್ನು, ಚೀನಾ ಮತ್ತು ಕೊರಿಯಾದಲ್ಲೂ ಬಿಡುಗಡೆ ಮಾಡುವ ಯೋಜನೆಗಳಿವೆ.






# ರಜನಿಕಾಂತ್ ಭೇಟಿ ಮಾಡಿದ ವಿಷ್ಣುವರ್ಧನ್ ಕುಟುಂಬ

ತಮಿಳು ಚಿತ್ರರಂಗದ ಸೂಪರ್ ಸ್ಟಾರ್ ರಜನಿಕಾಂತ್ ಸದ್ಯ ಮೈಸೂರಿನಲ್ಲಿ ಧರ್ಮನ್ ಸಿನಿಮಾ ಶೂಟಿಂಗ್‌ನಲ್ಲಿದ್ದು, ತಮ್ಮ ಬ್ಯುಸಿ ಶೆಡ್ಯೂಲ್‌ನಲ್ಲಿಯೂ ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನ ಮಾಡಿ, ಆಶೀರ್ವಾದ ಪಡೆದಿದ್ದಾರೆ. ಈ ಮಧ್ಯೆ ಸಾಹಸಸಿಂಹ ವಿಷ್ಣುವರ್ಧನ್ ಅವರ ಪತ್ನಿ ಭಾರತಿ ವಿಷ್ಣುವರ್ಧನ್, ಮಗಳು ಕೀರ್ತಿ, ಅಳಿಯ ಅನಿರುದ್ಧ್ ಹಾಗೂ ಅವರ ಮಕ್ಕಳು ತಲೈವಾ ರಜನಿ ಅವರನ್ನು ಭೇಟಿ ಮಾಡಿದ್ದಾರೆ. ಈ ಕುರಿತಂತೆ ಭಾರತಿ ವಿಷ್ಣುವರ್ಧನ್ ಹಾಗೂ ಅಳಿಯ ಅನಿರುದ್ಧ್ ಫೋಟೋಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಈ ಬಗ್ಗೆ ನಟ ಅನಿರುದ್ಧ್ ಮಾತನಾಡಿ, ಇದೊಂದು ಸೌಹಾರ್ದಯುತ ಭೇಟಿ ಅಷ್ಟೇ.

## ತಲೈವಾ ಬಗ್ಗೆ ನಟ ಅನಿರುದ್ಧ್ ಮಾತು

ಅಮ್ಮ, ನಾನು, ನನ್ನ ಪತ್ನಿ ಹಾಗೂ ಮಕ್ಕಳು ಹೋಗಿ ಸ್ವಲ್ಪ ಹೊತ್ತು ರಜನಿಕಾಂತ್ ಜೊತೆ ಕಾಲ ಕಳೆದವು. ಅಪ್ಪಾಜಿ ಜೊತೆ ರಜನಿ ಸರ್ ಆತ್ಮೀಯ ಗೆಳತನ ಹೊಂದಿದ್ದರು. ಹಾಗೆಯೇ ಅಮ್ಮನ ಜೊತೆ ಒಳ್ಳೆಯ ಬಾಂಧವ್ಯ ಇದೆ. ಹಿಂದಿಯಲ್ಲಿ ರಜನಿ ಸರ್ ಹಾಗೂ ಅಮ್ಮ 'ಉತ್ತರ ದಕ್ಷಿಣ' ಸಿನಿಮಾದ ದಿನಗಳನ್ನು ಅವರು ನೆನಪಿಸಿಕೊಂಡರು. ಹಾಗೆಯೇ ಅಪ್ಪಾಜಿ ತೀರಿಕೊಂಡಾಗ ಅವರು ಮನೆಗೆ ಬಂದು ಹೋಗಿದ್ದೆ, ಮತ್ತೆ ಬರೋದಕ್ಕೆ ಆಗಿಲ್ಲ ಅಂದರು. ಜೊತೆಗೆ ನನ್ನ ಮಕ್ಕಳಿಗೆ ಆಶೀರ್ವಾದ ಮಾಡಿದರು. ಇದು ಜೀವನದಲ್ಲಿ ಮರೆಯದ ಕ್ಷಣ ಅಂತ ಅನಿರುದ್ಧ್ ಅವರು ತಲೈವಾ ಬಗ್ಗೆ ಹೇಳಿದರು.

ಅಂದಹಾಗೆ ರಜನಿಕಾಂತ್‌ಗೆ ಸಾಂಸ್ಕೃತಿಕ ನಗರಿ ಮೈಸೂರು ಅಂದರೆ ಪ್ರಾಣ. ಅವರ ಬ್ಲಾಕ್‌ಬಸ್ಟರ್ ಹಿಸ್ಟರಿ ನೋಡಿದರೆ, ಮೈಸೂರಿನಲ್ಲಿ ಶೂಟ್ ಆದ ಪ್ರತಿಯೊಂದು ಸೀನ್ ಹಾಗೂ ಸಾಂಗ್ ಸೂಪರ್ ಹಿಟ್ ಆಗಿದೆ. 'ಚಂದ್ರಮುಖಿ' ಸಿನಿಮಾದ ಅರಮನೆ ಸೀನ್‌ಗಳನ್ನು ಲಲಿತ ಮಹಲ್‌ನಲ್ಲಿ, 'ಲಿಂಗಾ' ಶೂಟಿಂಗ್ ಅನ್ನು ಅಂಬಾವಿಲಾಸ ಅರಮನೆ ಹಾಗೂ ಚಾಮುಂಡಿ ಬೆಟ್ಟದಲ್ಲಿ, ಜೊತೆಗೆ 'ಪಡೆಯಪ್ಪ', 'ರಾಜಾಧಿ ರಾಜ' ಹಾಗೂ ಇತ್ತೀಚಿನ 'ಜೈಲರ್ 2' ಶೂಟಿಂಗ್‌ಗೂ ಮೈಸೂರೇ ನೆಚ್ಚಿನ ತಾಣವಾಗಿತ್ತು. ಈಗ ಸೋಮನಾಥಪುರ ದೇಗುಲದಲ್ಲೂ 'ಧರ್ಮನ್' ಸಿನಿಮಾದ ಮೇಜರ್ ಸೀನ್ ಶೂಟ್ ಆಗಿದ್ದು, ಮೈಸೂರಿನಲ್ಲಿ ಶೂಟಿಂಗ್ ಅಂದರೆ ರಜನಿಕಾಂತ್ ಅವರಿಗೆ ಹಾಟ್ ಫೇವರಿಟ್ ಸ್ಪಾಟ್ ಆಗಿದೆ.

ವಿಷ್ಣುವರ್ಧನ್ ರಜನಿಕಾಂತ್ ಆತ್ಮೀಯ ಗೆಳೆಯರಾಗಿದ್ದರು. 'ಸಹೋದರರ ಸವಾಲ್', 'ಗಲಾಟೆ ಸಂಸಾರ', ತಮಿಳಿನಲ್ಲಿ 'ವಿಧುತಲೈ' ಸಿನಿಮಾ ಸೇರಿದಂತೆ ಹಲವು ಚಿತ್ರಗಳಲ್ಲಿ ರಜನಿಕಾಂತ್ ಹಾಗೂ ವಿಷ್ಣುವರ್ಧನ್ ಇಬ್ಬರೂ ಒಟ್ಟಿಗೆ ನಟಿಸಿರುವುದು ಇವರ ಸ್ನೇಹಕ್ಕೆ ಸಾಕ್ಷಿಯಾಗಿದೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news